-೩-

## ಭಜ ಭಗವಂತಮ್

ಮಹಾನುಭಾವರೇ ! ಈಗ ತಾವು ಮಕ್ಕಳು ಹಾಡಿದ ಭಜನೆಯನ್ನು ಕೇಳಿದಿರಿ. ಬಹಳ ಚೆನ್ನಾಗಿ ಆಯಿತು. ಸಂಗೀತದಲ್ಲಿ ಬಹಳ ಶಕ್ತಿ ಇದೆ. ಇದರ ಮೂಲ ಶಬ್ದ ಗೀತ. ಅದರಲ್ಲಿ 'ಸಂ' ಎಂಬ ಉಪಸರ್ಗ ಬಂದುದರಿಂದ ಅದು ಸಂಗೀತವಾಯಿತು. ಸಂಗೀತ ವಿಷಯದ ಮೇಲೆ ಅನೇಕ ಸಂಶೋಧನೆಗಳಾಗಿವೆ. ಜೈನ ಮುನಿಗಳು, ಆಚಾರ್ಯರೇ ಮೊದಲಾದವರು ಅನೇಕ ರಾಗಗಳಿಂದ ಕೂಡಿದ ರಚನೆಗಳನ್ನು ಮಾಡಿರುವರೆಂದು ಸಂಶೋಧಕರೇ ಹೇಳಿದ್ದಾರೆ. ಜೈನ ಮಂದಿರಗಳಲ್ಲಿ ಪೂಜಾ ಕಾಲದಲ್ಲಿ ವಾದ್ಯ ಯಂತ್ರ ಗಳನ್ನು ಬಾರಿಸುತ್ತಿದ್ದರೆಂದು ಶೋಧ ಗ್ರಂಥಗಳಲ್ಲೇ ಉಲ್ಲೇಖಗಳಿವೆ.

ಸಂಗೀತದ ಸರ್ವಾಧಿಕ ಪ್ರಚಲನೆ ಜೈನರ ಮನೆಗಳಲ್ಲಿ, ಜೈನ ಮಂದಿರಗಳಲ್ಲಿ ನಡೆ ಯುತ್ತಿತ್ತು. ಸಂಗೀತ ನಮ್ಮೆಲ್ಲರ ಮಿತ್ರ, ಸಹವರ್ತಿ. ಮನೆಯಲ್ಲಿ ಯಾರೂ ಇಲ್ಲದಾಗ, ನೀವೊಬ್ಬರೇ ಇದ್ದಾಗ, ಏಕಾಂತ ಸ್ಥಿತಿ ಉಂಟಾದರೆ ಭಜನೆಯ ಹಾಡುಗಳನ್ನು ಗುಣುಗುಣಿ ಸುತ್ತಾ ಇರಿ. ಆಗ ನಿಮಗೆ ಒಂದು ರೀತಿಯ ಆನಂದ ಪ್ರಾಪ್ತವಾಗುತ್ತದೆ. ಹಾಗೆಂದು ಭಜನೆ ಮಾಡಬೇಕಾದರೆ ಭಗವಂತನ ಪ್ರತಿಮೆಯ ಮುಂದೆ ಕುಳಿತೇ ಆಗಬೇಕೆಂದೇನಿಲ್ಲ, ನೀವು ಏಕಾಂತದಲ್ಲಿ, ಮನೆಯಲ್ಲಿ ಕೂಡಾ ಭಜನೆಯನ್ನು ಗುಣುಗುಣಿಸುತ್ತಿರಬಹುದು. ಅದರಿಂದ ಏಕಾಗ್ರತೆಯುಂಟಾಗುತ್ತದೆ. ಕರ್ಮಗಳ ನಿರ್ಜರೆಯಾಗುತ್ತದೆ. ಜೈನಾಚಾರ್ಯರು ಸಂಗೀತದ ವಿಚಾರದಲ್ಲಿ ಬಹಳ ವರ್ಣನೆ, ವಿವೇಚನೆ ಮಾಡಿದ್ದಾರೆ.

ಸಂಗೀತದಲ್ಲಿ ಅದ್ಭುತ ಶಕ್ತಿಯಿದೆ. ಮಗು ಅಳುತ್ತಿದ್ದರೆ ತಾಯಿಯಾದವಳು ಯಾವು ದೋ ಜೋಗುಳ ಹಾಡುತ್ತಾಳೆ. ಮಗು ಸುಮ್ಮನಾಗಿಬಿಡುತ್ತದೆ, ಆಮೇಲೆ ಮಲಗಿ ಬಿಡು ತ್ತದೆ. ಕುಂದಕುಂದಾಚಾರ್ಯರು ಚಿಕ್ಕ ಬಾಲಕರಿದ್ದಾಗ ಅವರ ತಾಯಿ ಅವರನ್ನು ಆಡಿಸು ತ್ತಿದ್ದಾಗ, ತೊಟ್ಟಿಲಲ್ಲಿ ತೂಗುತ್ತಿದ್ದಾಗ, ಹೀಗೆ ಜೋಗುಳ ಹಾಡುತ್ತಿದ್ದರೆಂದು ಹೇಳುತ್ತಾರೆ.-

**ಶುದ್ಧೋಸಿ ಬುದ್ಧೋಸಿ ನಿರಂಜನೋಸಿ, ಸಂಸಾರಮಾಯಾ ಪರಿವರ್ಜಿತೋಸಿ ।**
**ಶರೀರ ಭಿನ್ನಸ್ತ್ಯಜ ಸರ್ವಚೇಷ್ಟಾ, ಶಾಂತಾಹಲ ಸಾವಾಕ್ಯಮುಪಾಸಿ ಪುತ್ರ ॥**

ಹೇ ಬಾಲಕ ಕುಂದಕುಂದ, ನಿನ್ನ ಆತ್ಮನು ಸಿದ್ಧ ಭಗವಾನ್, ನಿನ್ನ ಆತ್ಮನು ಸ್ವಯಂ ಬುದ್ಧ ನಿರಂಜನ. ನೀನು ಜನನ-ಮರಣದಿಂದ ಮುಕ್ತನಾಗು. ಇದೇ ನನ್ನ ಪ್ರಾರ್ಥನೆ. ಈ ಸಂಸಾರವೆಂಬುದು ಮಾಯೆ. ಮೋಹವನ್ನು ಹೆಚ್ಚಿಸುವಂಥಾದ್ದು. ಸ್ವಪ್ನಕ್ಕೆ ಸಮಾನವಾದುದು, ಇದನ್ನು ಬಿಟ್ಟುಬಿಡು. ಹೋಗು, ಆಧ್ಯಾತ್ಮದಲ್ಲಿ ರಮಿಸು. ದ್ರವ್ಯ ದೃಷ್ಟಿಯಿಂದ ನಿನ್ನ ಆತ್ಮನು ಸಿದ್ಧ ಸಮಾನನು.



ಇಂದಿನದು ಶೃಂಗಾರ ಯುಗ. ಅನೇಕ ರೀತಿಯ ಆರ್ಭಟದ ರಾಕ್ಷಸೀ ರಾಗಗಳು ಕೇಳಿಬರುತ್ತಿವೆ. ಎಲ್ಲರೂ ಅಂಥವುಗಳನ್ನೇ ಹಾಡುತ್ತಿರುತ್ತಾರೆ. ಶಾಸ್ತ್ರೀಯ ಸಂಗೀತದಲ್ಲಿ, ರಾಗ-ರಾಗಿನಿಗಳಲ್ಲಿ ಬಹಳಷ್ಟು ಶಕ್ತಿ ನಿಹಿತವಾಗಿದೆ. ಮೇಘ ರಾಗದಿಂದ ಮೋಡಗಳು ಹಬ್ಬಿಕೊಳ್ಳುತ್ತಿದ್ದವು, ಮಳೆ ಬರುತ್ತಿತ್ತು. ದೀಪಕ್ ರಾಗದಿಂದ ದೀಪ ಉರಿಯುತ್ತಿತ್ತು. ರಾಗ-ರಾಗಿನಿಗಳನ್ನು ಹಾಡಲು ಸಮಯದ ನಿಶ್ಚಿತತೆಯಿದೆ. ಅದಕ್ಕನುಸಾರವಾಗಿಯೇ ಸ್ತುತಿ-ಪೂಜೆ ಇತ್ಯಾದಿಗಳನ್ನು ಹಾಡಲಾಗುತ್ತದೆ. ಪ್ರಾತಃಕಾಲ ಸೂರ್ಯೋದಯದ ಹೊತ್ತಿ ನಲ್ಲಿ ಭಗವಂತನ ಸ್ತುತಿಯನ್ನು ಉದಯರಾಗದಲ್ಲಿ ಹಾಡಲಾಗುತ್ತದೆ. ಸಂಧ್ಯಾಕಾಲದಲ್ಲಿ ಯಮನ್ ರಾಗದಲ್ಲಿ ಆರತೀ ಪದ್ಯಗಳನ್ನು ಹಾಡುವುದು ರೂಢಿ. ಪಂಡಿತ್ ಆಶಾಧರ ಸೂರಿಯವರು ಎಂಟು ನೂರು ವರ್ಷಗಳ ಹಿಂದೆಯೇ ಸಂಸ್ಕೃತ ಭಾಷೆಯಲ್ಲಿ ಭಗವಾನ್ ಋಷಭದೇವರ ಯಮನ್ ರಾಗದಲ್ಲಿ ಹಾಡುವ ಹಾಡುಗಳನ್ನು ಹೀಗೆ ಬರೆದ್ದಾರೆ;-

**ಜಯ ಮಂಗಲಂ ನಿತ್ಯ ಶುಭ ಮಂಗಲಮ್ ।**
**ಜಯ ವಿಮಲ ಗುಣ ನಿಲಯ ಪುರುದೇವ ತೇ ॥**

ನಮ್ಮಲ್ಲಿ ರಾಗ-ರಾಗಿನಿಯರೊಂದಿಗೆ ಸ್ತುತಿ, ಸ್ತೋತ್ರ ಭಜನೆ ಇತ್ಯಾದಿಗಳನ್ನೂ ಹಾಡು ತ್ತಿರುತ್ತಾರೆ. ಆಚಾರ್ಯರು ಶರೀರಕ್ಕೆ ಗಾತ್ರವೀಣೆ ಎಂದರು. ಯಾವ ಕಂಠದಿಂದ ಧ್ವನಿ ಹೊರಡುತ್ತದೋ ಅದು ತಂತು ವಾದ್ಯವಾಯಿತು. ಎಲ್ಲ ಆಚಾರ್ಯರಿಗೂ ಸಂಗೀತದ ಜ್ಞಾನವಿತ್ತು. ಎಲ್ಲರೂ ತಮ್ಮ ಗ್ರಂಥಗಳಲ್ಲಿ ಸಂಗೀತದ ಬಗ್ಗೆ ನಡೆದ ಚರ್ಚೆಯನ್ನು ಉಲ್ಲೇ ಖಿಸಿರುವರು. ಪಂಡಿತ್ ಆಶಾಧರ ಸೂರಿ ಹೀಗೆ ಬರೆದರು;-

**ಭಜ ಭಗವಂತಂ ಪ್ರಥಮಾರ್ಹಂತಂ ।**
**ವೃಷಭವರಂ ತಂ ಮೋಕ್ಷಮತೇ ॥**

ಹೇ ಮೋಕ್ಷಮತೇ, ನೀನು ಅರ್ಹಂತನ ಭಜನೆ ಮಾಡು. ಅದರಿಂದ ಕಲ್ಯಾಣ ವಾಗುತ್ತದೆ. ಅವರು 'ಮೋಕ್ಷಮತೇ' ಎಂದು ಸಂಬೋಧಿಸಿದರು. ಮತ್ತೆ ಹೇಳಿದರು- ''ಸ್ವಲ್ಪ ತಡವಾದರೂ ಚಿಂತೆ ಇಲ್ಲ ಭಗವಂತನನ್ನು ನೆನಪಿಸು, ಇಲ್ಲವಾದರೆ ಈ ಸಂಸಾರ ದಲ್ಲಿ ರಮಿಸುತ್ತಾ ನೀನು ಭಗವಂತನನ್ನೇ ಮರೆತುಬಿಡುವೆ.''

ನಮ್ಮ ಸಂಸ್ಕೃತಿಯಲ್ಲಿ ಸಂಗೀತಕ್ಕೆ ಬಹಳ ಮಹತ್ವವಿದೆ. ಪಶುಗಳ ಕೊರಳಿಗೆ ಗಂಟೆ ಕಟ್ಟುತ್ತಾರೆ. ಕಾಲುಗಳಿಗೆ ಗೆಜ್ಜೆ ಕಟ್ಟುತ್ತಾರೆ. ಆಗ ಆ ಮಧುರ ಸಂಗೀತಮಯ ನಾದವನ್ನು ಕೇಳಿದ ಆ ಪ್ರಾಣಿಗಳು ಕೂಡಾ ಅದರಲ್ಲಿ ಮಗ್ನವಾಗಿಬಿಡುತ್ತವೆ. ಅದರಿಂದಾಗಿ ಅವುಗಳಿಗೆ ದಾರಿ ಸಾಗಿದುದೇ ತಿಳಿಯುವುದಿಲ್ಲ. ಸಮಯ ಸಾಗಿದುದೂ ಗೊತ್ತಾಗುವುದಿಲ್ಲ. ಹಾವಿ ನಂತಹ ವಿಷಧರ ಜಂತುಗಳು ಕೂಡಾ ವೀಣೆಯ ನಾದಕ್ಕೆ ಕ್ರೋಧಾದಿಗಳನ್ನು ಮರೆತು ತಲೆಯಲ್ಲಾಡಿಸುತ್ತವೆ. ಕುಣಿಯಲು ಪ್ರಾರಂಭಿಸುತ್ತವೆ. ನೀವು ಕೂಡಾ ಸಂಗೀತದೊಂದಿಗೆ ಭಗವಂತನ ಭಜನೆ ಮಾಡಲು ಅಥವಾ ಗುಣುಗುಣಿಸಲು ತೊಡಗಿದಿರೆಂದಾದರೆ ಕ್ರೋಧ

ವನ್ನು ಬಿಟ್ಟೇಬಿಡುವಿರಿ, ಮಾನವನ್ನು ಮರೆತುಬಿಡುವಿರಿ, ಮಾಯಾ ಮತ್ತು ಲೋಭಾದಿಗಳನ್ನು ತ್ಯಾಜ್ಯ ಮಾಡಬಲ್ಲಿರಿ. ಸಂಗೀತ ಸಮಯಸಾರದಲ್ಲಿ ಸಂಗೀತದ ವಿಸ್ತಾರವಾದ ವರ್ಣನೆ ಸಿಗುತ್ತದೆ. ಅದು ಹೀಗಿದೆ ;-

**ನಾಭೇಸ್ಸಮುದಿತೋ ವಾಯುಃ ಕಂಠಶೀರ್ಷಸಮಾಹತಃ ।**
**ಋಷಭವಿನದ್ದೇ ಯಸ್ಮಾತ್ತಸ್ಮಾದ್ ಋಷಭಯಾರಿತಃ ॥**

ಇದರಲ್ಲಿ ಸಪ್ತ ಸ್ವರಗಳ ಉತ್ಪತ್ತಿಯ ವಿಚಾರವಾಗಿ ಹೇಳಲಾಗಿದೆ. ಯಾವ ಗೀತೆಯು ಶೃಂಗಾರ ಪ್ರಧಾನವಾಗಿರುತ್ತದೋ ಅದು ಕುಸಂಗೀತ ಮತ್ತು ಯಾವುದು ತತ್ತ್ವಜ್ಞಾನದಿಂದ, ಆಧ್ಯಾತ್ಮದಿಂದ ಯುಕ್ತವಾಗಿರುವ ಭಗವಂತನ ಭಜನೆಯಾಗಿರುತ್ತದೋ ಅದು ಸುಸಂಗೀತ. ಯಾವುದರಲ್ಲಿ ಕೇವಲ ಶಾರೀರಿಕ ಸೌಂದರ್ಯದ ವರ್ಣನೆಯಿರುತ್ತದೋ, ಅದು ಕುಸಂಗೀತ. ನಮ್ಮ ಶಾಸ್ತ್ರಗಳಲ್ಲಿ ಕೂಡಾ ಶೃಂಗಾರ ರಸದ ಆಧಾರವಿದೆ. ಆದರೆ ಕೊನೆಗೆ ಶಾಂತರಸದಲ್ಲಿ ಕೊನೆಗೊಳಿಸಲಾಗುತ್ತದೆ. ಇಂತಹ ರಸಗಳು ಒಂಬತ್ತಿರುತ್ತವೆ. ಎಂಟು ರಸಗಳ ವರ್ಣನೆಯಾದರೋ ಎಲ್ಲ ಸಾಹಿತ್ಯದಲ್ಲೂ ದೊರಕುತ್ತವೆ. ಆದರೆ ಶಾಂತ ರಸದ ಬಗ್ಗೆ ಅಧಿಕ ವರ್ಣನೆ ಸಿಗುವುದು ಜೈನ ಶಾಸ್ತ್ರಗಳಲ್ಲಿ ಮಾತ್ರ. ನಮ್ಮಲ್ಲಿ ಭಜನೆ, ಶ್ಲೋಕ, ಕಾವ್ಯ, ಸಿದ್ಧಾಂತ ಗ್ರಂಥ ಹೀಗೆ ಎಲ್ಲವುಗಳ ಅಂತ್ಯವನ್ನು ಶಾಂತರಸದಲ್ಲೇ ಮಾಡಲಾಗಿದೆ. ನಮಗೆ ಸಂಗೀತದೊಂದಿಗೆ ಭಜನೆ ಹಾಡಬೇಕಾಗುತ್ತದೆ, ಅದನ್ನು ಗುಣುಗುಣಿಸಬೇಕಾಗುತ್ತದೆ. ನಾವು ಸಂಗೀತವನ್ನು ಹೇಯವೆಂದು ಬಿಟ್ಟುಬಿಟ್ಟಿದ್ದೇವೆ. ಅದು ಉತ್ತಮ ಮನೆತನಕ್ಕೆ ಯೋಗ್ಯವಲ್ಲವೆಂಬ ಭಾವನೆ ಬಂದುಬಿಟ್ಟಿದೆ. ಅದರ ಬಗ್ಗೆ ಗ್ರಂಥಗಳಲ್ಲಿ ಕೆಲವು ಉಲ್ಲೇಖಗಳು ಹೀಗಿವೆ- ''ಭರತ ಚಕ್ರವರ್ತಿಯ ಮನೆಯಲ್ಲಿ ಯಾವಾಗ ಮುನಿ ಮಹಾರಾಜರ ಆಹಾರವಾಯಿತೋ, ಆಗ ಆಹಾರ ಸ್ವೀಕಾರವು ನಿರ್ವಿಘ್ನವಾಗಿ ಪೂರ್ಣಗೊಂಡಾಗ, ಅದರಿಂದ ಆನಂದಿತರಾದ ಭರತ ಚಕ್ರವರ್ತಿಯ ರಾಣಿಯರು ಭಕ್ತಿಯಿಂದ ಮುನಿಮಹಾರಾಜರ ಭಜನೆ ಹಾಡಿದರು. ಆದುದರಿಂದ ಸುಸಂಗೀತ ಗಾಯನವು ಹೇಯವಲ್ಲ. ನಾವು ಮಹಿಳೆಯರಿಗೆ ವಿಶೇಷ ರೂಪದಿಂದ ಈಗಲೂ ಹೇಳುವುದೇನೆಂದರೆ ಸಮಯ ಸಿಕ್ಕಿದಾಗ ಅವರು ಭಜನೆ ಹಾಡುತ್ತಿರಬೇಕು, ಗುಣುಗುಣಿಸುತ್ತಿರಬೇಕು. ನಾವು ನಿತ್ಯವೂ ಹೀಗೆ ಹೇಳುವುದುಂಟು-

**ಉದಕ-ಚಂದನ-ತಂದುಲ-ಪುಷ್ಪಕೈಶ್ಚರು-ಸುದೀಪ-ಸುಧೂಪ-ಫಲಾರ್ಘ್ಯ ಕೈಃ ।**
**ಧವಲ-ಮಂಗಲ-ಗಾನ-ರವಾಂಕುಲೇ, ಜಿನಗೃಹೇ-ಜಿನನಾಥಮಹಂ ಯಜೇ ॥**

''ಧವಲ ಮಂಗಲ ಗಾನ ರವಾಂಕುಲೇ'' ಎಂಬುದರ ಅರ್ಥವೇನೆಂದರೆ ರಾಗ-ರಾಗಿನಿಗಳ ಜೊತೆ, ಭಾವದ ಜೊತೆ, ಸಂಗೀತದೊಂದಿಗೆ ಮಂಗಲ ಗಾನ, ಭಜನೆ ಹಾಡಿದಿರಾದರೆ ಮನಸ್ಸು ರಮಿಸುತ್ತದೆ.

ಮಂದಿರದಲ್ಲಿ ಯಾರಾದರೂ ಕೋಮಲ ಸ್ವರದಿಂದ ಶ್ಲೋಕಗಳನ್ನು ಹೇಳಿ ಪೂಜೆ



ಮಾಡುತ್ತಾರಾದರೆ, ಭಜನೆ ಹಾಡುತ್ತಾರಾದರೆ ಇತರ ಕೇಳುಗರ ಮನಸ್ಸು ಕೂಡಾ ಅದರಲ್ಲಿ ತೊಡಗಿಕೊಳ್ಳುತ್ತದೆ. ಮಂದಿರವು ಸುಸಂಗೀತದ ಮನೆ. ಸಂಗೀತದಿಂದ ಮನೆಯು ಪವಿತ್ರವಾಗುತ್ತದೆ. ವಾಯುಮಂಡಲವು ಧರ್ಮಮಯವಾಗುತ್ತದೆ. ಸಂಗೀತದಿಂದ ಪ್ರಕೃತಿ ಕೂಡಾ ಪ್ರಭಾವಿತವಾಗುತ್ತದೆ. ಶ್ರೀ ಕೃಷ್ಣನು ಕಾಡಿನಲ್ಲಿ ಕೊಳಲು ಬಾರಿಸುತ್ತಿದ್ದಾಗ ಒಣಗಿದ ಮರಗಳಲ್ಲೂ ಚಿಗುರೆಲೆಗಳು ಚಿಗುರುತ್ತಿದ್ದವಂತೆ. ಸ್ವಲ್ಪ ಸಮಯದ ಹಿಂದೆ ದಕ್ಷಿಣ ಭಾರತದ ಒಂದು ವಿಶ್ವವಿದ್ಯಾಲಯದಲ್ಲಿ ಸಂಗೀತದ ಪ್ರಭಾವದಿಂದ ಸಣಬು ಮತ್ತು ನೆಲಗಡಲೆಯ ಬೆಳೆಯಲ್ಲಿ ವೃದ್ಧಿಯುಂಟಾದುದು ಕಂಡುಬಂದಿದೆ. ಪೋಲೆಂಡು ಹಾಗೂ ಇಂಗ್ಲೆಂಡಿನಲ್ಲಿ ಸಂಗೀತದ ಮಾಧ್ಯಮದಿಂದ ಹಸುಗಳಲ್ಲಿ ಹಾಲಿನ ವೃದ್ಧಿಯುಂಟಾದುದು ಕೂಡಾ ದೃಢಪಟ್ಟಿದೆ.

ಶ್ರೀ ಕೃಷ್ಣನ ವಿಚಾರವಾಗಿ ಹೇಳುವುದಾದರೆ ಒಮ್ಮೆ ಅವನು ಕಾಡಿನಲ್ಲಿ ಕೊಳಲು ಬಾರಿಸುತ್ತಿದ್ದನಂತೆ. ಕಾಡಿನಲ್ಲಿ ಬೆಂಕಿ ಹತ್ತಿಕೊಂಡಿತ್ತು. ಕೊಳಲಿನ ಮಧುರ ಸಂಗೀತದಿಂದ ಕಾಡಿನಲ್ಲಿದ್ದ ಮರಗಳು ಹಸಿರು-ಹಸಿರಾಗಿ ಹೋದುವು. ಸುತ್ತಮುತ್ತಲೂ ನೀರು ಹರಿಯ ತೊಡಗಿತ್ತು, ಬೆಂಕಿ ನಂದಿಹೋಯಿತು, ಜನರು ಆಶ್ಚರ್ಯಚಕಿತರಾದರು. ಆಗ ಒಬ್ಬ ಕುತರ್ಕಿ ಹೀಗೆ ಕೇಳಿದನಂತೆ- ''ನಿನ್ನ ಕೊಳಲಿನ ನಾದದಿಂದ ಕಾಡೆಲ್ಲಾ ಹಸುರಾಗಿ ಹೋಯಿತು. ಮರಗಳ ಎಲೆಗಳು ಚಿಗುರಿದವು. ಆದರೆ ನಿನ್ನ ಬಿದುರಿನ ಕೊಳಲು ಚಿಗುರದೆ ಹೇಗೆ ಉಳಿಯಿತು ?'' ಅದಕ್ಕೆ ಶ್ರೀಕೃಷ್ಣನ ಉತ್ತರ ಹೀಗಿತ್ತು. ''ಕೊಳಲಿನಲ್ಲಿ ರಂಧ್ರಗಳಿವೆ. ಅದರಿಂದ ಸಂಪೂರ್ಣ ಸಂಗೀತ ಹೊರಗೆ ಹೊರಟಿತು. ಆದರೆ ಮರಮಟ್ಟುಗಳ ಶಾಖೆಗಳು ಸಂಗೀತವನ್ನು ಹೀರಿಕೊಂಡವು, ಗ್ರಹಣ ಮಾಡಿಕೊಂಡವು. ಕೊಳಲಿಗೆ ಹಾಗೆ ಹೀರಿಕೊಳ್ಳಲು ಸಾಧ್ಯವಾಗಲಿಲ್ಲ. ಆದುದರಿಂದ ಮರಗಳು ಚಿಗುರೊಡೆದವು, ಕೊಳಲು ಧ್ವನಿ ಹೊರಡಿಸಿತು.'' ಇದೇ ರೀತಿ ನೀವು ಕೂಡಾ ಕಿವಿಗಳಿಂದ ಶಾಸ್ತ್ರ ಕೇಳುತ್ತೀರಿ ಆದರೆ ಧರ್ಮವನ್ನು, ತತ್ತ್ವಜ್ಞಾನವನ್ನು ಕಿವಿಗಳಿಂದ ಕೇಳಿ ಬಿಟ್ಟುಬಿಡುವುದಾದರೆ ನೀವು ಕೂಡಾ ಆ ಕೊಳಲಿನ ಹಾಗೇ ಆಗಿಬಿಡುತ್ತೀರಿ, ಮರಗಳಾಗುವಂತಿಲ್ಲ. ಆದ ಕಾರಣ ಭಾವ ಪೂರ್ವಕ ಓದಿರಿ, ಹಾಡಿರಿ, ರಾಗ-ರಾಗಿನಿಯರೊಡನೆ ಸುಸಂಗೀತ ಭಜನೆ ಮಾಡಿರಿ.

ಒಂದು ಕಡೆ ನದಿಯನ್ನು ದಾಟಿ ಹೋಗಬೇಕಾಗಿದ್ದ ಮಂದಿರ ಒಂದರಲ್ಲಿ ಪಂಚ ಕಲ್ಯಾಣ ಮಹೋತ್ಸವ ನಡೆಯುತ್ತಿತ್ತು. ಅಲ್ಲಿ ನೋಡಿದರೆ ಸಿನೆಮಾ ಹಾಡುಗಳ ವಾದ್ಯ ಸಂಗೀತ. ಅವುಗಳನ್ನು ಕೇಳಿ ನಮ್ಮ ಮನಸ್ಸಿಗೆ ಬಹಳ ವೇದನೆಯಾಯಿತು. ಧಾರ್ಮಿಕ ಸಮಾರೋಪ ಸಮಾರಂಭದಲ್ಲಿ ಅದೇ ಫಿಲ್ಮಿನ ಹಾಡುಗಳು, ಕುಸಂಗೀತ ಸುಮಾರು ಎಂಬತ್ತರಷ್ಟು ಭಜನೆ ಹಾಡುಗಳೂ ಇದ್ದವು. ಆದರೆ ಎಲ್ಲವೂ ರೆಕಾರ್ಡ್‌ಗಳು, ಧ್ವನಿ ಸುರುಳಿಗಳು. ಈಗ ದೇಶದ ಮೂಲೆ ಮೂಲೆಗಳಲ್ಲೂ ಧಾರ್ಮಿಕ ಸಮಾರೋಪ ಸಮಾರಂಭಗಳಲ್ಲಂತೂ ಅದೇ ರೆಕಾರ್ಡುಗಳು, ಅದೇ ಭಜನೆಗಳು. ವಾದ್ಯಗಳ ಮೂಲಕವೂ ಅದೇ ರೀತಿಯ ಹಾಡುಗಳು. ಶಾಸ್ತ್ರೀಯವಾಗಿ ಬಾರಿಸಲು ಬರುವವರು ಕೂಡಾ ಅದೇ

ರೀತಿಯ ಹಾಡುಗಳನ್ನು, ಅದೇ ರೀತಿಯ ಭಜನೆಗಳನ್ನು ತಮ್ಮ ವಾದ್ಯದಲ್ಲಿ ನುಡಿಸುತ್ತಾರೆ.

ಭಜನೆಗಳಲ್ಲಿ ನಮ್ಮ ಇತಿಹಾಸ, ನಮ್ಮ ತತ್ತ್ವಜ್ಞಾನ ಅಂಕಿತಗೊಂಡಿದೆ. ನೇಮಿ ರಾಜುಲ್ ಅವರ ಕಥೆ ಮತ್ತು ಅದರ ಸಿದ್ದಾಂತ ಕೂಡಾ ಭಜನೆಗಳ ಮಾಧ್ಯಮದಿಂದ ತಿಳಿಯಲಾಗುತ್ತದೆ. ಪಶು-ಪಕ್ಷಿಗಳು ಸಹ ಸಂಗೀತದಿಂದ ಪ್ರಭಾವಿತವಾಗುತ್ತವೆ. ಸಂಗೀತ ಕೇಳಿದ ಹರಿಣ (ಜಿಂಕೆ) ತನ್ನ ಮುಖವನ್ನು ಹುಲ್ಲು ಕಡ್ಡಿಗಳ ಮಧ್ಯೆ ಅಡಗಿಸಿ ಮಂತ್ರಮುಗ್ಧವಾಗಿ ನಿಂತು ಬಿಡುತ್ತದೆ. ಆಹಾರ ಸೇವನೆಯನ್ನು ಕೂಡಾ ಬಿಟ್ಟುಬಿಡುತ್ತದೆ. ಸಂಗೀತದಲ್ಲಿ ನಾವು ಕಲ್ಪಿಸಲಾಗದಂತಹ ಅದ್ಭುತ ಶಕ್ತಿಯಿದೆ. ಆದರೆ ಸಂಗೀತದಲ್ಲಿ ಆಧ್ಯಾತ್ಮಿಕ ಮತ್ತು ವೀತರಾಗ ಭಜನೆಯೇ ನಮಗೆ ಹಿತಕಾರಿಯಾದುದು.

ನಾವು ಐದು ಇಂದ್ರಿಯಗಳ ಸ್ವಾಮಿಯಾಗಿದ್ದೇವೆ. ಒಂದೊಂದು ಇಂದ್ರಿಯದ ವಿಷಯದಲ್ಲಿ ಸಿಲುಕಿಕೊಂಡು ಪ್ರಾಣಿಗಳು ದುರ್ಗತಿ ಹೊಂದುತ್ತವೆ. ಘ್ರಾಣೇಂದ್ರಿಯದ ಕಾರಣದಿಂದ ಭ್ರಮರವು ಕಮಲದ ಹೂವಿನಲ್ಲಿ ಸಿಲುಕಿಕೊಳ್ಳುತ್ತವೆ. ಚಕ್ಷು ಇಂದ್ರಿಯದ ಕಾರಣದಿಂದ ಪತಂಗವು ದೀಪದ ಬೆಂಕಿಯಲ್ಲಿ ಉರಿದು ಸತ್ತು ಹೋಗುತ್ತದೆ. ಸ್ಪರ್ಶನ ಇಂದ್ರಿಯದ ಲೋಭದಿಂದ ಆನೆ ಖೆಡ್ಡದಲ್ಲಿ ಸಿಲುಕಿ ಸತ್ತುಹೋಗುತ್ತದೆ. ರಸನೇಂದ್ರಿಯದ ಕಾರಣದಿಂದ ಮೀನು ಗಾಳದಲ್ಲಿ ಸಿಕ್ಕಿ ಸಾಯುತ್ತದೆ ಮತ್ತು ಕರ್ಣೇಂದ್ರಿಯದ ಕಾರಣದಿಂದ ಹಾವು ಹಿಡಿಯಲ್ಪಡುತ್ತದೆ.

ಒಬ್ಬ ದರೋಡೆಕೋರನನ್ನು ಐದು ಮಂದಿ ಸಿಪಾಯಿಗಳು ಹಿಡಿದುಕೊಂಡು ಹೋಗುತ್ತಿದ್ದರು. ದರೋಡೆಕೋರ ಸ್ವಯಂ ಶಕ್ತಿಶಾಲಿಯಾಗಿದ್ದ. ಆದರೆ ಅವನು ಐದು ಮಂದಿ ಸಿಪಾಯಿಗಳ ಬಂಧನದಲ್ಲಿ ಬಂಧಿಸಲ್ಪಟ್ಟಿದ್ದ. ಸಿಪಾಯಿಗಳು ಅವನನ್ನು ಎಲ್ಲಿಗೆ ಕೊಂಡು ಹೋಗುತ್ತಾರೋ ಅಲ್ಲಿಗೆ ಆತ ಹೋಗುತ್ತಿದ್ದ. ಇದೇ ರೀತಿ ನಮ್ಮ ಐದು ಇಂದ್ರಿಯಗಳೂ ಮನಸ್ಸನ್ನು ದರೋಡೆಕೋರರನ್ನಾಗಿ ಮಾಡಿ ಅವು ಎಲ್ಲಿಗೆ ಕೊಂಡೊಯ್ಯುತ್ತವೋ ಅಲ್ಲಿಗೆ ಹೋಗುತ್ತವೆ ಮತ್ತು ನಾವು ಕೂಡಾ ಹಾಗೆಯೇ ಎಳೆಯಲ್ಪಡುತ್ತೇವೆ.

ಒಬ್ಬ ರಾಜನು ಎಲ್ಲಿಗೆ ಹೋಗಬೇಕಾದರೂ ಅವನೊಂದಿಗೆ ಐದು ಜನ ಸಿಪಾಯಿಗಳೂ ಅಂಗರಕ್ಷಕರಾಗಿ ಇರುತ್ತಿದ್ದರು. ಆ ಸಿಪಾಯಿಗಳು ರಾಜನು ನೀಡುವ ಸಂಕೇತದಂತೆ ನಡೆಯುತ್ತಿದ್ದರು. ರಾಜನು ನಡೆದಂತೆ ನಡೆಯುವುದು, ರಾಜನು ಸೂಚನೆ ಕೊಟ್ಟಂತೆ ಕೆಲಸ ಮಾಡುವುದು. ಈ ಕ್ರಮ ನಡೆಯುತ್ತಿತ್ತು. ನೀವು ಕೂಡಾ ಹಾಗೆಯೇ ಮನಸ್ಸನ್ನು ರಾಜನನ್ನಾಗಿ ಮಾಡಿಕೊಂಡು ಆ ಮನಸ್ಸು ಕೊಡುವ ಸಂಕೇತದಂತೆ ಇಂದ್ರಿಯಗಳು ನಡೆಯುವ ಹಾಗೆ ಮಾಡಿರಿ. ಹಾಗಲ್ಲದೆ ಇಂದ್ರಿಯಗಳು ಹೇಳಿದಂತೆ ಮನಸ್ಸು ಚಲಿಸುವ ಹಾಗೆ ಮಾಡಬೇಡಿ.

ಹಾಗಲ ಕಾಯಿಯೇ ಕಹಿಯಾಗಿರುತ್ತದೆ. ಇನ್ನು ಅದಕ್ಕೆ ಬೇವು ಸೇರಿಸಿದರೆ ಹೇಗೆ? ಅಷ್ಟೇ ಅಲ್ಲ, ಒಂದು ವೇಳೆ ಬೇವಿನ ಎಣ್ಣೆಯಲ್ಲೆ ಯಾವುದೇ ವಸ್ತು ತಯಾರಿಸಲ್ಪಟ್ಟರೆ



ಅದನ್ನು ತಿನ್ನುವವರು ಯಾರು ? ಇಂದ್ರಿಯಗಳು ಮೊದಲೇ ಸಂಸಾರದಲ್ಲಿ ಸಿಲುಕಿಕೊಂಡಿರುತ್ತವೆ ಮತ್ತು ಹಿಂಸಾತ್ಮಕ ಪ್ರಸಾಧನಗಳಿಂದ ಅವುಗಳನ್ನು ಇನ್ನೂ ಶೃಂಗಾರಗೊಳಿಸಿದರೆ ಪರಿಸ್ಥಿತಿ ಏನಾಗಬೇಕು ? ಇದೊಂದು ವಿಷಯ ನಿಮಗೆ ತಿಳಿದಿರಲಿ. ಅದೇನೆಂದರೆ ಸೌಂದರ್ಯ-ಪ್ರಸಾಧನಗಳ ತಯಾರಿಕೆಗಾಗಿ ಒಂದು ಜಾತಿಯ ಬೆಕ್ಕುಗಳನ್ನು ಹಿಡಿದು ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿಹಾಕಿ ಕೊಲ್ಲಲಾಗುತ್ತದೆ. ಅವುಗಳ ಬೆವರಿನಲ್ಲಿ ಒಂದು ಬಗೆಯ ವಿಚಿತ್ರ ಸುವಾಸನೆಯಿರುತ್ತದೆ. ಆ ಬೆವರನ್ನು ಸಂಗ್ರಹಿಸಿ ಬಾಟ್ಲಿಗಳಲ್ಲಿ ತುಂಬಿಸಿ ಭದ್ರವಾಗಿರಿಸಿ ಅತಿಯಾದ ಬೆಲೆಗೆ ಮಾರಾಟ ಮಾಡಲಾಗುತ್ತದೆ. ಅದನ್ನೇ ಹಾಕಿಕೊಂಡು ನೀವು ಸುಗಂಧ ಲೇಪನ ಸುಖ ಪಡುತ್ತೀರಿ. ಇನ್ನು ಲಿಪ್‌ಸ್ಟಿಕ್‌ನಲ್ಲಿ ಮಿಶ್ರಣ ಮಾಡುವ ವಸ್ತುವೇ ಮೀನಿನ ರಕ್ತ. ಸೌಂದರ್ಯ ವೃದ್ಧಿಗಾಗಿ ಈ ರೀತಿ ಎಷ್ಟೋ ಮೂಕ ಪಶುಗಳ ಮೇಲೆ ನಾನಾ ರೀತಿಯ ಅತ್ಯಾಚಾರ ನಡೆಸಲ್ಪಡುತ್ತದೆ.

ನಾವು ಅಹಿಂಸಕ ಸಂಸ್ಕೃತಿಯ ಜನರು. ಇಂತಹ ಮೂಕ ಪಶುಗಳ ಮೇಲೆ ನಡೆಯುತ್ತಿರುವ ಅತ್ಯಾಚಾರದಿಂದ ನಾವು ಸುಖಿಗಳಾಗಿರಲು ಸಾಧ್ಯವೇ ಇಲ್ಲ. ಬಟ್ಟೆ ಹೊಲಿಯುವಾಗ ಬೆರಳಿಗೆ ಸೂಜಿ ಚುಚ್ಚಿಕೊಂಡರೆ ನೀವು ಅಯ್ಯೋ ಎಂದು ಬಾಯಲ್ಲಿ ಬೊಬ್ಬೆ ಇಡುತ್ತೀರಿ. ತರಕಾರಿ ಹೆಚ್ಚುವಾಗ ಚೂರಿಯಿಂದ ಬೆರಳು ಕೊಯ್ದುಹೋದರೆ ರಕ್ತ ಹೋಗದಂತೆ ಅದಕ್ಕೊಂದು ಪಟ್ಟಿ ಕಟ್ಟುತ್ತೀರಿ. ಒಂದು ಸೊಳ್ಳೆ ಕಚ್ಚಿದರೆ ಸಾಕು ಅದನ್ನು ನಿಮಗೆ ಸಹಿಸಿಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಸಣ್ಣ ಪುಟ್ಟ ಆತಂಕಗಳು ಬಂದರೂ ನಿಮಗೆ ಬಹಳ ವೇದನೆಯಾಗುತ್ತದೆ. ಈಗ ಆ ಮೂಕ ಪ್ರಾಣಿಗಳನ್ನು ಯೋಚಿಸಿ, ಆ ಪ್ರಾಣಿಗಳ ಬಗ್ಗೆ ಹಿಂದೆ ಮುಂದೆ ನೋಡದೆ ಅವುಗಳನ್ನು ಕತ್ತಿಯಿಂದ ಸೀಳಿ ಕೊಲ್ಲುವಾಗ ಅವುಗಳಿಗೆ ಎಷ್ಟೊಂದು ನೋವು ಉಂಟಾಗಲಿಕ್ಕಿಲ್ಲ! ಅವುಗಳ ಮೇಲೆ ನಡೆಯುತ್ತಿರುವುದು ಎಂತಹ ಘೋರ ಅನ್ಯಾಯ ?

''ಪುರುದೇವ''-ಚಂಪೂ ಕಾವ್ಯದಲ್ಲಿ ಕವಿ ಅರ್ಹದ್‌ದಾಸರು ಭಗವಾನ್ ಆದಿನಾಥರ ವರ್ಣನೆ ಮಾಡುತ್ತಾ ಹೀಗೆ ಬರೆದಿದ್ದಾರೆ- ''ಅವರು ಕಾಡಿನಲ್ಲಿ ತಪಸ್ಸು ಮಾಡುತ್ತಿದ್ದರು. ಒಂದು ಚಮರೀಮೃಗವು ಹುಲಿಯನ್ನು ತಪ್ಪಿಸಿ ತನ್ನ ಜೀವವುಳಿಸಿಕೊಳ್ಳಲು ಓಡಿಹೋಗುತ್ತಿತ್ತು. ಹಾಗೆ ಓಡುವಾಗ ಒಂದು ಪೊದರಿನಲ್ಲಿ ಅದರ ಬಾಲ ಸಿಕ್ಕಿಹಾಕಿಕೊಂಡಿತು. ಚಮರೀ ಮೃಗಗಳಿಗೆ ತಮ್ಮ ಬಾಲದ ಕೂದಲು ಅತ್ಯಂತ ಪ್ರಿಯ. ಅದಕ್ಕಾಗಿ ಅವು ತಮ್ಮ ಪ್ರಾಣವನ್ನು ಕೂಡಾ ಅರ್ಪಿಸಲು ಸಿದ್ಧ. ಇದನ್ನು ಆದಿನಾಥರು ನೋಡಿದರು. ಅವರಿಗೆ ಕರುಣೆ ಬಂತು ತಮ್ಮ ಕೈಗಳಿಂದಲೇ ಆ ಮೃಗದ ಸಿಕ್ಕಿಹಾಕಿಕೊಂಡಿದ್ದ ಕೂದಲನ್ನು ಬಿಡಿಸಿದರು, ಅದರ ಜೀವ ಉಳಿಸಿದರು.'' ಈಗ ನಮ್ಮದೂ ಎಂತಹ ಮಹಾನ್ ಸಂಸ್ಕೃತಿ ಎಂಬುದನ್ನು ಯೋಚಿಸಿ ಮತ್ತು ಈಗ ನಾವು ಎಲ್ಲಿಗೆ ಮುಟ್ಟಿದ್ದೇವೆ ಎಂಬುದನ್ನು ತಿಳಿಯಿರಿ. ಅಹಿಂಸೆಯು ಕೇವಲ ಪುಸ್ತಕ ಓದುವುದರಿಂದ ಬರಲಾರದು. ಅಹಿಂಸೆಯನ್ನು ನೀವು ಒಂದು ಜೀವನದ ಅಂಗವಾಗಿ ಸ್ವೀಕರಿಸಿರಿ. ಅಹಿಂಸೆ ಎಂಬುದೊಂದು ಪ್ರವಾಹ. ಇದರಲ್ಲಿ

ಸತ್ಯ, ಅಚೌರ್ಯ, ಅಪರಿಗ್ರಹ, ಬ್ರಹ್ಮಚರ್ಯ ಇವೆಲ್ಲಾ ಸುರಕ್ಷಿತವಾಗಿರುತ್ತವೆ. ಅಹಿಂಸೆಯನ್ನು ಭೂಮಂಡಲದ ದೇವತೆ ಎಂದು ಹೇಳಲಾಗಿದೆ. ಧವಲಾ ಗ್ರಂಥದಲ್ಲಿ ವೀರಸೇನ ಆಚಾರ್ಯರು- ''ಯಾವನು ಅಹಿಂಸಾ ಪಾಲನೆ ಮಾಡುತ್ತಾನೋ ಅವನು ದೇವತೆಯಾಗಿರುತ್ತಾನೆ. ಅಹಿಂಸೆಯಲ್ಲಿ ದಯೆಯಿದೆ. ಅದು ದಯಾಧರ್ಮದ ಮೂಲ'' ಎಂದು ಬರೆದಿದ್ದಾರೆ.

**ಧರ್ಮಃ ಸರ್ವಸುಖಾಕರೋ ಹಿತಕರೋ ಧರ್ಮಂಬುಧಾಶ್ಚಿನ್ವತೇ ।**
**ಧರ್ಮೇಣೇವ ಸಮಾಪ್ಯತೇ ಶಿವಸುಖಂ ಧರ್ಮಾಯ ತಸ್ಮೈ ನಮಃ ॥**
**ಧರ್ಮಾನ್ನಾಸ್ತ್ಯಪರಃ ಸುಹೃದಭವಭೃತಾಂ ಧರ್ಮಸ್ಯ ಮೂಲಂ ದಯಾ ।**
**ಧರ್ಮೇ ಚಿತ್ತಮಹಂ ದಧೇ ಪ್ರತಿದಿನಂ ಹೇ ಧರ್ಮ । ಮಾಂ ಪಾಲಯ ॥**

ಧರ್ಮದಿಂದ ದಯೆಯು ಹೊರಟುಹೋದ ಮೇಲೆ ಮತ್ತೆ ಅಲ್ಲಿ ಏನೂ ಇರುವುದಿಲ್ಲ. ನಮ್ಮ ಭಾಷೆ, ನಮ್ಮ ಆಚರಣೆ, ನಮ್ಮ ವ್ಯವಹಾರ, ಏಳುವುದು, ಕುಳಿತುಕೊಳ್ಳುವುದು, ಚಲಿಸುವುದು ಇವೆಲ್ಲವೂ ಅಹಿಂಸಾಮಯವಾಗಿರಬೇಕು.

ಗಾಂಧೀಜಿಯವರು ಅಹಿಂಸೆಯಿಂದ ಜಗತ್ತನ್ನೇ ಪ್ರಭಾವಿತಗೊಳಿಸಿದರು. ಅವರು ''ಹರಿಜನ'' ಪತ್ರಿಕೆಯಲ್ಲಿ ಒಮ್ಮೆ ಹೀಗೆ ಬರೆದಿದ್ದರು-''ನಾವು ಅಹಿಂಸೆಯನ್ನು ಏತಕ್ಕಾಗಿ ಸ್ವೀಕರಿಸಿ ತನ್ನದಾಗಿಸಿಕೊಂಡೆವು ಎನ್ನುವುದಕ್ಕೆ ಪ್ರಬಲವಾದ ಕಾರಣವಿದೆ. ಅದು ಯಾವುದೇ ಮಠಾಧಿಪತಿಯ, ಯಾವುದೇ ಧರ್ಮದ, ಯಾವುದೇ ಒಬ್ಬ ಸಾಧುವಿನ ಸಂಪತ್ತಲ್ಲ. ಬದಲಾಗಿ ಅದು ಮಾನವ ಮಾತ್ರರ ಸಂಪತ್ತಾಗಿದೆ.'' ಯಾವನು ಅಹಿಂಸಾ ಪಾಲನೆ ಮಾಡುತ್ತಾನೋ ಅವನೇ ಜೈನನು.

ಅನ್ಯ ಜನರು ನಮ್ಮ ಸಂಸ್ಕೃತಿಯ, ನಮ್ಮ ಸಿದ್ಧಾಂತಗಳ ಗೀತೆ ಹಾಡುತ್ತಾರೆ, ಪ್ರಶಂಸೆ ಮಾಡುತ್ತಾರೆ, ಅದನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಆದರೆ ನಾವು ಎಲ್ಲಿದ್ದೇವೆ. ಸ್ವಲ್ಪ ವಿಚಾರ ಮಾಡಿರಿ. ನಿಮ್ಮ ಮೇಲೆ ಬಹಳ ದೊಡ್ಡ ಹೊಣೆಗಾರಿಕೆಯಿದೆ. ನಿಮ್ಮ ಸಂಸ್ಕೃತಿ ಭವ್ಯವಾಗಿದೆ. ಸಮಾಜವು ಸಭ್ಯವಾದುದು. ವಿಚಾರ ವೀತರಾಗ, ಧರ್ಮ ಆಧ್ಯಾತ್ಮಿಕ, ಅದರ ಸುರಕ್ಷಿತತೆಯ ಜವಾಬ್ದಾರಿ ನಿಮ್ಮದು.

**ಲೋಇಯ ವೇದೇ ತಹಾ ಸಮಯ್... ।**
**ಲೌಕಿಕಂ ವೈದಿಕಂ ಚಾಪಿ ತಥಾಧ್ಯಾತ್ಮಿಕಮೇವ ಚ ॥**

ಆಚಾರ್ಯರು ಲೌಕಿಕ ಕಾರ್ಯಗಳನ್ನು ನಿಷೇಧಿಸಲಿಲ್ಲ. ಆದರೆ ಅವರು ಹೇಳಿರುವ ಆಧ್ಯಾತ್ಮವನ್ನು ಮರೆಯಬೇಡಿ, ಧರ್ಮವನ್ನು ಮರೆಯಬೇಡಿ. ಲೌಕಿಕ ಶಾಸ್ತ್ರಗಳಲ್ಲಿ ಆಯುರ್ವೇದವಿದೆ, ವ್ಯಾಕರಣವಿದೆ ಅವೆಲ್ಲದರ ಅಧ್ಯಯನ ಮಾಡಿರಿ. ಆದರೆ ಆಧ್ಯಾತ್ಮ ಮತ್ತು ಅಹಿಂಸೆಯನ್ನು ಎಂದೆಂದಿಗೂ ಮರೆಯಬೇಡಿ. ನಿಮಗೆ ಜೀವನದಲ್ಲಿ ಸುಖಬೇಕಾದರೆ, ಭವಿಷ್ಯವನ್ನು ಉಜ್ವಲಗೊಳಿಸಲು ನೀವು ಬಯಸುವಿರಾದರೆ ಅವು ಬೇಕೇಬೇಕು.



ಕುಸಂಗೀತಕ್ಕೆ ನಿಮ್ಮ ಮನಸ್ಸು ಬಾಗದಿರಲಿ. ಅದನ್ನು ಕೇಳಿದರೆ ನಿಮ್ಮ ಮನಸ್ಸು ಹಾಳಾಗುವ ಸಂಭವವಿದೆ. ಮನಸ್ಸನ್ನು ಎಂದಿಗೂ ಕೆಡಿಸಬೇಡಿ. ಅದರ ಬದಲು ಸುಸಂಗೀತದ ಮಾಧ್ಯಮದಿಂದ ಭಜನೆ, ಸ್ತುತಿ ಇತ್ಯಾದಿಗಳನ್ನು ಮಾಡಿರಿ, ಸ್ವಯಂ ಹಾಡಿರಿ. ಸುಸಂಗೀತದಿಂದಲೂ ಸಮ್ಯಗ್ದರ್ಶನದ ಪ್ರಾಪ್ತಿಯುಂಟಾಗುತ್ತದೆ.

**ಸ್ತುತ್ಯಾಪರ ನಾಭಿಮತಂ ಹಿ ಭಕ್ತ್ಯಾ ।**
**ಸ್ಮೃತ್ಯಾ ಪ್ರಣತ್ಯಾ ಚ ತತೋ ಭಜಾಮಿ ॥**
**ಸ್ಮರಾಮಿ ದೇವಂ ಪ್ರಣಮಾಮಿ ನಿತ್ಯಂ ।**
**ಕೇನಾ ಪ್ಯುಪಾಯೇನ ಫಲಂ ಹಿ ಸಾಧ್ಯಮ್ ॥**

ಯಾರಿಗೆ ಮಾಲಾ ಜಪಿಸುವುದರಲ್ಲಿ ಆನಂದ ಉಂಟಾಗುತ್ತದೋ ಅವರು ಮಾಲಾ ಜಪಿಸಲಿ. ಯಾರಿಗೆ ಪೂಜೆಯಲ್ಲಿ ಸಂತೋಷ ಸಿಗುತ್ತದೋ ಅವರು ಪೂಜೆ ಮಾಡಲಿ. ಯಾರಿಗೆ ಸ್ವಾಧ್ಯಾಯ, ವ್ರತ, ಉಪವಾಸ ಇತ್ಯಾಗಳಲ್ಲಿ ಆನಂದ ದೊರಕುತ್ತದೋ ಅವರು ಅಂತಹ ಕಾರ್ಯಗಳಲ್ಲೇ ತೊಡಗಿಕೊಂಡು ಆನಂದ ಪಡಲಿ. ತೀರ್ಥಯಾತ್ರೆ ಮಾಡುವವರು ಹಾಗೆಯೇ ಮಾಡಲಿ. ಭಜನೆ-ಕೀರ್ತನೆ-ಸಂಗೀತದಲ್ಲಿ ಸುಖ ಕಾಣುವವರು ಅಂತೆಯೇ ಮಾಡಲಿ ಹಾಗೂ ಅದರಲ್ಲೇ ರಮಿಸಲಿ.

ಆಚಾರ್ಯರು ಏನನ್ನು ಬರೆದಿದ್ದಾರೋ ಅದರಲ್ಲಿ ನಮಗೆ ತಿಳಿಸದೆ ಉಳಿದುದು ಯಾವುದೂ ಇಲ್ಲ. ಹಾಗೆ ನೋಡಿದರೆ ನಮ್ಮ ಆಚಾರ್ಯರು ನಮಗೊಂದು ಜ್ಞಾನದ ಭಂಡಾರ. ಆದರೆ ನಮ್ಮಲ್ಲಿರುವುದು ಅದರ ಅಲ್ಪ ಭಾಗ ಮಾತ್ರ. ಏನೇ ಇರಲಿ ಅಂತಹ ಮಹಾತ್ಮರು ಕೊಟ್ಟ ಮಹಾನ್ ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದು ನಮ್ಮ ಹೊಣೆಗಾರಿಕೆಯಾಗಿದೆ.

## ವಿದ್ಯಾನಂದ ವಚನಾಮೃತ

*ನಾವು ಡಿಲ್ಲಿಯಲ್ಲಿದ್ದಾಗ ಒಂದು ನೂರು ವರ್ಷದ ಆರ್ಜಿಕೆ, ಸಾಧ್ವೀ ಚಂದ್ರಮತಿ ಎಂಬುವವರಿದ್ದರು. ಅವರು ಆಹಾರ ಮಾಡಿಕೊಂಡು ಬರುತ್ತಿರಲು ದಾರಿಯಲ್ಲಿ ಕಸ ಗುಡಿಸುವ ಹರಿಜನ ಹೆಣ್ಣು ಮಗಳೊಬ್ಬಳು ಪ್ರಣಾಮ ಮಾಡಿದಾಗ ಆಶೀರ್ವಾದ ಮಾಡಿದರು. ''ಬರೀ ಆಶೀರ್ವಾದ ಬೇಡ, ನನ್ನ ಸಾವು ದೇವರ ಹೆಸರು ತೆಗೆದುಕೊಂಡು ಸಾಯಬೇಕು ಎಂಬುದಾಗಿ ಆಶೀರ್ವಾದ ಕೊಡಿ'' ಎಂದು ಬೇಡಿದಳು. ನೋಡಿ, ಆಕೆ ಎಂಥ ದೊಡ್ಡ ಚೇತನ! ಹುಟ್ಟುವುದು ದೊಡ್ಡದಲ್ಲ, ದೇವರ ಹೆಸರನ್ನು ಸ್ಮರಿಸುತ್ತಾ ಸಾಯಬೇಕೆಂಬ ಹೆಬ್ಬಯಕೆ ದೊಡ್ಡದು. ನೀವು ಕೂಡಾ ದೇವರ ಬಳಿ ಸಿಕ್ಕಿದ್ದೆಲ್ಲ ಬೇಡಬೇಡಿ, ಶುದ್ಧ ಪರಿಣಾಮವನ್ನು ಬೇಡಿರಿ, ಒಳ್ಳೆಯ ಗತಿಯನ್ನು ಬೇಡಿರಿ.*

– ೪ –

# ಮರಣವೂ ಉಪಕಾರಿಯಾದುದು

ಮಹಾನುಭಾವರೇ ! ಇಂದು ಶ್ರಾವಣ ಮಾಸದ ಕೃಷ್ಣ ಪಕ್ಷದ ಪ್ರಥಮ ದಿನ. ಇಂದಿನ ದಿವಸ ಭಗವಾನ್ ಮಹಾವೀರರ ದಿವ್ಯಧ್ವನಿ ರೂಪವಾದ ಉಪದೇಶವಾಗಿತ್ತು. ವರ್ಷದ ಗಣನೆಯು ಸೂರ್ಯ ಮತ್ತು ಚಂದ್ರ ಈ ಎರಡರ ಅನುಸಾರ ಉಂಟಾಗುತ್ತದೆ. ಸೂರ್ಯನ ಗತಿಯ ಗಣನೆಯಿಂದ ಆಗುವ ವರ್ಷವು 365 ದಿನ ಮತ್ತು ಕೆಲವು ಗಂಟೆಗಳಾಗುತ್ತವೆ. ಆದ ಕಾರಣ ಕೆಲವು ರಾಷ್ಟ್ರಗಳು 366 ದಿನಗಳಿಗೆ ಒಂದು ವರ್ಷವೆಂದು ಪರಿಗಣಿಸುತ್ತವೆ. ಅದನ್ನು ಸೌರವರ್ಷವೆಂದು ಹೇಳುತ್ತಾರೆ. ಚಂದ್ರನ ಗತಿಯ ಗಣನೆಯಿಂದ 355 ದಿನಗಳಿಗೆ ಒಂದು ವರ್ಷವಾಗುತ್ತದೆ. ಇದನ್ನು ಚಾಂದ್ರಮಾನ ವರ್ಷವೆಂದು ಕರೆಯುತ್ತಾರೆ. ಈ ಎರಡೂ ಲೆಕ್ಕಾಚಾರಗಳನ್ನೂ ಸಾಮಂಜಸ್ಯಗೊಳಿಸುವುದಕ್ಕಾಗಿ ನಮ್ಮಲ್ಲಿ ಪ್ರತಿ ಮೂರನೆಯ ವರ್ಷವನ್ನು ಒಂದು ಅಧಿಕ ಮಾಸವಿರುವ ವರ್ಷವೆಂದು ಮನ್ನಿಸಲಾಗಿದೆ.

ನಮ್ಮ ಚಾಂದ್ರಮಾನ ವರ್ಷಕ್ಕನುಸಾರವಾಗಿ ತಿಥಿಗಳನ್ನು ಗಣಿಸಲಾಗಿದೆ. ಅಷ್ಟಮಿ, ಚತುರ್ದಶಿ, ಹುಣ್ಣಿಮೆ, ಅಮಾವಾಸ್ಯೆ ಇತ್ಯಾದಿಗಳನ್ನು ಚಾಂದ್ರಮಾಸಕ್ಕನುಗುಣವಾಗಿ ಮನ್ನಿಸುತ್ತಾರೆ. ಎಲ್ಲ ಧಾರ್ಮಿಕ ಕ್ರಿಯಾಕಾಂಡಗಳೂ ಚಾಂದ್ರವರ್ಷಕ್ಕನುಗುಣವಾಗಿ ಮನ್ನಿಸಲ್ಪಡುತ್ತವೆ. ಅದು ಹಿಂದೂ ಧರ್ಮವಾಗಿರಬಹುದು ಅಥವಾ ಮುಸ್ಲಿಂ ಧರ್ಮವಾಗಿರಬಹುದು. ಸೂರ್ಯನಿಂದ ಆಯುಷ್ಯದ ಲೆಕ್ಕ ಹಾಕಲಾಗುತ್ತದೆ. ಜನ್ಮ ದಿನವನ್ನು ಗಣನೆಗೆ ತೆಗೆದುಕೊಳ್ಳುವಾಗ 365 ದಿನಗಳ ಬಳಿಕವೆಂದೇ ಪರಿಗಣಿಸುತ್ತಾರೆ. ಇದು ಸೌರವರ್ಷಕ್ಕೆ ಅನುಸಾರವಾಗಿ ಮಾಡಿಕೊಂಡುದಾಗಿದೆ. ಗರ್ಭಕುಂಡಲಿ ಮತ್ತು ಜನ್ಮ ಕುಂಡಲಿಯಿಂದ ಜ್ಯೋತಿಷಿಗಳು ಗಣನೆ ಮಾಡುತ್ತಾರೆ.

ನಮ್ಮ ಹತ್ತಿರ ತಿಲೋಯಪಣ್ಣತ್ತಿ, ಜಂಬೂದ್ವೀಪಪಣ್ಣತ್ತಿ, ಭದ್ರಬಾಹು ಸಂಹಿತಾ, ಜಾತಕ-ತಿಲಕ ಇತ್ಯಾದಿ ಜ್ಯೋತಿಷ ಗ್ರಂಥಗಳು ಸೂರ್ಯ, ಚಂದ್ರಮಾನಾದಿ ಗ್ರಹಗಳಿಗೆ ಸಂಬಂಧಿಸಿದ ಗ್ರಂಥಗಳಾಗಿವೆ. ಜಾತಕ-ತಿಲಕ ಗ್ರಂಥವು ದಿಗಂಬರ ಆಚಾರ್ಯ ಶ್ರೀಧರರ ಮೂಲಕ ರಚಿಸಲ್ಪಟ್ಟಿದೆ. ಅವರು ಅದರಲ್ಲಿ ಈ ಗ್ರಹ-ನಕ್ಷತ್ರಗಳು ನಮಗೆ ಯಾವುದೇ ತೊಂದರೆ ಕೊಡುವುದಿಲ್ಲ, ನಮ್ಮ ಕರ್ಮಗಳೇ ನಮಗೆ ತೊಂದರೆ ಕೊಡುವವುಗಳಾಗಿವೆ ಎಂದು ಹೇಳಿದ್ದಾರೆ. ಗ್ರಹ-ನಕ್ಷತ್ರಗಳ ಗಣನೆಯಿಂದ ನಮಗೆ ಮುಂದೆ ಬರುವ ಸಮಯವು ಶುಭವನ್ನು ಕೊಡುತ್ತದೋ ಅಥವಾ ಅಶುಭವನ್ನು ಕೊಡುತ್ತದೋ ಎಂದು ಪತ್ತೆ ಮಾಡಿಕೊಡಲಾಗುತ್ತದೆ. ಉದಾಹರಣೆಗೆ ದೀಪದ ಬೆಳಕಿನಲ್ಲಿ ಯಾವ ವಸ್ತು ಎಲ್ಲಿದೆ ಎಂದು ಎಷ್ಟೊಂದು ಸ್ಪಷ್ಟವಾಗಿ ತಿಳಿಯಲಾಗುತ್ತದೋ ಹಾಗೆಯೇ ಗ್ರಹಗಳ ಗಣಿತದಿಂದ ಮತ್ತು ಜ್ಯೋತಿರ್ಲೋಕದ ಗಣನೆಯಿಂದ ಮುಂದೆ ಬರುವ ಶುಭ-ಅಶುಭ ಜ್ಞಾನವನ್ನು ಪಡೆದುಕೊಳ್ಳಬಹುದಾಗಿದೆ.



ಮೊದಲು ಜೈನಾಚಾರ್ಯರ ಜೊತೆಗೆ ಸಂಘದಲ್ಲಿ ಒಬ್ಬರು ಸಂವತ್ಸರೀ ಕ್ಷಪಣಕರು ಇರುತ್ತಿದ್ದರು. ಅವರು ಲೆಕ್ಕ ಮಾಡಿ ಚಾತುರ್ಮಾಸಕ್ಕೆ ಈ ದಿಕ್ಕು ಯೋಗ್ಯವಾಗಿದೆ. ಆದುದರಿಂದ ಈ ದಾರಿಯಲ್ಲಿ ಹೋಗಿ ಅಥವಾ ಈ ದಿಕ್ಕಿನಲ್ಲಿ ಅಕಾಲ ಸಂಭವಿಸಬಹುದು, ಈ ದಿಕ್ಕಿನಲ್ಲಿ ಬರಗಾಲ ಬರಬಹುದು ಎಂದು ಹೇಳುತ್ತಿದ್ದರು. ಅವರು ಯಾವ ದಿಕ್ಕು ನಿರಾಪದ ಅಥವಾ ಆಪತ್ತಿನಿಂದ ರಹಿತವಾಗಿದೆ ಎಂದು ಹೇಳುತ್ತಾರೋ ಆ ದಿಕ್ಕಿನಲ್ಲಿ ಸಂಘವು ಚಾತುರ್ಮಾಸಕ್ಕಾಗಿ ವಿಹಾರ ಮಾಡುತ್ತಿತ್ತು. ಆಚಾರ್ಯ ಭದ್ರಬಾಹು ನಿಮಿತ್ತ ಶಾಸ್ತ್ರದ ಜ್ಞಾತಾ ಆಗಿದ್ದರು. ಅವರು ತಮ್ಮ ಜ್ಞಾನದಿಂದ ಉತ್ತರ ಭಾರತದಲ್ಲಿ ಅಕಾಲ ಬಾಧಿಸಬಹುದು ಎಂದು ಮೊದಲೇ ತಿಳಿದು ದಕ್ಷಿಣ ಭಾರತದ ಕಡೆಗೆ ವಿಹಾರ ಮಾಡಿದರು.

ಇತಿಹಾಸಕಾರರಾದ ವಾಸುದೇವಶರಣ ಅಗರವಾಲರು "ಪಾಣಿನಿಯ ಕಾಲದಲ್ಲಿ ಭಾರತದಲ್ಲಿ ಆಷಾಢ ಮಾಸದ ಪೌರ್ಣಿಮೆಯು ವರ್ಷದ ಸಮಾಪನ ಅರ್ಥಾತ್ ಕೊನೆ ಎಂದು ಮನ್ನಿಸುತ್ತಿದ್ದರೆಂಬುದಾಗಿ ಹೇಳಿದರು. ಆಷಾಢ ಪೌರ್ಣಿಮಿಯು ವರ್ಷದ ಅಂತಿಮ ದಿನವಾಗಿತ್ತು. ಈ ದಿವಸ ಸಂಪೂರ್ಣ ರಾಜಕೀಯ ಲೆಕ್ಕಾಚಾರಗಳನ್ನು ಪೂರ್ತಿಗೊಳಿಸಲಾಗುತ್ತಿತ್ತು. ಶ್ರಾವಣ ಕೃಷ್ಣ ಪ್ರತಿಪದೆಗೆ ಹೊಸ ವರ್ಷ ಪ್ರಾರಂಭವಾಗುತ್ತಿತ್ತು. ಹೊಸ ಲೆಕ್ಕ ಪುಸ್ತಕದ ಖಾತೆ ಪ್ರಾರಂಭಗೊಳ್ಳುತ್ತಿತ್ತು. ಭಗವಾನ ಋಷಭದೇವರ ಸಮಯದಲ್ಲಿ ಪ್ರಾರಂಭಗೊಂಡ ಕೃತಯುಗದ ಶುಭಾರಂಭವು ಕೂಡಾ ಈ ದಿವಸವೇ ಎಂದರೆ ಶ್ರಾವಣ ಕೃಷ್ಣ ಪ್ರತಿಪದೆಯಂದೇ ಆಗುತ್ತಿತ್ತು ಎಂಬುದಾಗಿ ಉಲ್ಲೇಖವಿದೆ.

**ಆಷಾಢ ಮಾಸ ಬಹುಲ ಪ್ರತಿಪದ ದಿವಸೇ ಕೃತೋ ।**
**ಕೃತಾಕೃತ ಯುಗಾರಂಭಂ ಪ್ರಾಜಾಪತ್ಯಮುಪೇಯಿವಾನ್ ॥**

ಕೃತಯುಗಕ್ಕಿಂತ ಮೊದಲು ಕಲ್ಪವೃಕ್ಷವೇ ಜೀವನಕ್ಕೆ ಆಧಾರವಾಗಿತ್ತು. ಕಲ್ಪವೃಕ್ಷದಿಂದಲೇ ಜೀವನ ಸಾಗುತ್ತಿತ್ತು. ಎಲ್ಲ ಆವಶ್ಯಕತೆಗಳೂ ಅವುಗಳಿಂದಲೇ ಪೂರ್ಣಗೊಳ್ಳುತ್ತಿತ್ತು. ಮಾನವನು ಬಹಳ ಕಡಿಮೆ ಪ್ರಮಾಣದ ಭೋಜನವನ್ನು ಮಾಡುತ್ತಿದ್ದನು. ತರಕಾರಿ ಹಣ್ಣು ಇತ್ಯಾದಿಗಳಲ್ಲಿ ಬಹಳ ಶಕ್ತಿ ಅಡಗಿತ್ತು. ಈಗ ಮನುಷ್ಯನು ಅನ್ನದ ಕೀಟವಾಗಿಬಿಟ್ಟಿದ್ದಾನೆ. ಇಂದು ಊಟ-ತಿಂಡಿಯಲ್ಲಿ ಮನುಷ್ಯನಿಗೆ ಯಾವುದೇ ಸಂಯಮ ಇಲ್ಲವಾಗಿದೆ. ಇಂದಿನ ದಿನಗಳಲ್ಲಿ ನಾವು ಆಹಾರ ತಿನ್ನುವುದಲ್ಲ ಬದಲಾಗಿ ಆಹಾರವೇ ನಮ್ಮನ್ನು ತಿನ್ನುತ್ತದೆ.

**ಕಾಲೇ ಕಾಲ್ ಚಲೇ ಚಿತ್ತಂ ದೇಹೇ ಚಾತ್ರಾದಿಕೀಟಕೇ ।**

ಭಾರತೀಯ ಸಂಸ್ಕೃತಿಯಲ್ಲಿ ಅನ್ನ-ಪಾನಾದಿಗಳ ನಿಯಮದ ಪರಂಪರೆಯಿದೆ. ಮಹಾಭಾರತದಲ್ಲಿ ಕೈಕಾಲುಗಳನ್ನು ತೊಳೆದೇ ಊಟ ಮಾಡಬೇಕೆಂಬ ನಿಯಮಗಳ ಉಲ್ಲೇಖವಿದೆ. ಕೈ ಕಾಲುಗಳನ್ನು ತೊಳೆದೇ ಊಟ ಮಾಡುವುದರಿಂದ ಜೀರ್ಣಶಕ್ತಿ ಸರಿಯಾಗಿರುತ್ತದೆ. ಊಟ ಮಾಡುವ ಹೊತ್ತಿನಲ್ಲಿ ಕಾಲುಗಳಲ್ಲಿ ಧೂಳು ಅಂಟಿಕೊಂಡಿರಬಾರದು. ಊಟ ಮಾಡುವುದು ಕೂಡಾ ಪೂರ್ವಾಭಿಮುಖವಾಗಿ ಕುಳಿತು ಮಾಡಬೇಕು.

ಭಗವಾನ್ ಆದಿನಾಥರ ಯುಗದಲ್ಲಿ ಕಲ್ಪವೃಕ್ಷಗಳು ಇಲ್ಲವಾದವು. ಜನರು ಅದರಿಂದ ಗಾಬರಿಗೊಂಡು ರಾಜನಾದ ನಾಭಿರಾಯರಲ್ಲಿಗೆ ಹೋದರು. ನಾಭಿರಾಯರು ರಾಜಕುಮಾರನಾದ ಋಷಭನಲ್ಲಿಗೆ ಹೋಗಿರಿ. ಅವರಿಂದ ಇದಕ್ಕೆ ಉಪಾಯ ದೊರಕಬಹುದೆಂದರು. ಋಷಭದೇವರು ಆಗ ಕೃಷಿ ಯುಗದ ಪ್ರಾರಂಭ ಮಾಡಿದ್ದರು. ಅವರಲ್ಲಿಗೆ ಹೋದಾಗ ಅವರು "ನೀವು ಕಬ್ಬನ್ನು ಜಗಿದು ಅದರ ರಸವನ್ನು ಹೀರಿಕೊಳ್ಳಿ, ಅದರಿಂದ ನಿಮ್ಮ ಹಸಿವೆ ಶಾಂತವಾಗುತ್ತದೆ." ಎಂದರು ಕಬ್ಬಿಗೆ ಇಕ್ಷು ಎಂದು ಹೇಳುತ್ತಾರೆ. ಆ ಇಕ್ಷುವನ್ನು ಅವರು ಆಹಾರವನ್ನಾಗಿ ಮಾಡಿ ಎಂದು ಹೇಳಿದುದರಿಂದ ಅವರ ವಂಶವು "ಇಕ್ಷ್ವಾಕುವಂಶ"ವೆಂದು ಕರೆಯಲ್ಪಟ್ಟಿತು. ಋಷಭದೇವರು ಸ್ವಯಂ ದೀಕ್ಷಾನಂತರ ಇಕ್ಷು ರಸವನ್ನೇ ಆಹಾರವನ್ನಾಗಿ ಮಾಡಿಕೊಂಡಿದ್ದರು. ಕೇವಲ ಮೂರು ಅಂಗೈಗಳಷ್ಟು ರಸದಿಂದ ಹೊಟ್ಟೆ ತುಂಬಿಹೋಯಿತು. ಆ ಕಾಲದಲ್ಲಿ ವನಸ್ಪತಿಯಲ್ಲಿ ಅಷ್ಟು ಶಕ್ತಿಯಿತ್ತು. ಆಯುರ್ವೇದ ಶಾಸ್ತ್ರದಲ್ಲಿ ಇದರ ಬಗ್ಗೆ ಉಲ್ಲೇಖಿಸುತ್ತಾ ಕ್ರಮೇಣ ವನಸ್ಪತಿಯ ಶಕ್ತಿಯು ಕೂಡಾ ಕ್ಷೀಣವಾಗುತ್ತಾ ಹೋಗುತ್ತಿದೆಯೆಂದು ಹೇಳಲಾಗಿದೆ. ಭಗವಾನ್ ಆದಿನಾಥರು ಕೃತಯುಗದ ಪ್ರಾರಂಭದಲ್ಲಿ ಅಸಿಯ ಬಗ್ಗೆ ಶಿಕ್ಷಣ ನೀಡಿದರು. ಅದು ಆತ್ಮರಕ್ಷಣೆ ಪಡೆಯುವುದಕ್ಕಾಗಿ, ಶತ್ರುವಿನಿಂದ ತನ್ನ ರಕ್ಷಣೆ ಮಾಡಿಕೊಳ್ಳುವುದಕ್ಕಾಗಿ.

**ಮಸಿ ಕೀ ಶಿಕ್ಷಾ ಲೇಖನ್-ಕಲಾ ಕೇಲಿಯೇ, ಹಿಸಾಬ್ ಆದಿ ಕೇಲಿಯೇ ದೀ ।**

**ವಾಣಿಜ್ಯ ಕೀ ಶಿಕ್ಷಾ ಲೇನ್-ದೇನ್-ವ್ಯಾಪಾರ್ ಕೇಲಿಯೇ ದೀ ॥**

ಪ್ರಾಚೀನ ಕಾಲದಲ್ಲಿ ಸಂಪೂರ್ಣ ಚಾತುರ್ಮಾಸದಲ್ಲಿ ಮಳೆ ಹೇಗೆ ಬೀಳುತ್ತಿತ್ತು? ಇದರ ಅನುಮಾನವು ಆಷಾಢ ಮಾಸದ ಹುಣ್ಣಿಮೆಗೆ ನಡೆಯುವ ಹವಾಮಾನದ ಶುಷ್ಕತೆಯಿಂದ ತೊಡಗಿಕೊಳ್ಳುತ್ತಿತ್ತು ಮತ್ತು ಸಂಪೂರ್ಣ ಮಳೆಯ ಅರ್ಥವ್ಯವಸ್ಥೆಯು ಅದರ ಆಧಾರದಿಂದಲೇ ಉಂಟಾಗುತ್ತಿತ್ತು.

ಸಾಧುಗಳು ಯಾವಾಗ ಚಾತುರ್ಮಾಸಕ್ಕಾಗಿಯೇ ನಿಯತ ಸ್ಥಾನಕ್ಕೆ ಬರುತ್ತಾರೋ ಆಗ ಆಷಾಢ ಶುಕ್ಲ ಚತುರ್ದಶಿಯ ಸಂಜೆಯ ವೇಳೆಗೆ ವರ್ಷ ತುಂಬಿದ ಪ್ರತಿಕ್ರಮಣವನ್ನು ಹೇಳುತ್ತಾರೆ. ಅದನ್ನು ಸಾಂವತ್ಸರಿಕ ಪ್ರತಿಕ್ರಮಣವೆಂದು ಹೇಳಲಾಗಿದೆ. ಅದರಲ್ಲಿ ವರ್ಷವಿಡೀ ಆಗಿರುವ ಪ್ರಮಾದಗಳ, ತಿಳಿದೋ ತಿಳಿಯದೆಯೋ ಆದ ತಪ್ಪುಗಳ, ಕುಳಿತಾಗ- ನಿಂತಾಗ ಮತ್ತು ನಡೆಯುವಾಗ ಯಾವುದೇ ದೋಷಗಳುಂಟಾಗಿರಲಿ ಹಾಗೂ ಯಾರ ಮನಸ್ಸಿಗಾದರೂ ದುಃಖವನ್ನುಂಟುಮಾಡುವ ಸನ್ನಿವೇಶ ಬಂದಿರಲಿ, ಅವೆಲ್ಲದರ ಪ್ರತಿಕ್ರಮಣವನ್ನು ಮಾಡುತ್ತಾರೆ.

ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಕೇವಲ ಪ್ರಥಮ ತೀರ್ಥಂಕರರಾದ ಆದಿನಾಥರ ಕಾಲದಲ್ಲಿ / ತೀರ್ಥದಲ್ಲಿ ಮತ್ತು ಅಂತಿಮ ತೀರ್ಥಂಕರರಾದ ಮಹಾವೀರರ ತೀರ್ಥದಲ್ಲಿಯೇ ಮುನಿಗಳಿಂದ ತಪ್ಪು ಉಂಟಾಗಿದೆ. ಮಧ್ಯದ ಉಳಿದ ಇಪ್ಪತ್ತೆರಡು ತೀರ್ಥಂಕರರ



ತೀರ್ಥದಲ್ಲಿ ಮುನಿಗಳಿಂದ ಯಾವುದೇ ತಪ್ಪು ಉಂಟಾಗಿಲ್ಲ. ತೀರ್ಥಂಕರ ಆದಿನಾಥರ ಸಮಯದಲ್ಲಿ ಸಾಧುಗಳು ಅತ್ಯಂತ ಬೋಳೇ ಸ್ವಭಾವದ ಶುದ್ಧ-ನೇರ-ಸರಳ ವ್ಯಕ್ತಿಗಳಾಗಿದ್ದರು. ಆದ ಕಾರಣ ತಪ್ಪುಗಳು ಕೂಡಾ ನಡೆಯುತ್ತಿದ್ದವು. ಇದರಿಂದಾಗಿಯೇ ಅವರಿಗೆ ಪ್ರಾಯಶ್ಚಿತ್ತ / ಪ್ರತಿಕ್ರಮಣದ ಅವಶ್ಯಕತೆ ಉಂಟಾಗಿತ್ತು ಮತ್ತು ತೀರ್ಥಂಕರ ಮಹಾವೀರರ ಕಾಲದಲ್ಲಿ ಸಾಧುಗಳು ಉಚ್ಛೃಂಖಲರಾಗಿದ್ದರು. ಆದ ಕಾರಣವೇ ಅವರಿಗೆ ಕೂಡಾ ಪ್ರಾಯಶ್ಚಿತ್ತ / ಪ್ರತಿಕ್ರಮಣದ ಅವಶ್ಯಕತೆಯುಂಟಾಯಿತು. ಈ ಮಧ್ಯೆ ಇಪ್ಪತ್ತೆರಡು ತೀರ್ಥಂಕರರ ಕಾಲದಲ್ಲಿ ಯಾವುದೇ ಪ್ರತಿಕ್ರಮಣವಿರಲಿಲ್ಲ. ಛೇದೋಪಸ್ಥಾನೆಯೂ ಇರಲಿಲ್ಲ. ಕೇವಲ ಸಾಮಾಯಿಕವೊಂದೇ ಇತ್ತು. ಆದರೆ ಇಂದು ಪ್ರಾಯಶ್ಚಿತ್ತದ ಅವಶ್ಯಕತೆಯೂ ಉಂಟಾಗಿಬಿಟ್ಟಿದೆ.

**ಸರ್ವಂ ಸ್ವೈದೇವ ನಿಯತಮ್ ।**

ತಾರಾಮಂಡಲದಿಂದ ಪೃಥ್ವಿಯ ಗತಿಯ ಗಣನೆಯನ್ನು ಮಾಡುತ್ತಾರೆ ಮತ್ತು ಆ ಗಣನೆಯಿಂದ ವೈಜ್ಞಾನಿಕವಾಗಿ ಈ ವರ್ಷ ಈ ಸ್ಥಳದಲ್ಲಿ ಭೂಕಂಪನ ಆಗಬಹುದು ಎಂಬ ಅನುಮಾನಿಸುತ್ತಾರೆ. ಸಾಮಾನ್ಯವಾಗಿ ಪೃಥ್ವೀ ಮಂಡಲದ ಮೇಲೆ ನಿತ್ಯವೂ ಅತ್ಯಂತ ಸೂಕ್ಷ್ಮ ಭೂಕಂಪನಗಳು ಆಗುತ್ತಲೇ ಇರುತ್ತವೆ. ಇದೇ ರೀತಿ ಭಗವಾನ್ ಆದಿನಾಥರು 'ಶಿಲ್ಪ' ಅರ್ಥಾತ್ ಕೈಗಳಿಂದ ಮಾಡುವ ನಯಗಾರಿಕೆಯ ಕೆಲಸಗಳನ್ನು ಕಲಿಸಿಕೊಟ್ಟರು. ಅದರಲ್ಲಿ ಬಟ್ಟೆ ನೇಯುವುದು, ಮೂರ್ತಿಗಳನ್ನು ಕೆತ್ತುವುದು ಹೀಗೆ ಸರ್ವ ನಾಜೂಕಿನ ಕೆಲಸಗಳೂ ಸೇರಿಕೊಳ್ಳುತ್ತವೆ.

ಮಹಿಳೆಯರಿಗಾಗಿ ಅರವತ್ತುನಾಲ್ಕು ವಿದ್ಯೆಗಳನ್ನೂ, ಪುರುಷರಿಗಾಗಿ ಎಪ್ಪತ್ತೆರಡು ಕಲೆಗಳನ್ನೂ ಹೇಳಿಕೊಟ್ಟರು. ಸಾಮಾಜಿಕ ಜೀವನವನ್ನು ನಡೆಸುವುದಕ್ಕಾಗಿ ಆರು ವಿಧದ ಶಿಕ್ಷಣ ಕ್ರಮವನ್ನು ತಿಳಿಸಿಕೊಟ್ಟ ಮೇಲೆ ಈ ಆರು ರೀತಿಯ ಶಿಕ್ಷಣಗಳು, ಅರುವತ್ತನಾಲ್ಕು ವಿದ್ಯೆಗಳು ಮತ್ತು ಎಪ್ಪತ್ತೆರಡು ಕಲೆಗಳು ಇವುಗಳೊಂದಿಗೆ ಧರ್ಮವು ಕೂಡಾ ಇರಬೇಕೆಂದರು. ಜೀವನದಲ್ಲಿ ಧರ್ಮದ ಲೋಪ ಉಂಟಾಯಿತೆಂದಾದರೆ ಈ ಎಲ್ಲಾ ಶಿಕ್ಷಣಗಳು, ವಿದ್ಯೆಗಳು, ಕಲೆಗಳು ವ್ಯರ್ಥವೆಂದು ತಿಳಿಸಿದರು.

ಭಗವಾನ್ ಆದಿನಾಥರ ಯುಗದಲ್ಲಿ ಪ್ರಜೆಗಳು ಅತ್ಯಂತ ಸುಖಿಗಳಾಗಿದ್ದರು. ಈ ರೀತಿಯ ಉಲ್ಲೇಖಗಳನ್ನು ಕವಿ ಸೂರದಾಸರು ಕೂಡಾ ತಮ್ಮ "ಸೂರ್‌ಸಾಗರ್" ಗ್ರಂಥದಲ್ಲಿ ನೀಡಿದ್ದಾರೆ. ಆ ಕಾಲದಲ್ಲಿ ಧರ್ಮ ಮತ್ತು ನ್ಯಾಯ ಜನರಲ್ಲಿತ್ತು. ಸಮಯ, ವಾತಾವರಣ ಎಲ್ಲವೂ ಅನುಕೂಲವಾಗಿತ್ತು. ಋತುಗಳು ಕೂಡಾ ಅನುಕೂಲವಾಗಿದ್ದವು. ಆಯುರ್ವೇದ ಗ್ರಂಥಗಳಲ್ಲಿ ವರ್ಷಕ್ಕೆ ಆರು ಋತುಗಳು ಎಂದು ಹೇಳಲಾಗಿದೆ. ಆದರೆ ಪ್ರಾಯಶಃ ಪ್ರತಿಯೊಂದು ದಿನದಲ್ಲೂ ಆರು ಋತುಗಳು ಪ್ರಕಟವಾಗುತ್ತವೆ. ಬದ್ರೀನಾಥ್/ಹಿಮಾಲಯ ಪ್ರದೇಶದಲ್ಲಿ ಪ್ರಾಯಶಃ ಪ್ರತಿದಿನವೂ ಈ ಆರು ಋತುಗಳ ವಾತಾವರಣ ಉಂಟಾಗು

ತ್ತದೆ. ರಾತ್ರಿ ವೇಳೆ ಮಂಜು, ಹಗಲಿನಲ್ಲಿ ಮಳೆ, ಸ್ವಲ್ಪ ಹೊತ್ತಾದರೆ ಮೋಡ, ಇನ್ನೂ ಸ್ವಲ್ಪ ಹೊತ್ತು ಕಳೆದರೆ ಬಿಸಿಲು, ಉರಿ ಬಿಸಿಲು ಹೀಗೆ ಒಂದೇ ದಿನದಲ್ಲಿ ಆರು ಋತುಗಳ ವಾತಾವರಣವು ಬಂದು ಕೂಡುತ್ತದೆ.

ಇಂದಿನ ದಿವಸ ಭಗವಾನ್ ಮಹಾವೀರರ ದಿವ್ಯಧ್ವನಿಯು ಪ್ರಕಟವಾಗಿತ್ತು. ಕೇವಲ ಜ್ಞಾನವಂತೂ 66 ದಿನಗಳ ಮೊದಲೇ ಪ್ರಕಟವಾಗಿತ್ತು. ಆದರೆ ಗಣಧರರ ಅಭಾವದಿಂದ ಭಗವಂತನ ವಾಣಿಯು ಪ್ರಕಟವಾಗಿರಲಿಲ್ಲ. ಧವಲಾ ಗ್ರಂಥದಲ್ಲಿರುವ ಉಲ್ಲೇಖದಂತೆ ''ಭಗವಂತರ ದಿವ್ಯಧ್ವನಿ ಏಕೆ ಪ್ರಕಟವಾಗಲಿಲ್ಲ?'' ಎಂಬ ಪ್ರಶ್ನೆ ಕೇಳಲಾಯಿತು. ''ಯಾವನೇ ಗಣಧರನು ಇಲ್ಲದ ಕಾರಣ ದಿವ್ಯಧ್ವನಿಯು ಪ್ರಕಟವಾಗಲಿಲ್ಲ'' ಎಂಬ ಸಮಾಧಾನವನ್ನು ಅದಕ್ಕೆ ಕೊಡಲಾಯಿತು.

''ಹಾಗಾದರೆ ಯಾವ ಗಣಧರನನ್ನೂ ಕೂಡಿಕೊಂಡು ಏಕೆ ಬರಲಿಲ್ಲ ?''

''ಕಾಲಲಬ್ಧಿ ಇಲ್ಲದ ಕಾರಣ ಗಣಧರರ ಉಪಲಬ್ಧಿ ಕೂಡಾ ಇರುವುದಿಲ್ಲ.''

ಗಣಧರರ ಅಭಾವದಿಂದ ದಿವ್ಯಧ್ವನಿ ಪ್ರಕಟವಾಗಲಿಲ್ಲ ಎಂಬ ವಿಚಾರ ಇಂದ್ರನಿಗೂ ತಿಳಿಯಿತು. ಆಗ ಅವನು ಒಬ್ಬ ಬ್ರಹ್ಮಚಾರಿ ವಟುವಿನ ವೇಷವನ್ನು ಧಾರಣೆ ಮಾಡಿ ಇಂದ್ರಭೂತಿ ಗೌತಮ ಎಂಬ ಬ್ರಾಹ್ಮಣನಲ್ಲಿಗೆ ಹೋಗಿ ''ನಮಗೆ ಈ ಒಂದು ಶ್ಲೋಕದ ಅರ್ಥ ತಿಳಿಯಲಿಲ್ಲ. ಈ ದಿನಗಳಲ್ಲಿ ನಮ್ಮ ಗುರುಗಳು ಮೌನಧಾರಿಗಳಾಗಿದ್ದಾರೆ. ಆದ ಕಾರಣ ತಾವು ಈ ಶ್ಲೋಕದ ಅರ್ಥವನ್ನು ತಿಳಿಸಬೇಕಾಗಿ ಬೇಡುತ್ತೇನೆ'' ಎಂದನು. ಆ ಶ್ಲೋಕ ಹೀಗಿತ್ತು.

**ತ್ರೈಕಾಲ್ಯಂ ದ್ರವ್ಯಷಟಕಂ ನವಪದ ಸಹಿತಂ ಜೀವ ಷಟಕಾಯಲೇಶ್ಯಾಃ ।**
**ಪಂಚಾನ್ಯೇ ಚಾಸ್ತಿಕಾಯಾ ವ್ರತಸಮಿತಿ ಗತಿಜ್ಞಾನ ಚಾರಿತ್ರಭೇದಾ ॥**

ಶ್ಲೋಕವನ್ನು ಕೇಳಿದ ಗೌತಮನು ಹೀಗೆ ಯೋಚನೆ ಮಾಡಿದ ''ಕಾಲವಾದರೋ ಎರಡೇ ಇರುತ್ತದೆ, ಭೂತಕಾಲ ಮತ್ತು ಭವಿಷ್ಯತ್‌ಕಾಲ. ಈ ತ್ರೈಕಾಲ್ಯ-ತ್ರಿಕಾಲ ಹೇಗೆ ಬರುತ್ತದೆ ?'' ಪುನಃ ಅವನಿಗೆ ಸಂದೇಹವುಂಟಾಯಿತು. ದ್ರವ್ಯಗಳಾದರೋ ಇರುವುದು ಇಪ್ಪತ್ತೈದು. ದ್ರವ್ಯ ಷಟಕಂ ಹೇಗೆ ಬಂತು?'' ಗೌತಮನಿಗೆ ಶ್ಲೋಕ ಸರಿಯಾಗಿ ಗೊತ್ತಾಗಲಿಲ್ಲ. ಆಗ ಅವನು ''ಅಯ್ಯಾ, ನಿನ್ನ ಗುರುಗಳು ಎಲ್ಲಿರುವರು ಅವರಲ್ಲಿಗೇ ಹೋಗಿ ಇದರ ನಿರ್ಣಯ ಮಾಡೋಣ'' ಎಂದನು. ಹಾಗೆ ಗೌತಮ ಗಣಧರನು ವಟುವೇಷಧಾರಿಯಾದ ಇಂದ್ರನೊಂದಿಗೆ ಭಗವಾನ್ ಮಹಾವೀರರ ಸಮವಸರಣಕ್ಕೆ ಹೋದನು. ಸಮವಸರಣಕ್ಕೆ ಬಂದೊಡನೆ ಮೊದಲು ಅವನ ಕಣ್ಣಿಗೆ ಬಿದ್ದದ್ದು ಮಾನಸ್ತಂಭ. ಅದನ್ನು ನೋಡಿದ ಗೌತಮನ ಮಾನ ಅರ್ಥಾತ್ ಗರ್ವ ನಷ್ಟವಾಯಿತು. ಆತ ಅತ್ಯಂತ ನಮ್ರೀಭೂತನಾದನು.

ಅನಂತರ ಗೌತಮ ಗಣಧರರು ಭಗವಾನ್ ಮಹಾವೀರರೊಂದಿಗೆ ಆತ್ಮನ ವಿಚಾರ



ವಾಗಿ ಅರವತ್ತು ಸಾವಿರ ಪ್ರಶ್ನೆಗಳನ್ನು ಕೇಳಿದ. ಅವುಗಳ ಕೆಲವು ತುಣುಕುಗಳು ಹೀಗಿದ್ದವು- ''ಆತ್ಮನು ನಿತ್ಯನಾಗಿದ್ದಾನೆ, ಕೆಲವರು ಆತ್ಮ ನಷ್ಟವಾಗುತ್ತದೆ ಎನ್ನುತ್ತಾರೆ, ಕೆಲವರು ಆತ್ಮನು ನಿತ್ಯ ಎನ್ನುತ್ತಾರೆ. ಕೆಲವರು ಅದನ್ನು ಪರಿವರ್ತನಶೀಲ ಎನ್ನುತ್ತಾರೆ. ಪರಲೋಕ ಇದೆ ಎಂದು ಕೆಲವರು ಮನ್ನಿಸುತ್ತಾರೆ. ಸತ್ತ ಬಳಿಕ ಎಲ್ಲವೂ ಸಮಾಪ್ತವಾಯಿತು ಎಂದು ಅನೇಕರು ಹೇಳುತ್ತಾರೆ; ನನಗೆ ಇದರಿಂದ ತುಂಬಾ ಕಳಕಳಿ ಉಂಟಾಗಿದೆ. ಆದುದರಿಂದ ನನಗೆ ಜ್ಞಾನ ನೀಡಿರಿ.'' ಅದಕ್ಕೆ ಭಗವಾನ್ ಮಹಾವೀರರು ಹೀಗೆ ಉತ್ತರಿಸಿದರು. ''ಆತ್ಮನು ನಿತ್ಯನೂ ಹೌದು, ಅನಿತ್ಯನೂ ಹೌದು. ಅದನ್ನು ಈಗ ನಾವು ಕೊಡುವ ಒಂದು ಉದಾಹರಣೆಯಿಂದ ಸರಿಯಾಗಿ ತಿಳಿಯಬಹುದು. ನಮ್ಮ ಬೆರಳು ನೇರವಾಗಿದೆ. ಅದನ್ನೀಗ ಡೊಂಕು ಮಾಡೋಣ. ಮತ್ತೊಮ್ಮೆ ಅದನ್ನು ಹಿಂದಕ್ಕೆ ಬಾಗಿಸೋಣ ಈ ಅವಸ್ಥೆಗಳಲ್ಲಿ ಬೆರಳಿನ ಸಹಜವಾದ ನಿಲುವು ಇಲ್ಲವಾಯಿತು. ಕೊಂಕುತನ್ನವಾಯಿತು. ಆದರೆ ಬೆರಳು ಹಾಗೆಯೇ ಇದೆ. ಅದು ನಷ್ಟವಾಗಲಿಲ್ಲ. ಇಲ್ಲಿ ಮೂರು ಪ್ರಕ್ರಿಯೆಗಳೂ ಒಮ್ಮೆಲೇ ನಡೆದಂತಾಗಿದೆ.

**ಉತ್ಪಾದವ್ಯಯಧ್ರೌವ್ಯಯುಕ್ತಂ ಸತ್** *(ತ.ಸೂ.)*

ಪ್ರತಿಯೊಂದು ವಸ್ತುವೂ ಪರಿಣಮನಶೀಲ, ಪರಿವರ್ತನಶೀಲ. ಭಗವಾನ್ ಮಹಾವೀರರು ಅದನ್ನು ಹೀಗೆ ಸಿದ್ಧಗೊಳಿಸಿದರು. ಒಂದು ಮಾವಿನ ಕಾಯಿ ಇದೆ. ಅದು ಈಗ ಹಸುರಾಗಿದೆ, ಹುಳಿಯಾಗಿದೆ. ಅದನ್ನು ಎರಡು ದಿನ ಹುಲ್ಲಿನಲ್ಲಿಟ್ಟು ಹಣ್ಣು ಮಾಡಲಾಯಿತು. ಈಗ ಅದೇ ಹಸಿರು ಬಣ್ಣ ಹಳದಿಯಾಯಿತು. ಹಣ್ಣು ಹುಳಿಯಿದ್ದುದು ಸಿಹಿಯಾಯಿತು. ಆದರೆ ಮಾವು ಮಾತ್ರ ಅದೇ ಅಲ್ಲವೇ.

ಮೊದಲು ತಲೆಯ ಮೇಲೆ ಕಪ್ಪು ಕೂದಲುಗಳಿದ್ದವು. ಈಗ ಅವು ಬಿಳಿಯಾಗಿವೆ. ಹಾಗದರೆ ಆ ಕೂದಲಿನ ಕಪ್ಪು ಎಲ್ಲಿ ಹೋಯಿತು ? ಕೂದಲುಗಳು ಅವೇ. ಒಂದು ವೇಳೆ ಅವುಗಳಿಗೆ ನೀವು ಬಣ್ಣ ಹಾಕಿ ಕಪ್ಪು ಮಾಡಿದರೂ, ಮತ್ತೆ ಅವು ಬಿಳಿಯೇ ಆಗಿ ಬಿಡುತ್ತವೆ. ಪ್ರಕೃತಿ ಪರಿಣಾಮವಿದೆಯಲ್ಲಾ, ಅದು ನಿಯಮಾನುಸಾರವೇ ನಡೆಯುತ್ತದೆ. ನಾವೇನೋ ವೃದ್ಧಾಪ್ಯ ಬಾರದಿರಲೆಂದು ಅದಕ್ಕಾಗಿ ಕೂದಲಿಗೆ ಕಪ್ಪೇನೋ ಹಾಕುತ್ತೇವೆ. ಆದರೆ ವೃದ್ಧಾಪ್ಯ ಅದರಿಂದ ನಿಲ್ಲುತ್ತದೆಯೇ ? ಬಾಲ್ಯ-ಯೌವನ-ವೃದ್ಧಾಪ್ಯ, ಇವೆಲ್ಲ ಜೀವನದ ಕ್ರಮಗಳು. ಆದ ಕಾರಣ ನೀವು ಈ ವೃದ್ಧಾಪ್ಯಕ್ಕಾಗಲೀ, ಮರಣಕ್ಕಾಗಲೀ ಹೆದರುವುದೇಕೆ ?

**ಜಾತಸ್ಯ ಮರಣಂ ಧ್ರುವಂ ।**

ಮರಣ ನಿಶ್ಚಿತ, ಮರಣವೂ ಸುಖಕರ. ತತ್ತ್ವಾರ್ಥ ಸೂತ್ರದಲ್ಲಿ ಹೀಗೆ ಹೇಳಿದ್ದಾರೆ-

**ಸುಖ ದುಃಖ ಜೀವಿತ ಮರಣೋಪಗ್ರಹಾಶ್ಚ ।**

ಯಾವ ರೀತಿಯಲ್ಲಿ ಜನನವು ಉಪಕಾರವೋ ಅದೇ ರೀತಿ ಮರಣವೂ ಉಪಕಾರವಾದುದು. ಸುಖವು ಉಪಕಾರವಾದರೆ ದುಃಖ ಕೂಡಾ ಉಪಕಾರವೇ. ಹೀಗಿದ್ದರೂ ಯಾರೊಬ್ಬರೂ ''ದುಃಖಿಯಾಗಿರು'' ಎಂಬ ಆಶೀರ್ವಾದವನ್ನು ಬಯಸುವುದಿಲ್ಲ. ಹಾಗೆ

ಯಾರೂ ಆಶೀರ್ವಾದ ಕೊಡುವುದೂ ಇಲ್ಲ. ಆದರೆ ಎಷ್ಟೇ ದೊಡ್ಡ-ದೊಡ್ಡ ಮಹಾಪುರುಷರಾಗಿರಲಿ ಅಥವಾ ರಾಜಾಧಿರಾಜರಾಗಿರಲಿ, ಅವರೆಲ್ಲಾ ಆರಿಸಿಕೊಂಡದ್ದು ಸುಖವನ್ನಲ್ಲ, ದುಃಖವನ್ನೇ. ಮಹಾರಾಣಾ ಪ್ರತಾಪನು ಮೊಗಲರ ಅಧೀನತೆಯನ್ನು ಸ್ವೀಕರಿಸುವ ಸಂದರ್ಭವೊದಗಿದಾಗ ಅವನು ಎಷ್ಟೊಂದು ದುಃಖ ಪಡಬೇಕಾಗಿರಲಿಲ್ಲ, ಹಸಿವೆಯಿಂದ ಸಾಯಬೇಕಾಗಿರಲಿಲ್ಲ, ವನ-ವನಗಳಲ್ಲಿ ತಿರುಗಾಡಬೇಕಾಗಿರಲಿಲ್ಲ. ಗಾಂಧೀಜಿಯವರು ಒಂದು ವೇಳೆ ಇಂಗ್ಲೀಷರ ಮಾತನ್ನು ಕೇಳುತ್ತಿದ್ದರೆ ಅವರಿಗೆ ಚಿನ್ನದ ಸಿಂಹಾಸನ ದೊರಕುತ್ತಿತ್ತು. ನಾವಾದರೋ ಸದೈವ ಸುಖವನ್ನೇ ಪಡೆಯಲು ಬಯಸುತ್ತೇವೆ. ಆದರೆ ಸುಖ ಸಿಗುವುದೇ ಇಲ್ಲ. ಅದರ ಬಗ್ಗೆ ಹೇಳಿರುವ ಒಂದು ರಚನೆಯನ್ನು ಇಲ್ಲಿ ನೋಡಿ.

**ಜಂ ಜಸ್ಸ ಜಮ್ಮಿ ದೇಸೇ ಜೇಣ ವಿಹಾಣೇಣ ಜಮ್ಮಿ ಕಾಲಮ್ಮಿ ।**
**ಣಾಣದಂ ಜಿಣೇಣ ಣಿಯದಂ ಜಮ್ಮಂ ವಾ ಅಹವ ಮರಣಂ ವಾ ॥**

ಜನನ-ಮರಣ, ಸುಖ-ದುಃಖ, ಖೇದ-ಸ್ವೇದ, ಇವೆಲ್ಲಾ ಜೀವನದಲ್ಲಿ ನಡೆಯುತ್ತಲೇ ಇರುತ್ತದೆ. ಅದು ಹಿಂದಿನ ಜನ್ಮದಲ್ಲಿ ಮಾಡಿದ ಪಾಪ-ಪುಣ್ಯಗಳ ಫಲವಾಗಿರುತ್ತದೆ. ಅದನ್ನು ಭೋಗಿಸಲೇ ಬೇಕಾಗುತ್ತದೆ.

ಇಬ್ಬರು ಅಣ್ಣ-ತಮ್ಮಂದಿರಿದ್ದಾರೆ. ಇಬ್ಬರೂ ವ್ಯಾಪಾರ ಮಾಡುತ್ತಾರೆ. ಅವರಲ್ಲಿ ಒಬ್ಬ ಸಹೋದರನಿಗೆ ಲಾಭವೇ ಲಾಭ. ಇನ್ನೊಬ್ಬನಿಗೆ ಹಾನಿಯೇ ಹಾನಿ. ಒಬ್ಬ ವಿದ್ಯಾರ್ಥಿ ವರ್ಷವಿಡೀ ಓದುತ್ತಾನೆ ಹಾಗಿದ್ದೂ ಅಸಫಲ. ಇನ್ನೊಬ್ಬ ವಿದ್ಯಾರ್ಥಿ ಓದುವುದು ಕಡಿಮೆ. ಆದರೂ ಒಳ್ಳೆಯ ಅಂಕಗಳಿಂದ ಉತ್ತೀರ್ಣನಾಗುತ್ತಾನೆ. ಇಬ್ಬರು ವಿದ್ಯಾರ್ಥಿಗಳೂ ಕಲಿಸಿದ ಅಧ್ಯಾಪಕರು ಒಬ್ಬರೇ; ಆದರೂ ಹಾಗೇಕಾಯಿತು ? ಅಧ್ಯಾಪಕರು ಅವರಿಗೆ ಏನನ್ನೂ ಕೊಡುವುದಿಲ್ಲ, ಅವರು ನಿಮಿತ್ತಮಾತ್ರ. ಅಧ್ಯಾಪಕರು ಜ್ಞಾನವನ್ನು ತುಂಬಿಸಿ ಕೊಡುವುದಾಗಿದ್ದರೆ ಹಾಗೆ ಮಾಡಬಹುದಿತ್ತು. ಹೇಗೆಂದರೆ ಟ್ಯೂಬಿನಲ್ಲಿ ಗಾಳಿ ತುಂಬಿಸಿದ ಹಾಗೆ. ಆ ರೀತಿ ಸಾಧ್ಯವಾಗದಿದ್ದರೆ ಎಲ್ಲರನ್ನೂ ಪ್ರಥಮ ಶ್ರೇಣಿಯಲ್ಲೇ ಪಾಸ್ ಮಾಡಬಹುದಾಗಿತ್ತು. ಇದರ ತಾತ್ಪರ್ಯವೇನೆಂದರೆ ಯಾರು ಯಾರಿಗೂ ಜ್ಞಾನವನ್ನು ಧಾರೆಯೆರೆದು ಕೊಡಲಾರರು. ಹಾಗೆಯೇ ಯಾರಿಂದಲೂ ಪಡೆಯಲೂ ಸಾಧ್ಯವಿಲ್ಲ. ಆದರೆ ನಿಮಿತ್ತ ಮಾತ್ರವಿರುವ ಅಧ್ಯಾಪಕರ ಸಹಾಯವನ್ನು ಪಡೆದು, ಚಿಂತನೆ ಮಾಡಿ ವಿದ್ಯಾರ್ಥಿಗಳು ತಮ್ಮ ಅಂತರಂಗದಲ್ಲೇ ಪ್ರಕಟಪಡಿಸಬಲ್ಲರು.

ಚೂರಿಯನ್ನು ಸಾಣೆ ಹಾಕಿ ತಿಕ್ಕುತ್ತಾರೆ. ಮತ್ತೆ ಅದರಲ್ಲಿ ಹರಿತ ಬರುತ್ತದೆ ಹೇಗೆ ? ಅದೇನು ಸಾಣೆಯು ಅದಕ್ಕೆ ಹರಿತ ಕೊಟ್ಟಿತ್ತೆ ? ಇಲ್ಲ, ಆಗಿರುವುದೇನೆಂದರೆ ಚೂರಿಯಲ್ಲಿ ಸ್ವಯಂ ಶಕ್ತಿಯಿದೆ. ಸಾಣೆಗೆ ಹಾಕಿದಾಗ ಅದರಲ್ಲಿ ಅಡಗಿದ್ದ ಶಕ್ತಿಯು ಪ್ರಕಟವಾಯಿತು ಅಷ್ಟೇ. ಆದುದರಿಂದ ಸಾಣೆಯು ಕೇವಲ ಚೂರಿಯ ಶಕ್ತಿಯು ಪ್ರಕಟವಾಗಲು ನಿಮಿತ್ತವಾಯಿತು. ಇದೇ ರೀತಿ ಅಧ್ಯಾಪಕರು ವಿದ್ಯಾರ್ಥಿಗಳ ಜ್ಞಾನವು ಪ್ರಕಟವಾಗಲು ನಿಮಿತ್ತಮಾತ್ರರಾಗುತ್ತಾರೆ. ಇದರಲ್ಲಿ ನಿಮಿತ್ತ ಮತ್ತು ನೈಮಿತ್ತಿಕ ಸಂಬಂಧವಿದೆ. ನಿಮಿತ್ತವು ಸ್ವಯಂ



ಏನನ್ನೂ ಮಾಡುವುದಿಲ್ಲ, ಆದರೆ ನಿಮಿತ್ತವಿಲ್ಲದೆ ಏನೂ ಆಗುವುದಿಲ್ಲ. ಅವೆರಡಕ್ಕೂ ಮನ್ನಣೆಯಿದೆ. ಅಲ್ಲಿ ಏಕಾಂತಕ್ಕೆ ಬೆಲೆಯಿಲ್ಲ. ಹಾಗೆಂದು ಜೈನ ಶಾಸ್ತ್ರಗಳಲ್ಲಿ ಹೇಳಿದೆ. ಸುಖ-ದುಃಖ, ಖೇದ-ಸ್ವೇದ, ಜನನ-ಮರಣ ಮತ್ತು ಅವೆರಡೂ ಉಪಕಾರಕವಾಗಿವೆ. ಜನನವನ್ನು ಸರ್ವರೂ ಉಪಕಾರಕವೆನ್ನುತ್ತಾರೆ, ಮಂಗಲಮಯವೆನ್ನುತ್ತಾರೆ. ಆದರೆ ಮರಣವನ್ನು ಉಪಕಾರಕ, ಮಂಗಲಮಯವೆಂದು ಮನ್ನಿಸುವುದು ಹೇಗೆ ? ಜನನ-ಮರಣವನ್ನು ಸಮಾನವೆಂದು ಮನ್ನಿಸುವುದು ಹೇಗೆ ?

ಇಂದು ಇಡೀ ವಿಶ್ವದಲ್ಲಿ ಒಂದು ಆಂದೋಲನ ನಡೆಯುತ್ತಾ ಇದೆ. ಜನಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ, ವಾಸಕ್ಕೆ ಸ್ಥಳವಿಲ್ಲ, ಇದು ಹಾಗೆಯೇ ಮುಂದುವರಿಯಿತೆಂದಾದರೆ ಜನನವೇ ಹೆಚ್ಚುತ್ತಾ ಹೋಗಿ ಮರಣ ಕಡಿಮೆಯಾಗುತ್ತಾ ಹೋದರೆ ಇರುವ ಜನರಿಗೆ ವಸತಿಯ ವ್ಯವಸ್ಥೆ ಹೇಗೆ? ಒಂದು ವಂಶ ಅಥವಾ ಮನೆತನದಲ್ಲಿ ಎಷ್ಟೋ ಮಂದಿ ಸತ್ತವರ ಬಗ್ಗೆ ನಾವು ತಿಳಿಯುತ್ತೇವೆ. ಒಂದು ವೇಳೆ ಚಮತ್ಕಾರಕವಾಗಿ ಆ ಮೃತ ಪಟ್ಟವರೆಲ್ಲ ಪುನಃ ಎದ್ದು ಬಂದರೆಂದಾದರೆ ಈ ಜಗತ್ತಿನಲ್ಲಿ ಇರುವುದಕ್ಕೆ ಜಾಗವೇ ಇರಲಾರದು. ಹಾಗೆಯೇ 'ಜನನ' ಕೂಡಾ, ನಿಂತುಹೋಗಿ ಮರಣ ನಡೆಯುತ್ತಲೇ ಇದ್ದರೂ ಕೂಡಾ ಇಡೀ ಪೃಥ್ವಿಯು ಖಾಲಿಯಾಗಿಯೇ ಉಳಿಯಬಹುದು. ನಮ್ಮ ಆಚಾರ್ಯರು ಬಹುಶಃ ದೊಡ್ಡ ಚಿಂತಕರಾಗಿದ್ದರು, ದಾರ್ಶನಿಕರಾಗಿದ್ದರು, ಜ್ಞಾನಿಗಳಾಗಿದ್ದರು, ವೈಜ್ಞಾನಿಕರಾಗಿದ್ದರು. ಅವರು ಉದ್ದೇಶಪೂರ್ವಕವಾಗಿಯೇ ಈ ದೃಷ್ಟಿಯಿಂದ ಮರಣವನ್ನು ಕೂಡಾ ಮಂಗಲಮಯವನ್ನಾಗಿ ಮಾಡಿದರು. ಈ ಮಾತನ್ನು ಸಮತಾಭಾವದಿಂದ ಯೋಚಿಸಿದ ಬಳಿಕ ಯರೊಬ್ಬರೂ ಮರಣಕ್ಕಾಗಿ ಅಳಲಾರರು. ಒಂದು ವೇಳೆ ಯಾರಾದರೂ ''ನಿಮಗೆ ನಾಳೆ ಮರಣ ಬರಲಿದೆ'' ಎಂದರೆ ಅದಕ್ಕಾಗಿ ಹೆದರಲಾರ, ಆಕ್ರಂದನ ಮಾಡಲಾರ. ''ಹಾಯ್ ಮರಣ ಬಂತು'' ಎಂದಷ್ಟೇ ಹೇಳುವನು. ಸಮ್ಯಗ್ ದೃಷ್ಟಿಯಂತೂ ಎಂದೆಂದೂ ಮರಣಕ್ಕಾಗಿ ಅಳುವುದಿಲ್ಲ.

ಒಬ್ಬ ಚಿಕ್ಕ ಬಾಲಕನಿದ್ದ. ಅವನು ತನ್ನ ತಂದೆಯೊಡನೆ ಒಂದು ಜಾತ್ರೆಗೆ ಹೋಗಲು ಹಠ ಮಾಡಿದ. ತಂದೆ ಅವನನ್ನು ಜಾತ್ರೆ ತೋರಿಸಲು ಕರೆದುಕೊಂಡು ಹೋದ. ಅಲ್ಲಿ ಬಾಲಕ ಸಂತೆಯನ್ನು ನೋಡಿದ. ಅಲ್ಲೊಂದು ಮಣ್ಣಿನ ಆಟದ ಬೊಂಬೆಯಿತ್ತು. ಅದು ಬಾಲಕನಿಗೆ ಇಷ್ಟವಾಯಿತು. ತಂದೆ ಅದನ್ನು ಮಗನಿಗೆ ತೆಗೆಸಿಕೊಟ್ಟ. ಬೊಂಬೆಯೇನೋ ಬಹಳ ಸುಂದರವಾಗಿತ್ತು. ಬಣ್ಣ-ಬಣ್ಣದಿಂದ ಕೂಡಿತ್ತು. ಜಾತ್ರೆಯಲ್ಲಿ ತಿಂಡಿ-ತಿನಿಸು ಇತ್ಯಾದಿಗಳನ್ನು ಪೂರೈಸಿ, ಅತ್ತಿತ್ತ ಸುತ್ತಾಡಿ, ತಂದೆ-ಮಗ ಮನೆಗೆ ಬಂದರು. ಮನೆಗೆ ಬಂದ ಮೇಲೂ ಆ ಹುಡುಗ ಬೊಂಬೆಯನ್ನು ಹಿಡಿದು ಆಡುತ್ತಲೇ ಇದ್ದ. ಇದ್ದಕ್ಕಿದ್ದಂತೆ ಆ ಮಣ್ಣಿನ ಬೊಂಬೆ ಕೈಯಿಂದ ಜಾರಿ ನೆಲಕ್ಕೆ ಬಿದ್ದು ಒಡೆದು ಹೋಯಿತು. ಬಾಲಕನಿಗೆ ಅಳುವೇ ಅಳು. ''ನನ್ನ ಬೊಂಬೆ ಬಿದ್ದುಹೋಯಿತು, ಒಡೆದುಹೋಯಿತು'' ಎಂದು

ಹೇಳುತ್ತಾ ಅಳುತ್ತಲೇ ಇದ್ದ. ತಂದೆ-ತಾಯಿಯಾದರೋ ಬೊಂಬೆ ಒಡೆದುಹೋದುದರ ಬಗ್ಗೆ ಅಳುವುದಿರಲಿ, ನಗುತ್ತಲೇ ಇದ್ದಾರೆ. ಬಾಲಕ ಅಲ್ಲಿ ಅಳುವುದು, ತಂದೆ-ತಾಯಿ ಇಲ್ಲಿ ನಗುವುದು. ಅದೇಕೆ ಹಾಗೆ ? ಕಾರಣ ಇಷ್ಟೇ, ಆ ಆಟದ ಬೊಂಬೆ ಮಣ್ಣಿನದು, ಬಿದ್ದರೆ ತುಂಡಾಗುವುದು ಅದರ ಸ್ವಭಾವ. ಅದಕ್ಕೆ ಅಳುವುದೇಕೆ ? ಆದರೆ ಬಾಲಕನಿಗೆ ಅದು ಗೊತ್ತಿದೆಯೇ ? ಆದುದರಿಂದಲೇ ಅವನು ಅಳುತ್ತಿದ್ದ. ಇತ್ತ ತಂದೆ-ತಾಯಿಗೆ ಅದರ ಸ್ವಭಾವ ಗುಣ ಗೊತ್ತಿದೆ. ಅದಕ್ಕಾಗಿ ಅವರು ನಗುತ್ತಿದ್ದರು. ಹಾಗೆಯೇ ಈ ಶರೀರ ಕೂಡಾ ಒಂದು ಆಟದ ಬೊಂಬೆಯೇ. ಸಮ್ಯಗ್ದೃಷ್ಟಿಗಳು ಮರಣವು ನಿಶ್ಚಿತವೆಂದು ತಿಳಿದಿದ್ದಾರೆ, ಆದ ಕಾರಣ ಅವರು ಅಳುವುದಿಲ್ಲ. ಮಿಥ್ಯಾದೃಷ್ಟಿಗಳಿಗೆ ಅದು ಗೊತ್ತಿಲ್ಲ ಅದಕ್ಕಾಗಿ ಅಳುತ್ತಾರೆ. ಇದೇ ಸಮ್ಯಗ್‌ದೃಷ್ಟಿಗೂ ಮಿಥ್ಯಾದೃಷ್ಟಿಗೂ ಇರುವ ಅಂತರ. ಜಗತ್ತಿನಲ್ಲಿ ಹುಟ್ಟಿದ ಪ್ರಾಣಿಗಳೆಲ್ಲರೂ ತಮ್ಮ ಜನನದೊಂದಿಗೆ ಮರಣವನ್ನು ಹೊತ್ತುಕೊಂಡೇ ಬರುತ್ತಾರೆ. ಮರಣವನ್ನು ಬೇಡವೆಂದು ಬಿಡುವುದಕ್ಕಾಗುವುದಿಲ್ಲ. ಮರಣವೇ ಇಲ್ಲವೆಂದಾದರೆ ಮತ್ತೆ ಅಳುವ ಪ್ರಸಂಗವೇ ಇಲ್ಲ. ಆದರೆ ಅದು ಸ್ವಾಭಾವಿಕ ಮತ್ತು ಅನಿವಾರ್ಯ.

ದುಃಖವಿರುವುದು ಏಕೆಂದರೆ ಅದಕ್ಕೆ ಹೆದರಿ ಮಾನವನು ಧರ್ಮಮಾರ್ಗದಲ್ಲಿ ನಡೆಯುತ್ತಾನೆ. ಇನ್ನು ಸುಖವಿರುವುದು ಏಕೆಂದರೆ ಅದರಿಂದ ಮನುಷ್ಯನು ಪುರುಷಾರ್ಥ ಸಾಧಿಸುತ್ತಾನೆ. ಒಂದು ವೇಳೆ ಸುಖ ಇಲ್ಲವೆಂದಾದರೆ ಮನುಷ್ಯ ಏಕೆ ಪುರುಷಾರ್ಥ ಸಾಧಿಸುತ್ತಾನೆ ? ಆದುದರಿಂದಲೇ ಒಬ್ಬ ಕವಿ ಹೀಗೆ ಹೇಳಿದ್ದಾನೆ;-

**ದುಃಖ ಭೀ ಮಾನವ್ ಕೀ ಸಂಪತ್ತೀ ಹೈ ।**
**ತೂ ಕ್ಯೋಂ ದುಃಖ್ ಸೇ ಘಬ್‌ರಾತಾ ಹೈ ? ॥**
**ದುಃಖ್ ಆಯಾ ಹೈ ತೋ ಜಾಯೇಗಾ ।**
**ಸುಖ್ ಆಯಾ ಹೈ ತೋ ಜಾಯೇಗಾ ॥**

ಮತ್ತೆ ಏಕೆ ಹೆದರುತ್ತೀ ? ಸುಖ-ದುಃಖ ಇವೆರಡೂ ಬರುತ್ತವೆ, ಹೋಗುತ್ತವೆ. ಜೀವನದಲ್ಲಿ ಸುಖ-ದುಃಖವನ್ನು ಅನುಭವಿಸದಿರುವ ಮಾನವ ಜಗತ್ತಿನಲ್ಲಿದ್ದಾನೆಯೇ ? ಶ್ರೀರಾಮನಿಗೋ ರಾಜಮಹಲ್-ಸಿಂಹಾಸನವನ್ನು ತ್ಯಜಿಸಿ ಹದಿನಾಲ್ಕು ವರ್ಷ ಕಾಡಿನಲ್ಲಿ ಕಷ್ಟಪಡಬೇಕಾಯಿತು. ಪಾಂಡವರು ಕೂಡಾ ಹದಿಮೂರು ವರ್ಷಗಳ ಕಾಲ ವನವಾಸವನ್ನು ಅನುಭವಿಸಬೇಕಾಯಿತು. ಅಂಜನಾ, ಸೀತಾ, ಇವರು ಕೂಡಾ ವನ-ವನಗಳಲ್ಲಿ ಅಲೆಯಬೇಕಾಯಿತು. ಮಹಾಪುರುಷರ ಜೀವನದಲ್ಲೂ ದುಃಖಗಳು ಬರುತ್ತಲೇ ಇದ್ದವು.

ಮಹಾಭಾರತದಲ್ಲಿ ಒಂದು ಘಟನೆ ಬರುತ್ತದೆ. ಯುದ್ಧಭೂಮಿಯಲ್ಲಿ ಅಭಿಮನ್ಯು ಮಡಿದುಹೋದ. ವೃದ್ಧೆಯಾದ ಕುಂತಿ ಮರದ ಕೆಳಗೆ ಕುಳಿತಿದ್ದಳು. ಮೂರು ದಿನಗಳ ಕಾಲ ಅನ್ನ-ಪಾನಾದಿಗಳಿಲ್ಲ, ಆಗಲೇ ಅವಳಿಗೆ ಅಭಿಮನ್ಯುವಿನ ಮರಣ ವಾರ್ತೆ ಸಿಕ್ಕಿತು. ಮೊಮ್ಮಗನು ಮರಣ ಹೊಂದಿದ ದುಃಖದ ಸಮಾಚಾರವನ್ನು ಕೇಳಿದ ಆಕೆ ಕೋಲ



ನೂರಿಕೊಂಡು ಶವದ ಬಳಿಗೆ ಹೋದಳು.

**ಗಾತ್ರಂ ಸಕುಂಚಿತಂ ಗತಿವಿಗಲಿತಾ ದಂತಾಶ್ಚನಾಶಂಗತಾ ।**
**ದೃಷ್ಟಿರ್ಭ್ರಷ್ಯತೇ ರೂಪಮೇವಹಸತೇ ವಕ್ತ್ರಂ ಚ ಲಾಲಾಯಿತೇ ॥**

ಆಕೆ ತನಗೇ ಧಿಕ್ಕಾರ ಹೇಳಿಕೊಳ್ಳುತ್ತಿದ್ದಳು. ''ನನ್ನ ಹಲ್ಲುಗಳು ಉದುರಿಹೋಗಿವೆ. ಕಣ್ಣುಗಳಿಂದ ನೋಡುವುದಕ್ಕಾಗುವುದಿಲ್ಲ. ನಡೆಯುವುದಕ್ಕೂ ಆಗುವುದಿಲ್ಲ. ಕೂದಲು ಬಿಳಿಯಾಗಿದೆ. ಇಂತಹ ನನ್ನ ಶರೀರವನ್ನು ನೋಡಿ ಮಕ್ಕಳು ನಗುತ್ತಾರೆ.'' ಕುಂತಿ ಮನಸ್ವಿನಿಯಾಗಿದ್ದಳು. ಶ್ರೀಕೃಷ್ಣ ಮತ್ತು ಅರ್ಜುನ ಇವರಿಬ್ಬರೂ ಅವಳ ಕಡೆಗೆ ಕಣ್ಣುಗಳನ್ನು ಜೋಡಿಸುವಂತಿರಲಿಲ್ಲ.

**ವಾಸುದೇವ ಜರಾಕಷ್ಟಂ, ಕಷ್ಟಂ ನಿರ್ಧನ ಜೀವನಂ ।**
**ಪೌತ್ರ ಶೋಕೋ ಮಹಾಕಷ್ಟಂ, ಕಷ್ಟಾತ್‌ಕಷ್ಟತರಂ ಕ್ಷುಧಾ ॥**

ಕುಂತಿ ಹೇಳಿದಳು- ''ಮೂರು ದಿವಸಗಳಿಂದ ನಾನು ಅನ್ನ-ಪಾನಾದಿಗಳನ್ನು ತೆಗೆದುಕೊಳ್ಳಲಿಲ್ಲ. ಆದರೆ ಅದಕ್ಕಾಗಿ ನನಗೆ ಸ್ವಲ್ಪವೂ ದುಃಖವಾಗಲಿಲ್ಲ. ವೃದ್ಧಾಪ್ಯ ಬಂತು, ಅದಕ್ಕೆ ಕೂಡಾ ನನಗೆ ಚಿಂತೆ ಉಂಟಾಗಲಿಲ್ಲ. ಆದರೆ ತಂದೆ ಅರ್ಜುನ ಗಾಂಡೀವ ಧನುರ್ಧಾರಿ, ನೀನು ಶ್ರೀಕೃಷ್ಣ ಸುದರ್ಶನ ಚಕ್ರಧಾರಿ. ಹೀಗಿದ್ದೂ ನೀವು ನನ್ನ ಮೊಮ್ಮಗನನ್ನು ಉಳಿಸಲಾರದೆ ಹೋದಿರಾ ? ಆಗ ಶ್ರೀಕೃಷ್ಣನು ಕುಂತಿಗೆ ಹೀಗೆ ಉತ್ತರ ಕೊಡುತ್ತಾನೆ;-

**ನ ಕರ್ತವ್ಯಂ ನ ಕರ್ಮಾಣಿ, ಲೋಕಸ್ಯ ಸುಜಾತಿ ಪ್ರಭುಃ ।**
**ನ ಕರ್ಮಫಲ ಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥**

ಹೇ ಜಗನ್ಮಾತಾ ! ನಾನು ಜನನ-ಮರಣದೊಂದಿಗೆ ಯಾವುದೇ ಹಸ್ತಕ್ಷೇಪ ಮಾಡಲು ಶಕ್ತನಲ್ಲ, ನನ್ನ ಮೇಲೆ ಯಾವುದೇ ದೋಷವನ್ನೂ ಆರೋಪಿಸಬೇಡ. ಜನನ-ಮರಣಗಳೆರಡೂ ಎಲ್ಲರ ಜೊತೆಯಲ್ಲೇ ಬಂದಿರುತ್ತವೆ. ಅದರ ಬಗ್ಗೆ ನಾನು ಏನನ್ನೂ ಮಾಡಲಾರೆ. ಕರ್ಮದ ಮುಂದೆ ಯಾರು ಏನನ್ನು ಮಾಡಲು ಸಾಧ್ಯ ? ತಾಯೇ, ನನ್ನ ಮೇಲೆ ದೋಷ ಹೊರಿಸಬೇಡಿ.

ಮಣ್ಣಿನ ಬೊಂಬೆ ಒಡೆದುಹೋದಾಗ ಬಾಲಕ ಅಳುತ್ತಾನೆ. ಜ್ಞಾನಿ ಅಳುವುದಿಲ್ಲ. ಮರಣ ಬಂದಾಗ ಅಳುವುದಲ್ಲ, ಮೃತ್ಯುವನ್ನು ಸ್ವಾಗತಿಸಿ, ಅಳಲು ತೊಡಗಿದಿರೆಂದಾದರೆ ಭಾವ ಕೆಟ್ಟುಹೋಗುತ್ತದೆ. ಪರಿಣಾಮ ಹಾಳಾಗುತ್ತದೆ, ಭವಿಷ್ಯ ನಷ್ಟವಾಗುತ್ತದೆ. ಮುಂದಿನ ಭವ ಕೆಡುತ್ತದೆ. ಜೀವನವಿಡೀ ಮಾಡಲ್ಪಟ್ಟ ಜಪ-ತಪ, ಪೂಜಾ-ಪಾಠ, ಧರ್ಮ-ಧ್ಯಾನ ಎಲ್ಲವೂ ಕೆಟ್ಟುಹೋಗಬಹುದು. ಆದಕಾರಣ ಮರಣವನ್ನು ಸ್ವಾಗತಿಸಿರಿ.

– ॐ –

## ಧರ್ಮವರ್ಧನೆಯೇ ಪುರುಷಾರ್ಥ, ಅದರಿಂದಲೇ ಮೋಕ್ಷ ಲಭ್ಯ

ಮಹಾನುಭಾವರೇ ! ಯಾವ ಪರಿವಾರದಲ್ಲಿ, ಮನೆಯಲ್ಲಿ, ವಂಶದಲ್ಲಿ ಧರ್ಮವಿರುತ್ತದೋ ಅದನ್ನೇ 'ವಂಶ' ಅಥವಾ ಮನೆತನವೆಂದು ಹೇಳುತ್ತಾರೆ. ಯಾವ ಮನೆಯಲ್ಲಿ ಧರ್ಮವಿರುವುದಿಲ್ಲವೋ, ಅಧರ್ಮ ನುಗ್ಗಿಕೊಂಡಿರುತ್ತದೋ, ಆ ಮನೆಯು ಹಾಳಾದುದೆಂದೇ ತಿಳಿಯಬೇಕು. ಬೇಕಾದರೆ ಆ ಮನೆಯಲ್ಲಿ ಎಷ್ಟೇ ಸಂಪತ್ತು, ವೈಭವಗಳಿರಲಿ; ಆ ಮನೆ ನಷ್ಟವಾದುದೆಂದೇ ಭಾವಿಸಬೇಕಾಗುತ್ತದೆ. ಯಾವ ಮನೆಯಲ್ಲಿ ಧರ್ಮವಿರುತ್ತದೋ, ಆ ಮನೆತನ ಸರಿಯಾದುದು ಮತ್ತು ಸ್ಥಿರವಾದುದು. ಯಾವಾಗ ಅಧರ್ಮವು ಮನೆಗಳಲ್ಲಿ ಸೇರಿಕೊಂಡಿರುತ್ತದೋ, ಆ ಮನೆತನ, ಆ ವಂಶ ಸಮಾಪ್ತವಾದುದೆಂದೇ ಪರಿಗಣಿಸಬೇಕು.

ನಮ್ಮ ಶಾಸ್ತ್ರಗಳಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ವಿಧದ ಪುರುಷಾರ್ಥಗಳನ್ನು ಹೇಳಲಾಗಿದೆ. ಇದರಲ್ಲಿ ಧರ್ಮವು ಸರ್ವ ಪ್ರಥಮವಾದುದು. ಧರ್ಮದ ಬಗ್ಗೆ ಅನೇಕ ಪರಿಭಾಷೆಗಳನ್ನು ಹೀಗೆ ಕೊಡಲಾಗಿದೆ. 1. ಕರ್ತವ್ಯಮೇವ ಧರ್ಮಃ.... 2. ಧರ್ಮಸ್ಯ ಮೂಲಂ ದಯಾ..... 3. ಧಮ್ಮೋ ವತ್ಥುಸಹಾವೋ..... ಇತ್ಯಾದಿ.

ಧರ್ಮವು ಅತ್ಯಂತ ವಿಶಾಲವಾದುದು, ವಿಸ್ತೃತವಾದುದು. ಅದರಲ್ಲಿ ಅನೇಕ ಅಂಗ-ಉಪಾಂಗ, ಅಂಶಗಳು ಸಮಾವಿಷ್ಟಗೊಂಡಿವೆ. ಕಣ್ಣು, ಕಿವಿ, ಮೂಗು, ಕೈ, ಕಾಲು ಇತ್ಯಾದಿ ಅನೇಕ ಅಂಗಗಳು ಸೇರಿ ಶರೀರವಾಗುತ್ತದೆ. ಕೇವಲ ಮೂಗು ಶರೀರವಲ್ಲ, ಕೇವಲ ಕಣ್ಣು ಶರೀರವಲ್ಲ. ಅದೇ ರೀತಿ ಧರ್ಮಕ್ಕೂ ಅನೇಕ ಅಂಗಗಳಿವೆ ಮತ್ತು ಆ ಅಂಗಗಳ ಮೇಳವು ಧರ್ಮವೆಂದು ಕರೆಯಲ್ಪಡುತ್ತದೆ.

ಧರ್ಮವು ನಮ್ಮನ್ನು ಧಾರ್ಮಿಕ ಕ್ರಿಯೆ, ಧಾರ್ಮಿಕ ಆಚರಣೆ ಇತ್ಯಾದಿಗಳ ಕಡೆಗೆ ಒಯ್ಯುತ್ತದೆ. ಇದರಲ್ಲಿ ಪೂಜಾ-ಪಾಠ, ಸ್ತುತಿ-ಸ್ತೋತ್ರ, ವ್ರತ-ಉಪವಾಸ, ಭಕ್ತಿ-ತೀರ್ಥಯಾತ್ರೆ ಇತ್ಯಾದಿ ಅನೇಕ ಉಪಾಂಗಗಳಿವೆ.

**ಕೇನಾಪ್ಯುಪಾಯೇನಂ ಫಲಂ ಹಿ ಸಾಧ್ಯಮ್ ।**

ಫಲವನ್ನು ಪ್ರಾಪ್ತಿ ಮಾಡಿಕೊಳ್ಳುವಲ್ಲಿ ಅನೇಕ ಉಪಾಯಗಳಿವೆ. ಕೆಲವರು ಕಲ್ಲನ್ನು ಎಸೆದು ಹಣ್ಣನ್ನು ಉದುರಿಸುತ್ತಾರೆ. ಕೆಲವರು ಕಟ್ಟಿಗೆ ತುಂಡಿನಿಂದ ಮರದ ಗೆಲ್ಲಿಗೆ ಹೊಡೆದು ಅಲುಗಾಡಿಸಿ ಹಣ್ಣನ್ನು ಪಡೆಯುತ್ತಾರೆ. ಕೆಲವರು ಮರಕ್ಕೆ ಹತ್ತಿ ಹಣ್ಣುಗಳನ್ನು ಕೊಯ್ಯುತ್ತಾರೆ. ಇದೇ ರೀತಿ ಕೆಲವರು ಮಾಲೆ ಜಪಿಸಿ ಮನಸ್ಸಿಗೆ ಶಾಂತಿ ಪಡೆಯುತ್ತಾರೆ. ಕರ್ಮಕ್ಷಯ



ಮಾಡುತ್ತಾರೆ. ಕೆಲವರು ಧ್ಯಾನ ಮಾಡುತ್ತಾರೆ. ಕೆಲವರು ಪೂಜೆ-ಜಪ-ತಪ-ಭಜನೆ-ಕೀರ್ತನೆ ಮಾಡುತ್ತಾರೆ. ಧರ್ಮಕ್ಕೆ ಅನೇಕ ಸಾಧನೆಗಳಿವೆ. ಆಚಾರ್ಯ ಪೂಜ್ಯಪಾದರು ಧರ್ಮವನ್ನು ಕರ್ತಾ-ಕರ್ಮ ಇತ್ಯಾದಿ ಏಳು ವಿಭಕ್ತಿಗಳಲ್ಲಿ ನಿರೂಪಣೆ ಮಾಡಿದರು. ಕೆಲವು ವಿದ್ವಾಂಸರು ಷಷ್ಠೀ ವಿಭಕ್ತಿಯಾದ 'ಸಂಬಂಧ'ವನ್ನು ಕಾರಕವೆಂದು ಮನ್ನಿಸಲಿಲ್ಲ. ಏಕೆಂದರೆ 'ಸಂಬಂಧ'ವು ಎರಡು ವಸ್ತುಗಳನ್ನೊಳಗೊಂಡಿರುತ್ತೆ. ಆದರೆ ಜಯಧವಲಾದಲ್ಲಿ 'ಛಟ್ಠೀ ಭಿನ್ನಾಪಿ ಅತ್ಥಿ' ಅರ್ಥಾತ್ ಷಷ್ಠೀ-ಸಂಬಂಧವು ಭಿನ್ನವೂ ಆಗಿರುತ್ತದೆ ಮತ್ತು ಅಭಿನ್ನವೂ ಆಗಿರುತ್ತದೆ ಎಂದು ಹೇಳಲಾಗಿದೆ. ಅದು ಹೇಗೆಂದರೆ ಧನದಿಂದಾಗಿ ಒಬ್ಬ ವ್ಯಕ್ತಿ ಧನವಾನ್ ಆಗುತ್ತಾನೆ. ಆದರೆ ಧನ ಮತ್ತು ಧನವಾನ್ ಅವೆರಡೂ ಸರ್ವಥಾ ಪೃಥಕ್ ಆಗಿರುತ್ತವೆ. ಜ್ಞಾನದಿಂದಾಗಿ ಜ್ಞಾನವುಳ್ಳವನು ಜ್ಞಾನವಾನ್ ಎಂದು ಕರೆಯಲ್ಪಡುತ್ತಾನೆ. ಅಲ್ಲಿ ಜ್ಞಾನ ಮತ್ತು ಜ್ಞಾನವಾನ್ ಬೇರೆ ಪೃಥಕ್ ಅಲ್ಲ.

ಧರ್ಮವು ಮನುಷ್ಯನ ಮನಸ್ಸಿನಲ್ಲಿ ಹರ್ಷವನ್ನು ಉತ್ಪನ್ನಗೊಳಿಸುತ್ತದೆ. ಆನಂದದ ಅನುಭೂತಿ, ಪ್ರಸನ್ನತೆ, ಸಂವೇದನಶೀಲತೆ, ಮಂದಹಾಸ ಮೊದಲಾದವುಗಳನ್ನು ಪ್ರಕಟಗೊಳಿಸುತ್ತದೆ. ಮನಸ್ಸಿನಲ್ಲಿ ಆನಂದ ಉಂಟಾಯಿತೆಂದರೆ ಹೊರಗಡೆ ಮಂದಹಾಸ, ಪ್ರಸನ್ನತೆ ತನ್ನಿಂದ ತಾನೇ ಬರುತ್ತದೆ. ಯಾವ ಮನೆಯಲ್ಲಿ ಧರ್ಮವಿರುತ್ತದೋ, ಮನಸ್ಸಿನಲ್ಲಿ ಆನಂದವಿರುತ್ತದೋ ಮತ್ತು ಬಾಹ್ಯದಲ್ಲಿ ಮಂದಹಾಸ-ಪ್ರಸನ್ನತೆ ಇರುತ್ತದೋ ಅದನ್ನು 'ಮನೆತನ' ಎಂದು ಹೇಳುತ್ತಾರೆ. ಯಾವ ಮನೆಯಲ್ಲಿ ಧರ್ಮವಿಲ್ಲವೋ, ಆನಂದವಿಲ್ಲವೋ, ವ್ಯಸನದಲ್ಲಿ ಮುಳುಗಿದ ಜನರಿರುತ್ತಾರೋ, ಹೊಡೆದಾಟ-ಕಲಹ ಇತ್ಯಾದಿಗಳಿರುತ್ತದೋ ಅದನ್ನು 'ಮನೆತನ' ಎಂದು ಹೇಳಬಹುದೇ ? ವ್ಯಸನವು ವಂಶವನ್ನು , ಮನೆಯನ್ನು ನಷ್ಟಗೊಳಿಸುತ್ತದೆ.

ಜೂಜಿನ ಒಂದೇ ಒಂದು ವ್ಯಸನದ ಕಾರಣದಿಂದ ಯುಧಿಷ್ಠಿರನಿಗೆ ಹದಿಮೂರು ವರ್ಷ ವನವಾಸ ಅನುಭವಿಸಬೇಕಾಯಿತು. ಯುಧಿಷ್ಠಿರನಿಗೆ ಎಲ್ಲವೂ ಗೊತ್ತಿದ್ದರೂ ಚಾರಿತ್ರ ಮೋಹನೀಯದ ತೀವ್ರ ಉದಯದಿಂದ ಅವನು ಜೂಜಾಡಲು ಕುಳಿತನು ಮತ್ತು ತನ್ನ ರಾಜ್ಯ-ಕೋಶ ಸರ್ವಸ್ವವನ್ನೂ ಕಳೆದುಕೊಂಡನು. ವನವಾಸವನ್ನೇನೋ ಅನುಭವಿಸಿದ, ಆದರೆ ಆ ದೀರ್ಘಾವಧಿಯ ವನವಾಸದ ಕಾಲದಲ್ಲಿ ಅವನು ಧರ್ಮವನ್ನು ಬಿಡಲಿಲ್ಲ. ಪಾಂಡವ ಪುರಾಣದಲ್ಲಿ ಆಚಾರ್ಯ ಶುಭಚಂದ್ರರು ಅದನ್ನು ಹೀಗೆ ವರ್ಣನೆ ಮಾಡಿದ್ದಾರೆ- "ಅದು ವನವಾಸದ ಮೊದಲನೆಯ ದಿನವಾಗಿತ್ತು. ಕಾಡಿನಲ್ಲಿ ಪಂಚಪಾಂಡವರು ಒಂದು ಮರದ ಕೆಳಗೆ ಕುಳಿತಿದ್ದರು. ಆಗ ಒಬ್ಬ ವೃದ್ಧ ವ್ಯಕ್ತಿ ಬಂದನು. ಆತ ಬಹಳ ದುಃಖಿಯಾಗಿದ್ದ. ಆದರೆ ಅವನು ಪಾಂಡವರನ್ನು ನೋಡಿ ತನ್ನ ಮನಸ್ಸಿನಲ್ಲಿ ಹೀಗೆ ಹೇಳಿಕೊಂಡ- "ಈ ಪಾಂಡವರು ನನಗೆ ಬಹಳ ಉಪಕಾರ ಮಾಡಿದವರು. ಇವರು ನನ್ನ ಹಿತಚಿಂತಕರು. ಈ ಹೊತ್ತು ಅವರು ಕಾಡಿನಲ್ಲಿದ್ದಾರೆ ಎಂದು ತಿಳಿದು ನನ್ನ ಮನಸ್ಸಿಗೆ ತುಂಬಾ ದುಃಖವಾಯಿತು. ಅವರ ದುಃಖವನ್ನು ಸ್ವಲ್ಪ ಹಗುರ ಮಾಡೋಣವೆಂದು ನಾನಿಲ್ಲಿಗೆ ಬಂದೆ.

ಆದರೆ ಅವರಾದರೋ ಈ ಕಾಡಿನಲ್ಲಿ ಕೂಡಾ ಪ್ರಸನ್ನಚಿತ್ತರಾಗಿದ್ದಾರೆ. ರಾಜ ಮಹಲಿನಲ್ಲಿ ಪ್ರಸನ್ನತೆಯಿಂದಿರುವುದು ಬೇರೆ ಮಾತು. ಆದರೆ ರಾಜ ಮಹಲಿನಿಂದ ಹೊರಟು ಈ ಗೊಂಡಾರಣ್ಯಕ್ಕೆ ಬಂದು, ಮರದ ಕೆಳಗೆ ಕುಳಿತರೂ ಕೂಡಾ ಪ್ರಸನ್ನತೆಯಿಂದ ಇದ್ದಾರೆಂದರೆ ಆಶ್ಚರ್ಯವಲ್ಲವೇ ?'' ಹೀಗೆ ಯೋಚಿಸಿದ ಆ ವೃದ್ಧನು ಯುಧಿಷ್ಠಿರನ ಬಳಿಗೆ ಬಂದನು. ಯುಧಿಷ್ಠಿರನು ಅವನನ್ನು ನೋಡಿ ''ತಾವು ಹೇಗಿದ್ದೀರಿ ? ಇಲ್ಲಿಗೆ ಏಕಾಗಿ ಬರೋಣವಾಯಿತು ?'' ಎಂದು ವಿಚಾರಿಸಿದನು. ಆಗ ವೃದ್ಧನು ''ರಾಜಮಹಲನ್ನು ಬಿಟ್ಟ ಬಳಿಕ ತಾವು ದುಃಖಿಗಳಾಗಿರಬಹುದು, ನಿಮ್ಮ ದುಃಖವನ್ನು ಸ್ವಲ್ಪ ಹಗುರಗೊಳಿಸೋಣವೆಂದು ನಾನಿಲ್ಲಿಗೆ ಬಂದೆ. ಆದರೆ ಇಲ್ಲಿಯೂ ತಾವೆಲ್ಲಾ ಪ್ರಸನ್ನಚಿತ್ತರಾಗಿದ್ದೀರಿ. ಏನಿದರ ಗುಟ್ಟು ?'' ಎಂದು ಕೇಳಿದನು. ಅದಕ್ಕೆ ಯುಧಿಷ್ಠಿರನು ಹೀಗೆ ಉತ್ತರ ಕೊಟ್ಟನು-

**ನ ವಿಷಾದೋ ವಿದೇಹಽತ್ರ ತದ್ಧಿ ವೈದುಷ್ಯ ಜೇ ಫಲಮ್ ।**

ಪ್ರತಿಯೊಂದು ಪರಿಸ್ಥಿತಿಯಲ್ಲೂ ಮುಗುಳು ನಗುವಿನಿಂದಿರುವುದೇ ಸಮ್ಯಗ್‌ಜ್ಞಾನದ ಫಲ. ಅದು ಬೇಕಾದರೆ ರಾಜಮಹಲಿನಲ್ಲಿರಬಹುದು, ಕಾಡಿನಲ್ಲಿರಬಹುದು ಅಥವಾ ಶ್ಮಶಾನದಲ್ಲಿಯಾದರೂ ಇರಬಹುದು. ರಾಜಮಹಲಿನಲ್ಲೂ ಬಹಳಷ್ಟು ಮಂದಿ ದುಃಖದಲ್ಲೇ ಇರುತ್ತಾರೆ. ಅಲ್ಲಿಯೂ ಅಳುತ್ತಿರುವ ಜನರಿರುತ್ತಾರೆ. ಎಲ್ಲೆಲ್ಲಾ ಧರ್ಮವು ಜೊತೆಯಲ್ಲೇ ಇರುತ್ತದೋ ಮತ್ತು ಯಾರ ಮನಸ್ಸಿನಲ್ಲಿ ಧರ್ಮವಿರುತ್ತದೋ ಅಲ್ಲಿ ಪ್ರಸನ್ನತೆಯೂ ಇರುತ್ತದೆ. ಇನ್ನು ಧರ್ಮಾತ್ಮ ಯಾರಿರುತ್ತಾನೋ ಅವನ ಮನಸ್ಸಿನಲ್ಲಿ ಧರ್ಮವು ಸಹಾ ಇರುತ್ತದೆ.

**ಧರ್ಮೀ ಕೇ ಧರ್ಮ್ ಸದಾ ಮನ್ ಮೇ ।**
**ರಾಮಚಂದ್ರ ಅರು ಸೀತಾ ರಾಣೀ ॥**
**ಜಾಯ್ ಬಸೇ ದಂಡಕ್ ವನ್ ಮೇ ।**
**ಧರ್ಮೀ ಕೇ ಧರ್ಮ್ ಸದಾ ಮನ್ ಮೇ ॥**

ದೇವಸ್ಥಾನಕ್ಕೆ ಹೋಗಿ ಪೂಜಾ-ಪಾಠಗಳನ್ನೆಲ್ಲಾ ನೆರವೇರಿಸಿ ಮತ್ತೆ ಧರ್ಮವನ್ನು ಅಲ್ಲೇ ಬಿಟ್ಟು ಬಂದರೆ ಅದು ಧರ್ಮವೆನಿಸುವುದಿಲ್ಲ. ಧರ್ಮವು ಸರ್ವತ್ರ, ಸದೈವ ಇರಬೇಕು. ಮನೆಯಲ್ಲಿ, ಅಂಗಡಿಯಲ್ಲಿ, ವ್ಯಾಪಾರ ಮಾಡುವಲ್ಲಿ ಹೀಗೆ ಸದೈವ ಸಕಲ ಕಾರ್ಯಗಳಲ್ಲೂ ಇರಬೇಕಾದುದು ಅಗತ್ಯ.

ಗಾಂಧೀಜಿಯವರ ಜೀವನದಲ್ಲಿ ಒಂದು ಘಟನೆಯ ಉಲ್ಲೇಖವಿದೆ. ಗಾಂಧೀಜಿ ಶ್ರೀಮದ್ ರಾಯಚಂದ್ರಜೀಯವರ ಹತ್ತಿರ ಓದಲು ಹೋಗುತ್ತಿದ್ದರು. ಶ್ರೀಮದ್ ರಾಯಚಂದ್ರಜೀಯವರಿಗೆ ರತ್ನದ ವ್ಯಾಪಾರವಿತ್ತು. ಗಾಂಧೀಜಿಯವರ ಎದುರಿನಲ್ಲೇ ವ್ಯಾಪಾರ ಸಂಬಂಧ ಮುತ್ತಿನ ಪ್ಯಾಕೇಟ್‌ಗಳು ಬಂದವು. ರಾಯಚಂದ್ರಜೀಯವರು ಪ್ಯಾಕೇಟನ್ನು ತೆಗೆದು ಮಾಲನ್ನು ನೋಡಿದರು. ಪ್ಯಾಕೇಟ್‌ನ ಹೊರಗಡೆ ಗುರುತಿಸಿದ ಬೆಲೆ



ಕಡಿಮೆಯಾಗಿತ್ತು. ಒಳಗಡೆ ಇದ್ದ ಮಾಲು ಹೆಚ್ಚು ಬೆಲೆಯುಳ್ಳದ್ದಾಗಿತ್ತು. ರಾಯಚಂದ್ರಜೀಯವರಿಗೆ ಮಾಲು ಎಲ್ಲಿಂದ ಬಂದಿತ್ತೋ ಅಲ್ಲಿಗೆ ಅವರು ಈ ಸೂಚನೆಯನ್ನು ಕೊಟ್ಟರು. ಆಗ ಅಲ್ಲಿಗೆ ಮಾಲುಗಳನ್ನು ತಂದ ವ್ಯಾಪಾರಿಯು ರಾಯಚಂದ್ರ ಆಟಣಿ, ಈ ಪ್ಯಾಕೇಟಿನ ಹೊರಗಡೆ ಯಾವ ಬೆಲೆ ನಮೂದಿಸಲಾಗಿದೆಯೋ ಅದೇ ಸರಿ, ನೀವು ಈ ಮಾಲನ್ನು ಇಟ್ಟುಕೊಳ್ಳಿ'' ಎಂದನು. ಕೂಡಲೇ ರಾಯಚಂದ್ರಜೀ ಹೇಳಿದರು- ''ಇದು ಈ ಬೆಲೆಯ ಮಾಲಲ್ಲ'' ಈ ಮಾಲಿನ ನಿಜವಾದ ಬೆಲೆಯನ್ನು ಹೇಳಿ, ಇಲ್ಲವಾದರೆ ಈ ಮಾಲನ್ನು ಹಿಂದೆ ಕೊಂಡು ಹೋಗಿರಿ !''

ಗಾಂಧೀಜಿ ಈ ಎಲ್ಲಾ ವಾಗ್ವಾದಗಳನ್ನು ಕೇಳಿ ಸುಸ್ತಾಗಿಬಿಟ್ಟರು. ಅವರು ಹೇಳಿದರು ''ಧರ್ಮವು ಕೇವಲ ಮಂದಿರದಲ್ಲಿ ಮಾತ್ರ ಇರುತ್ತದೆಂದು ನಾನು ಇಷ್ಟರ ತನಕ ತಿಳಿದಿದ್ದೆ. ಆದರೆ ಇಂದು ನನಗೆ ಗೊತ್ತಾಯಿತು. ಅಂಗಡಿಯಲ್ಲೂ, ವ್ಯಾಪಾರದಲ್ಲೂ ಧರ್ಮವಿದೆ ಎಂದು. ಯಾವ ವ್ಯಾಪಾರಿಯು ವ್ಯಾಪಾರದಲ್ಲೂ ಧರ್ಮವನ್ನು ಬಿಡುವುದಿಲ್ಲವೋ ಅವನೇ ನಿಜವಾದ ವ್ಯಾಪಾರಿ.

ಹೊರಗಡೆ ಎಲ್ಲಾದರೂ ಛಲ-ಕಪಟ ಇತ್ಯಾದಿಗಳನ್ನು ಮಾಡಬಹುದು. ಆದರೆ ದೇವಸ್ಥಾನದ ಒಳಗಡೆ ಹೋದಮೇಲೆ ಧರ್ಮವನ್ನೇ ಮಾಡಬೇಕು ಎಂಬ ನೀತಿ ಒಪ್ಪತಕ್ಕದ್ದಲ್ಲ. ಇದು ಧರ್ಮವೆನಿಸುವುದಿಲ್ಲ. ಅಂಗಡಿಯಲ್ಲಿ, ವ್ಯಾಪಾರದಲ್ಲಿ ಕೂಡಾ ನೈತಿಕತಾ-ಧರ್ಮವನ್ನು ಬಿಡದಿರುವವನು ಯಾವನಿದ್ದಾನೋ ಅವನೇ ಧರ್ಮಾತ್ಮ. ಮಂದಿರದ ಧರ್ಮ ಬೇರೆ, ಅಂಗಡಿಯ ಧರ್ಮ ಬೇರೆ ಎಂಬುದಿಲ್ಲ. ಧರ್ಮದಿಂದಲೇ ನಮ್ಮ ಉದ್ಧಾರವಾಗುವುದು ನಿಶ್ಚಿತ. ಧರ್ಮದಲ್ಲಿ ಭಕ್ತಿಗೂ ಮಹತ್ವವಿದೆ.

**ಸ್ವಸ್ವರೂಪಾನುಸಂಧಾನಂ ಭಕ್ತಿಂ ವ್ಯಾಭಿಧೀಯತೇ ।**

ಆತ್ಮನ ಮತ್ತು ಪರಮಾತ್ಮನ ಪರಿಚಯ-ಅನುಸಂಧಾನವೇ ಭಕ್ತಿ. ಯಾವಾಗ ಮನುಷ್ಯನು ಆತ್ಮನ ಅನುಸಂಧಾನ ಮಾಡುತ್ತಾನೋ, ಶೋಧ ಮಾಡುತ್ತಾನೋ, ಅದರ ಪರಿಚಯದಲ್ಲಿ ಬರುತ್ತಾನೋ ಆಗ ಭಕ್ತಿ ಉಂಟಾಗುತ್ತದೆ. ಆದುದರಿಂದ ಭಕ್ತಿಯೂ ಅವಶ್ಯಕ. ಎಲ್ಲಿಯವರೆಗೆ ಭಕ್ತಿ ಇರುವುದಿಲ್ಲವೋ, ಅಲ್ಲಿಯವರೆಗೆ ಆತ್ಮನ ಪರಿಚಯವೂ ಇರುವುದಿಲ್ಲ. ಭಕ್ತಿಯಲ್ಲಿ ಮುಕ್ತಿಯ ಅಂಕುರ ವಿದ್ಯಮಾನವಾಗಿದೆ.

**ಸೋಽಹಂ ತಥಾಪಿ ತವಭಕ್ತಿವಶಾನ್ಮುನೀಶ ।**
**ಕರ್ತುಂ ಸ್ತವಂ ವಿಗತಶಕ್ತಿರಪಿ ಪ್ರವೃತ್ತಃ ।**
**ಪ್ರೀತ್ಯಾತ್ಮ ವೀರ್ಯಮವಿಚಾರ್ಯ ಮೃಗೋಮೃಗೇಂದ್ರ ।**
**ನಾಭ್ಯೇತಿ ಕಿಂ ನಿಜಶಿಶೋಃ ಪರಿಪಾಲನಾರ್ಥಮ್ ॥**

ಕಾಡಿನಲ್ಲಿ ಒಂದು ಸಿಂಹವು ಜಿಂಕೆಯ ಮರಿಯನ್ನು ಹಿಡಿದುಕೊಂಡಿತು. ಆಗ ಆ ಮರಿಯ ತಾಯಿ ಸುಮ್ಮನಿರುವುದಿಲ್ಲ. ಆ ಸಿಂಹದ ಮೇಲೆ ಪ್ರಹಾರ ಕೊಡುತ್ತದೆ. ತಾನು

ಎದುರಿಸುತ್ತಿರುವುದು ಸಿಂಹವನ್ನು, ಆ ಸಿಂಹದ ಮುಂದೆ ತಾನು ತುಚ್ಛ, ದುರ್ಬಲ ಎಂದೆಲ್ಲಾ ಅದಕ್ಕೆ ಗೊತ್ತು. ಆದರೂ ಮಮತಾ ವಶದಿಂದ ತನ್ನ ಮರಿಯನ್ನು ಉಳಿಸುವುದಕ್ಕಾಗಿ ಅದು ಸಿಂಹವನ್ನು ಎದುರಿಸುತ್ತದೆ, ಹೋರಾಡುತ್ತದೆ. ಅನಂತರ ಅದು ಸಿಂಹವನ್ನೇ ಭಗವಂತ ನೆಂದು ಭಾವಿಸಿ ಹೀಗೆ ಪ್ರಾರ್ಥಿಸುತ್ತದೆ- ''ಹೇ ಭಗವಾನ್, ನನ್ನ ಮಗುವನ್ನು ಬಿಟ್ಟುಬಿಡು, ನೀನು ಅನಂತ ಗುಣಯುಕ್ತನು, ನಾನು ಅತ್ಯಂತ ತುಚ್ಛನು. ನಿನ್ನ ಗುಣಗಾನ ಮಾಡುವ ಸಾಮರ್ಥ್ಯವೂ ನನ್ನಲಿಲ್ಲ, ಆದರೂ ಭಕ್ತಿ ವಶದಿಂದ ಗುಣಾನುವಾದ ಮಾಡುವ ಸಾಹಸ ಮಾಡುತ್ತಿದ್ದೇನೆ.

ಧರ್ಮವು ನಮ್ಮನ್ನು ಧರ್ಮಮಯರಾಗಲು ಕಲಿಸುತ್ತದೆ. ನಮ್ಮ ಜೀವನವನ್ನು ಆದರ್ಶ ಗೊಳಿಸುತ್ತದೆ. ಅದಕ್ಕೆ ಸುಗಂಧಭರಿತವಾದ ಹೂವನ್ನು ಹೋಲಿಕೆ ಕೊಡಬಹುದು. ಹೂವನ್ನು ಎಲ್ಲಿಯೇ ಇಡಲಿ, ಅದು ತನ್ನ ಸುಗಂಧವನ್ನು ಹಬ್ಬಿಸುತ್ತಲೇ ಇರುತ್ತದೆ. ಅದರ ಸುಗಂಧವು ಸದೈವ ಅದರ ಜೊತೆಯಲ್ಲೇ ಇರುತ್ತದೆ. ಅದು ಆ ಪರಿಮಳವನ್ನು ಮರದಲ್ಲಿ ಬಿಟ್ಟು ಬರುವುದಿಲ್ಲ, ಸದಾಕಾಲವು ಅದನ್ನು ತನ್ನೊಳಗೇ ಸಮಾಹಿತಗೊಳಿಸಿರುತ್ತದೆ. ಅದೇ ರೀತಿ ಧರ್ಮಾತ್ಮರ ಜೊತೆಯಲ್ಲೇ ಧರ್ಮವಿರುತ್ತದೆ. ಬೇಕಾದರೆ ಅದು ಅಂಗಡಿಯಲ್ಲಿ ಕುಳಿತಿರ ಬಹುದು ಅಥವಾ ಮನೆಯಲ್ಲಿರಬಹುದು. ಇನ್ನೂ ಅದನ್ನು ವಿಸ್ತರಿಸಿ ಹೇಳುವುದಾದರೆ ಅದು ರೈಲ್ವೆ ಡಬ್ಬದಲ್ಲಿ ಮತ್ತು ಪ್ರತಿಯೊಂದು ಕಾರ್ಯದಲ್ಲೂ ಕಾಣಿಸಬಹುದು. ಅಂತೂ ಪ್ರತಿಯೊಂದು ಸ್ಥಾನದಲ್ಲೂ ಧರ್ಮವೆಂಬುದು ಇದ್ದೇ ಇರುತ್ತದೆ.

ಗಣೇಶ್‌ಪ್ರಸಾದ್ ಜೀ ವರ್ಣೀಯವರು ಒಮ್ಮೆ ರೈಲು ಯಾತ್ರೆ ಮಾಡುತ್ತಿದ್ದರಂತೆ. ಟಿಕೇಟ್ ಕೊಂಡಷ್ಟು ದೂರದ ಪ್ರಯಾಣ ಮುಗಿದಿದೆ. ಕೈಯಲ್ಲಿದ್ದ ಹಣವೂ ಮುಗಿದು ಹೋಗಿದೆ. ಅವರಿಗೆ ಮುಂದೆ ಪ್ರಯಾಣ ಮಾಡಬೇಕೆಂಬ ಇಚ್ಛೆಯಿತ್ತು. ಆದರೆ ಟಿಕೇಟ್ ಕೊಳ್ಳಲು ಹಣವಿಲ್ಲದ ಮೇಲೆ ಹೋಗುವುದಾದರೂ ಹೇಗೆ ? ಎಂದು ತಿಳಿದ ಅವರು ರೈಲಿನಿಂದ ಕೆಳಗಿಳಿದುಬಿಟ್ಟರು. ಆಗ ಅಲ್ಲೇ ಒಂದು ಕಡೆ ಕೆಲವು ಕೂಲಿಯಾಳುಗಳು ಮಾರ್ಗದ ಕೆಲಸ ಮಾಡುತ್ತಿದ್ದರು. ಗಣೇಶ್ ಪ್ರಸಾದ್ ಜೀ ಸ್ವಯಂ ಕೂಲಿ ಮಾಡಿ ದುಡಿದು ಎರಡಾಣೆ ಸಂಪಾದಿಸಿ ಆ ಹಣದಿಂದ ಮುಂದಿನ ಟಿಕೇಟ್ ಪಡೆದು ಇನ್ನೊಂದು ರೈಲು ಗಾಡಿಯಲ್ಲಿ ಯಾತ್ರೆ ಪ್ರಾರಂಭಿಸಿದರು.

ಹಾಗೆಯೇ ಇನ್ನೊಬ್ಬ ಗೋಪಾಲದಾಸಜೀ ಬರ್ಯೆಯಾ ಎಂಬುವವರಿದ್ದರು. ಅವರು ತನ್ನ ಪುತ್ರನ ಜೊತೆಯಲ್ಲಿ ರೈಲು ಯಾತ್ರೆ ಮಾಡುತ್ತಿದ್ದರು. ಆಗ 12 ವರ್ಷದವರೆಗಿನ ಮಕ್ಕಳಿಗೆ ಅರ್ಧ ಟಿಕೇಟ್ ಇತ್ತು. ಹಾಗೆಯೇ ಅವರು ಮಗನಿಗೆ ಅರ್ಧ ಟಿಕೇಟ್ ಖರೀದಿ ಸಿದ್ದರು. ಆದರೆ ಪ್ರಯಾಣ ಮಾಡುತ್ತಿದ್ದಂತೆ ಮಗನಿಗೆ ಯಾವುದೋ ನಿರ್ದಿಷ್ಟ ಹೊತ್ತಿನಲ್ಲಿ 12 ವರ್ಷ ತುಂಬಿದುದು ಅವರ ನೆನಪಿಗೆ ಬಂತು. ಕೂಡಲೇ ಅವರು ಮುಂದಿನ ಸ್ಟೇಷನ್ ನಲ್ಲಿ ಇಳಿದು ವಿಷಯ ಹೇಳಿ ಮಗನಿಗೆ ಇಡೀ ಟಿಕೇಟ್ ಮಾಡಿಸಿ ಯಾತ್ರೆಯನ್ನು ಮುಂದು ವರೆಸಿದರು.



ಇದಕ್ಕೇ ಹೇಳುವುದು ಧರ್ಮವೆಂದು. ನಾವು ಎಲ್ಲಿಯೇ ಇರಲಿ, ಧರ್ಮವನ್ನು ಬಿಡಬಾರದು. ಧರ್ಮವು ಸದೈವ ಜೊತೆಯಲ್ಲೇ ಇರಬೇಕು.

ಪಂಡಿತ್ ಆಶಾಧರ್‌ಜೀಯವರು ಒಂದೆಡೆ ಹೀಗೆ ಹೇಳಿದರು;-

**ನ್ಯಾಯೋಪಾತ್ತಧನೋ ಯಜನ್ ಗುಣಗುರುನ್ ಸದ್ಗೀಸ್ತ್ರಿಕಾಂ ಭಜನ್ ।**
**ನನ್ಯೋನ್ಯಾಗುಣಂ ತದರ್ಹಗೃಹಿಣೀಸ್ಥಾನಾಲಯೋ ಹ್ರೀಮಯಃ ।**
**ಯುಕ್ತಾಹಾರ ವಿಹಾರ ಆರ್ಯಸಮಿತಿಃ ಪ್ರಾಜ್ಞಃ ಕೃತಜ್ಞೋವಶೀ ।**
**ಶೃಣ್ವನ್ ಧರ್ಮವಿಧೀಂ ದಯಾಲುರದ್ಯಭೀಃ ಸಾಗಾರಧರ್ಮಃ ಚರೇತ್ ॥**

ನಾವು ನ್ಯಾಯದ, ನೀತಿಕತೆಯ ಸಹಾಯ ಪಡೆಯಬೇಕು. ನೈತಿಕತೆಯ ಸಹಾಯ ತೆಗೆದುಕೊಂಡು ನಾವು ಸ್ವಯಂ ಪರೋಪಕಾರ ಮಾಡುತ್ತಲೇ ಇದ್ದೇವೆ. ಅದು ಹೇಗೆಂದರೆ ವೃದ್ಧ ಮನುಷ್ಯನು ಕೋಲಿನ ಸಹಾಯದಿಂದ ಹೇಗೆ ನಡೆಯುತ್ತಾನೋ ಹಾಗೆ. ಅದು ಅವನು ಕೋಲಿಗೆ ಮಾಡುವ ಉಪಕಾರವಲ್ಲ, ಬದಲಾಗಿ ಅದು ಕೋಲಿನ ಉಪಕಾರ.

ಧರ್ಮವು ಆನಂದವನ್ನು ಕೊಡುತ್ತದೆ. ಧರ್ಮವು ಯಾರನ್ನೂ ದುಃಖಿಗಳಾಗಲು ಬಿಡುವುದಿಲ್ಲ, ಧರ್ಮಾತ್ಮನಾದವನು ದುಃಖಿಯಾಗಲು ಹೇಗೆ ಸಾಧ್ಯ ? ಎಲ್ಲಿ ದೀಪವಿದೆ ಯೋ ಅಲ್ಲಿ ಅಂಧಕಾರವಿರಲು ಹೇಗೆ ಸಾಧ್ಯ ? ಎಲ್ಲಿ ಜ್ಞಾನವಿರುತ್ತದೋ, ಅಲ್ಲಿ ಅಜ್ಞಾನ ವಿರುವುದಾದರು ಹೇಗೆ ? ಆದುದರಿಂದ ಧರ್ಮ ಎಲ್ಲಿರುತ್ತದೋ, ಅಲ್ಲಿಂದ ದುಃಖವು ಓಡಿಹೋಗಿಬಿಡುತ್ತದೆ. ಆಕಾಶದಲ್ಲಿ ಮೋಡಗಳು ಚದುರಿಕೊಂಡಿವೆ, ಗಾಳಿ ಬೀಸುತ್ತಿದೆ, ಮಿಂಚು ಹೊಡೆಯುತ್ತಿದೆ ಎಂದಾದರೊಮ್ಮೆ ಮಳೆ ಸುರಿಯಲು ಪ್ರಾರಂಭವಾಯಿತೆಂದೇ ಅರ್ಥ. ಅದೇ ರೀತಿ ಧರ್ಮವು ಆವರಿಸಿಕೊಂಡಿದೆಯೆಂದಾದರೆ ಸಮ್ಯಗ್ದರ್ಶನ, ಜ್ಞಾನ, ಚಾರಿತ್ರವೆಂಬ ಮೂರು ರತ್ನದ ರೂಪಗಳೂ ಕೂಡಾ ಪ್ರಕಟವಾಗಿಯೇ ತೀರುತ್ತದೆ.

**ಅರ್ಥ:-** ಧನಕ್ಕೆ ಅರ್ಥವೆಂದೂ ಹೇಳುತ್ತಾರೆ. ಅರ್ಥವು ಲೋಭವನ್ನು ಹೆಚ್ಚಿಸುತ್ತದೆ. ಅದೇ ಲೋಭಕ್ಕೂ ಕಾರಣವಾಗಿದೆ. ಆಚಾರ್ಯ ಗುಣಭದ್ರರು ಆತ್ಮಾನುಶಾಸನದಲ್ಲಿ ಲೋಭದ ಪರಿಭಾಷೆಯನ್ನು ಹೀಗೆ ಕೊಟ್ಟಿದ್ದಾರೆ;-

**ಆಶಾಗರ್ತ ಪ್ರಾತಿಪ್ರಾಣಿ ಯಸ್ಮಿನ್ ವಿಶ್ವಮಣೂಪಮಮ್ ।**
**ಕಸ್ಯ ಕಿಂ ಕಿಯದಾಯಾತಿ ವೃಥಾ ವೋ ವಿಷಯೈಷಿತಾ ॥**

ಮನುಷ್ಯನ ಲೋಭದ ಹೊಂಡ ಎಷ್ಟು ದೊಡ್ಡದಿದೆಯೆಂದರೆ ಅದರಲ್ಲಿ ವಿಶಾಲ ವಾದ ಪೃಥ್ವಿಯನ್ನೇ ಹಾಕಿದರೂ, ಅದು ಕೂಡಾ ಆ ಹೊಂಡದಲ್ಲಿ ಒಂದು ಮೂಲೆಯಲ್ಲಿ ಒಂದು ಪರಮಾಣು ಎಷ್ಟು ಸ್ಥಳವನ್ನು ಆವರಿಸಿಕೊಳ್ಳುವುದೋ ಅಷ್ಟು ಜಾಗವನ್ನಷ್ಟೇ ಆಕ್ರಮಿಸಿಕೊಳ್ಳಬಲ್ಲುದು. ಈ ಜೀವಕ್ಕಿರುವ, ಮಾನವನಿಗಿರುವ ಇಚ್ಛೆ ಎಂಬುದು ಅಷ್ಟು ವಿಶಾಲ ಅದ್ಭುತ, ಅನಂತ. ಅರ್ಥಾತ್ ಮನುಷ್ಯನ ಇಚ್ಛೆಗಳೆಂಬುದು ಅಂತಹೀನ (ಕೊನೆ

ಯಿಲ್ಲದುದು). ಆ ಇಚ್ಛೆಯನ್ನು ಸಮಸ್ತ ಪೃಥ್ವಿಯ ವಸ್ತುಗಳು ಕೂಡಾ ಶಾಂತಗೊಳಿಸಲಾರವು. ಲೋಭದಿಂದ ಶಾಂತಿ ಖಂಡಿತವಾಗಿಯೂ ದೊರಕುವುದಿಲ್ಲ. ಲೋಭವು ಅತ್ಯಂತ ದೊಡ್ಡ ಕಷಾಯವಾಗಿದೆ. ಅದು ಹತ್ತನೆಯ ಗುಣಸ್ಥಾನದ ವರೆಗೆ ಚಲಿಸುತ್ತದೆ. ಕ್ರೋಧ, ಮಾನ, ಮಾಯಾ ಇವುಗಳಿಂದ ಪೂರ್ವದ ಗುಣಸ್ಥಾನಗಳೂ ಕಲುಷಿತಗೊಳ್ಳುತ್ತವೆ. ವೀತರಾಗ ಭಾವವು ಪ್ರಕಟವಾಗುವ ಮೊದಲನೇ ಕ್ಷಣದವರೆಗೂ ಲೋಭಕಷಾಯವಿರುತ್ತದೆ. ಈ ಲೋಭದಿಂದ ಪಾರಾಗಲು ಕೆಲವು ಉಪಾಯಗಳನ್ನು ಹೇಳಲಾಗಿದೆ.

**ಅನೇಕಾಂತಾತ್ಮಾರ್ಥ ಪ್ರಸವ ಫಲಭಾರತಿ ವಿನತೇ ।**
**ವಚಃ ಪರ್ಣಾಕೀರ್ಣೇ ವಿಪುಲನಯ ಶಾಖಾ ಶತಯುತ್ತೇ ॥**
**ಸಮುತ್ತುಂಗೇ ಸಮ್ಯಕ್ ಪ್ರತತಮತಿ ಮೂಲೇ ಪ್ರತಿದಿನಂ ।**
**ಶ್ರುತಸ್ಕಂಧೇ ಧೀಯಾನ ರಮಯತು ಮನೋಮರ್ಕಟಮಮುಮ್ ॥**

ಕೋತಿಯು ತುಂಬಾ ಕುಪ್ಪಳಿಸುತ್ತಿರುತ್ತದೆ, ಮರದ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ. ಎಲ್ಲಿ ಅದಕ್ಕೆ ಹಣ್ಣೋ, ಗೆಡ್ಡೆಯೋ ತಿನ್ನುವುದಕ್ಕೆ ದೊರಕುತ್ತದೋ, ಅಲ್ಲಿ ಅದು ಶಾಂತಿಯಿಂದ ಕುಳಿತುಕೊಳ್ಳುತ್ತದೆ. ಒಂದು ವೇಳೆ ಈ ಮನರೂಪೀ ಮರ್ಕಟನಿಗೆ ಕೂಡಾ ಸ್ವಲ್ಪವಾದರೂ ಶಾಸ್ತ್ರ-ಸ್ವಾಧ್ಯಾಯದ, ಆಗಮದ ಅಧ್ಯಯನ ಸಿಕ್ಕಿತೆಂದಾದರೆ ಮನಸ್ಸಿನ ಚಂಚಲತೆ ಕಡಿಮೆಯಾಗುತ್ತದೆ ಮತ್ತು ಮನಃಶಾಂತಿ ದೊರಕುತ್ತದೆ. ಮನಸ್ಸು ಮರ್ಕಟ, ಶಾಸ್ತ್ರ-ಶ್ರುತಸ್ಕಂಧ-ಮರ, ಎಷ್ಟು ಹೊತ್ತಿನವರೆಗೆ ಆ ಮರದ ಮೇಲೆ ಕುಳಿತು ಫಲ-ಮೂಲವನ್ನು ಆರಿಸಿಕೊಳ್ಳಲಾಗುತ್ತದೋ ಅಷ್ಟು ಹೊತ್ತು ಈ ಮನಸ್ಸು ಶಾಂತ ನಿಶ್ಚಲವಾಗಿರುತ್ತದೆ. ಧರ್ಮದಿಂದ ಕರ್ಮನಾಶವಾಗುತ್ತದೆ. ಮಂಗವು ಎಲ್ಲಕ್ಕಿಂತ ಅಧಿಕ ಚಂಚಲ ಪ್ರಾಣಿ. ಆದ ಕಾರಣ ಇಲ್ಲಿ ಮಂಗನ ಉದಾಹರಣೆ ಕೊಡಲಾಗಿದೆ.

ಇದೊಂದು ಶಾಂತಿಸಾಗರ್‌ಜೀ ಮಹಾರಾಜರ ಸಲ್ಲೇಖನದ ಸಮಯದಲ್ಲಿ ನಡೆದ ಸಂಗತಿ. ಪಂಡಿತ್ ಜಗನ್‌ಮೋಹನ್‌ಲಾಲ್ ಶಾಸ್ತ್ರಿಗಳು ಆಚಾರ್ಯ ಶ್ರೀಯವರ ದರ್ಶನಕ್ಕಾಗಿ ಬಂದಿದ್ದರು. ಆಚಾರ್ಯ ಶ್ರೀಯವರು ಸಲ್ಲೇಖನ ಸ್ವೀಕರಿಸಿದ ವಿಚಾರದಲ್ಲಿ ಔದಾಸೀನ್ಯ ತಾಳಿದ ಅವರು ಹೀಗೆ ಹೇಳಿದರು- ''ಮಹಾರಾಜ್‌ಜೀ, ನಾವು ಈವರೆಗೆ ತಮ್ಮ ಛತ್ರ-ಛಾಯೆಯಲ್ಲಿದ್ದೆವು. ಈಗ ತಾವು ನಮ್ಮನ್ನು ಬಿಟ್ಟು ಹೋಗುತ್ತಿದ್ದೀರಿ. ಮುಂದೆ ನಾವು ಯಾರ ಛತ್ರ-ಛಾಯೆಯಲ್ಲಿ ಇರಬಲ್ಲೆವು?'' ಆಗ ಮಹಾರಾಜರು ನಗುತ್ತಾ ಹೇಳಿದರು- ''ಪಂಡಿತ್‌ಜೀ, ತಾವಾದರೋ ಸ್ವಯಂ ವಿದ್ವಾಂಸರು. ಈ ವಿಚಾರದಲ್ಲಿ ತಾವು ನಮ್ಮನ್ನು ಕೇಳುತ್ತಿದ್ದೀರಲ್ಲಾ! ಈಗ ಹೇಳಿ ನಾವು ಯಾರ ಛತ್ರ-ಛಾಯೆಯಲ್ಲಿದ್ದೇವೆ ?'' ಪಂಡಿಜೀ ಹೇಳಿದರು - ''ತಾವಾದರೋ ಧರ್ಮದ ಛತ್ರ-ಛಾಯೆಯಲ್ಲಿದ್ದೀರಿ.'' ಕೂಡಲೇ ಮಹಾರಾಜ್‌ಜೀ ಉತ್ತರಿಸಿದರು- ''ಹಾಗಾದರೆ ತಾವು ಕೂಡಾ ಧರ್ಮದ ಛತ್ರ-ಛಾಯೆಯಲ್ಲಿ ಇರುಬಹುದಲ್ಲಾ ! ನಮ್ಮಂಥವರು ಎಷ್ಟೋ ಮಂದಿ ಬರಬಹುದು ಹೋಗಬಹುದು. ಯಾರು ಯಾರ ಛತ್ರ-ಛಾಯೆಯಲ್ಲಿಯೇ ಇರಲು ಸಾಧ್ಯ ?''



ಆಚಾರ್ಯಶ್ರೀಗಳ ದರ್ಶನಕ್ಕಾಗಿ ದೇಶದ ಎಲ್ಲಾ ವಿದ್ವಾಂಸರೂ ಬರುತ್ತಿದ್ದರು. ನಾವು ಕೂಡಾ ಅವರ ಸಾನಿಧ್ಯದಲ್ಲಿ ಹದಿಮೂರು ವರ್ಷ ಇದ್ದೆವು. ಆಚಾರ್ಯಶ್ರೀಗಳು ಎಲ್ಲರ ಸಂದೇಹಗಳಿಗೆ ಸಮಾಧಾನವನ್ನು ಸೂತ್ರರೂಪದಲ್ಲಿ ಸಂಕ್ಷಿಪ್ತ-ಸಟೀಕಾ ಉತ್ತರ ನೀಡುತ್ತಿದ್ದರು.

ಮಹಾನುಭಾವರೇ ! ಧರ್ಮದ ಛತ್ರ-ಛಾಯೆಯು ಹೊರಟುಹೋಯಿತೆಂದರೆ ಈ ಕಪ್ಪು ಅಥವಾ ಬಣ್ಣ-ಬಣ್ಣದ (ಕೊಡೆ)ದಿಂದ ಏನೂ ಉಪಯೋಗವಿಲ್ಲ. ಆ ಛತ್ರ ಕೇವಲ ನಮ್ಮನ್ನು ಬಿಸಿಲಿನಿಂದಷ್ಟೇ ರಕ್ಷಿಸಬಲ್ಲುದು. ಆದರೆ ದುಃಖದಿಂದ ರಕ್ಷಿಸಬಲ್ಲ ಛತ್ರವೆಂದರೆ ಧರ್ಮ ಮಾತ್ರ.

ಆಚಾರ್ಯ ವಸುನಂದಿಯವರು ತಮ್ಮ ಗ್ರಂಥವಾದ ''ತಚ್ಚವಿಯಾರೋ''ದಲ್ಲಿ ಹೇಳಿದ ಮಾತು ಹೀಗಿದೆ- ''ತಾಯಿ-ತಂದೆಯರ ಮೂಲಕ ಕೋಮಲ ಮತಿ ಬಾಲಕನಿಗೆ ಕೊಡಬೇಕಾದ ಮೊದಲನೆಯ ಪಾಠ ಧರ್ಮದ್ದಾಗಿರಬೇಕು.''

**ಜಿಣ ಸಾಸಣಸ್ಸ ಸಾರೋ, ಚಉದಸಪುವ್ವಾಣ ಜೋ ಸಮುದ್ಧಾರೋ ।**
**ಜಸ್ಸ ಮಣೇ ಣಮೋಕಾರೋ, ಸಂಸಾರೋ ತಸ್ಸ ಕಿಂ ಕುಣದಿ ॥**

ಬಾಲಕನಿಗೆ ಎಲ್ಲಕ್ಕಿಂತ ಮೊದಲು ಧರ್ಮದ ಪಾಠ ಕಲಿಸಬೇಕು. ಅವನಿಗೆ ಣಮೋಕಾರ ಮಂತ್ರ ಕಲಿಸಿರಿ. ಜಿನವಾಣಿಯ ಸಾರವೇ ಣಮೋಕಾರ ಮಂತ್ರ. ಈಗಲೂ ನಮ್ಮ ಸಮಾಜದಲ್ಲಿ ಮಕ್ಕಳಿಗೆ ಎಲ್ಲಕ್ಕಿಂತ ಮೊದಲು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಕಿವಿಯಲ್ಲಿ ಣಮೋಕಾರ ಮಂತ್ರ ಹೇಳಿಕೊಡುವ ಪರಿಪಾಟಿಯಿದೆ. ಅದರಲ್ಲೂ ಮೊಟ್ಟ ಮೊದಲು ಪ್ರಾಕೃತ ಭಾಷೆಯಲ್ಲೇ ಕಲಿಸಲಾಗುತ್ತದೆ. ಮಗುವು ಯಾವಾಗ ಮಾತಾಡುವುದಕ್ಕೆ ಪ್ರಾರಂಭಿಸುತ್ತದೋ ಆಗ ಣಮೋಕಾರ ಮಂತ್ರವನ್ನು ನೆನಪಿಸುತ್ತಾರೆ.

**'ಕಾಮ'**-ಕಾಮದ ಅರ್ಥ ಇಚ್ಛೆ. ಇಚ್ಛೆಯು ಎಂದಿಗೂ ತೃಪ್ತವಾಗುವುದಿಲ್ಲ. ಪೃಥ್ವೀ ಮಂಡಲದ ಮೇಲೆ ತಿನ್ನುವ, ಧರಿಸುವ, ಭೋಗೋಪಭೋಗದ ಎಷ್ಟೇ ವಸ್ತುಗಳಿರಲಿ ಅವೆಲ್ಲವನ್ನೂ ಭೋಗಿಸಿದ ಮೇಲೂ ಇಚ್ಛೆಯು ತೃಪ್ತ ಹೊಂದುವುದಿಲ್ಲ.

**'ಮೋಕ್ಷ'**- ಎಲ್ಲ ಕರ್ಮಗಳಿಂದಲೂ ಮುಕ್ತವಾಗುವುದೇ ಮೋಕ್ಷ. ಅಷ್ಟ ಕರ್ಮಗಳಲ್ಲಿ ಮೋಹ ಕರ್ಮವು ಎಲ್ಲಕ್ಕಿಂತ ಅಧಿಕ ಶಕ್ತಿಶಾಲಿ. ಆದರೆ ಯಾವಾಗ ದೇವಸ್ಥಾನದಲ್ಲಿ ಜಪ ಮಾಡಲು ಕುಳಿತುಕೊಳ್ಳುತ್ತೇವೋ, ಆಗ ಮೋಹವನ್ನು ಮರೆತುಬಿಡುತ್ತೇವೆ. ಮೋಹಕರ್ಮವನ್ನೂ, ಎಲ್ಲ ಕರ್ಮಗಳನ್ನೂ ನಾಶಗೊಳಿಸುವುದೇ ಮೋಕ್ಷವಾಗಿರುತ್ತದೆ.

ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ರೀತಿಯಾಗಿ ನಾಲ್ಕು ಪುರುಷಾರ್ಥಗಳನ್ನು ನಮ್ಮ ಆಚಾರ್ಯರು ತಿಳಿಸಿದ್ದಾರೆ. ಇವು ನಾಲ್ಕು ದಿಕ್ಕುಗಳಾಗಿವೆ. ಈ ನಾಲ್ಕಕ್ಕೂ ಪುರುಷಾರ್ಥ ಮಾಡಲಾಗುತ್ತದೆ. ಧರ್ಮಕ್ಕೆ ಕೂಡಾ ಪುರುಷಾರ್ಥ ಮಾಡಬೇಕಾಗುತ್ತದೆ.

ಪುರುಷಾರ್ಥವಿಲ್ಲದೆ ಅದರ ಪ್ರಾಪ್ತಿಯೂ ಇಲ್ಲ.

ಒಬ್ಬ ಬಾಲಕನು ತಂದೆಯ ಜೊತೆಯಲ್ಲಿ ಜಾತ್ರೆ ನೋಡಲು ಹೋಗುತ್ತಾನೆ. ಅವನು ಬಣ್ಣ-ಬಣ್ಣದ ವಸ್ತುಗಳನ್ನು ನೋಡಿ ಬಹಳ ಪ್ರಸನ್ನನಾಗುತ್ತಾನೆ. ಬೊಂಬೆಗಳು, ಮಿಠಾಯಿ ಮೊದಲಾದ ಸಿಹಿ ತಿಂಡಿಗಳು ಇವೆಲ್ಲವನ್ನೂ ಕಂಡು ಅವನಿಗೆ ಬಹಳ ಸಂತೋಷವಾಗುತ್ತದೆ. ಇದ್ದಕ್ಕಿದ್ದಂತೆ ಒಂದು ದೊಡ್ಡ ಜನ ಸಮೂಹ ಅಲ್ಲಿಗೆ ಬಂತು. ಕೂಡಲೇ ತಂದೆ ಮಗನೊಡನೆ-''ಮಗೂ ನನ್ನ ಕೈ ಬೆರಳುಗಳನ್ನು ಗಟ್ಟಿಯಾಗಿ ಹಿಡಿದುಕೋ. ಎಲ್ಲಿಯಾದರೂ ಬಿಟ್ಟು ಹೋದರೆ ನೀನು ತಪ್ಪಿಹೋಗಬಹುದು'' ಎಂದನು. ಜನಸಂದಣಿ ನುಗ್ಗಿಯೇ ಬಿಟ್ಟಿತು. ಬಾಲಕ ಹಿಡಿದುಕೊಂಡಿದ್ದ ತಂದೆಯ ಕೈ ಬೆರಳು ಬಿಟ್ಟು ಹೋಯಿತು. ಆ ನೂಕುನುಗ್ಗಲಿನಲ್ಲಿ ತಂದೆಗೂ ವ್ಯವಧಾನವಿರಲಿಲ್ಲ. ಹುಡುಗ ಅಳುವುದಕ್ಕೆ ಪ್ರಾರಂಭಿಸಿದ ತಂದೆಯನ್ನು ಹುಡುಕುತ್ತಾ ನಡೆದ. ಅಲ್ಲೆ ಬಣ್ಣ ಬಣ್ಣದ ಜಾತ್ರೆಯಿತ್ತು. ಅಲ್ಲೇ ಬೇಕಾದಷ್ಟು ಆಟದ ಬೊಂಬೆಗಳಿದ್ದುವು, ಅಲ್ಲೇ ಮಿಠಾಯಿ ಅಂಗಡಿಗಳು ಬಾಲಕನಿಗೆ ಕಾಣಿಸುತ್ತಿದ್ದುವು. ಆದರೆ ಬೆರಳು ತಪ್ಪಿ ತಂದೆಯಿಂದ ಅಗಲಿದ ಆ ಬಾಲಕ ಅಳುತ್ತಲೇ ಇದ್ದ. ಈ ಪರಿಸ್ಥಿತಿಯನ್ನು ನೀವೀಗ ನಿಮಗೇ ಹೋಲಿಸಿಕೊಳ್ಳಿ. ನಮ್ಮಲ್ಲಿ ಯಾವುದು ಇಲ್ಲ! ಮನೆಯಿದೆ, ಅಂಗಡಿಯಿದೆ, ಟಿ.ವಿ. ಇದೆ, ಫ್ರಿಜ್ ಎಲ್ಲವೂ ಇದೆ. ಇಷ್ಟು ವೈಭವಗಳಿದ್ದರೂ ಧರ್ಮ ಒಂದಿಲ್ಲವಾದರೆ ನೀವು ಕೂಡಾ ದುಃಖಿಗಳಾಗುತ್ತೀರಿ. ಧರ್ಮ ನಷ್ಟವಾಯಿತೆಂದಾದರೆ ಎಲ್ಲವೂ ನಷ್ಟವಾದಂತೆಯೇ ಸರಿ. ನೋಡಿ, ಆ ಬಾಲಕನ ಹತ್ತಿರ ಆಟದ ಬೊಂಬೆಗಳಿದ್ದುವು, ಮಿಠಾಯಿ ಕಟ್ಟುಗಳಿದ್ದುವು, ಆದರೆ ತಂದೆಯಿಂದ ಆತ ಬೇರ್ಪಟ್ಟ ಮೇಲೆ ಅವನಿಗೆ ಯಾವುದೂ ಇಲ್ಲದಂತಾಗಿ ದುಃಖ ಆವರಿಸಿತು. ಇದೇ ರೀತಿ ಧರ್ಮದ ಆಶ್ರಯ ತಪ್ಪಿ ಹೋಯಿತೆಂದಾದರೆ ಎಲ್ಲ ಸುಖ-ಶಾಂತಿ ಹೊರಟು ಹೋಗುತ್ತದೆ ಮತ್ತು ನೀವು ದುಃಖಿಗಳಾಗುತ್ತೀರಿ. ಧರ್ಮರಹಿತ ಜೀವದಲ್ಲಿ ಏನೂ ಇರುವುದಿಲ್ಲ.

ನಾವು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗೆ ಹೆಚ್ಚು ಕಡಿಮೆ ಇಡೀ ಭಾರತ ವರ್ಷದಲ್ಲಿ ತಿರುಗಾಡಿದೆವು. ಅಲ್ಲಿ ಎಲ್ಲಿಯಾದರೂ ಸಾಧರ್ಮೀ ಮಕ್ಕಳು ಸಿಕ್ಕಿದರೆ ಅವರೊಡನೆ ಸಹಜವಾಗಿ ''ನಿಮಗೆ ಣಮೋಕಾರ ಮಂತ್ರ ಬರುತ್ತದೆಯೇ?'' ಎಂದು ಕೇಳುತ್ತೇವೆ. ಆಗ ಪ್ರತಿಯೊಬ್ಬರೂ ಣಮೋಕಾರ ಮಂತ್ರವನ್ನು ಹೇಳಿದ್ದುಂಟು, ಮತ್ತೆ ಅವರಿಗೆ ಮರುಪ್ರಶ್ನೆ ಹಾಕಿ ''ಯಾರು ಇದನ್ನು ಹೇಳಿಕೊಟ್ಟರು'' ಎಂದು ಕೇಳುತ್ತೇವೆ. ಮಕ್ಕಳು ''ತಾಯಿ ಅಥವಾ ಅಜ್ಜಿ'' ಎಂದು ಹೇಳುತ್ತಾರೆಯೇ ಹೊರತು ಯಾರೊಬ್ಬರೂ ತಂದೆ ಹೇಳಿಕೊಟ್ಟರೆಂದು ಹೇಳಿದ್ದೇ ಇಲ್ಲ. ಆಗಲೇ ನಮಗೆ ತಿಳಿಯಿತು ಧರ್ಮದ ಬೆಳಕು ಪ್ರಕಾಶಿಸುತ್ತಿರುವುದು ಈ ಮಹಿಳೆಯರಲ್ಲೇ ಎಂದು.

ಮಕ್ಕಳಿಗೆ ಆಮೇಲೆ ಅನ್ಯ ವಿಷಯಗಳನ್ನು ಕಲಿಸಿ. ಗಣಿತ ಕಲಿಸಿ, ಭಾಷೆ ಕಲಿಸಿರಿ, ವ್ಯಾಪಾರ-ವಾಣಿಜ್ಯ ಕಲಿಸಿರಿ. ಆದರೆ ಮೊದಲ ಪಾಠ ಮಾತ್ರ ಧರ್ಮವೇ ಆಗಿರಬೇಕು.



ಅದರಿಂದಲೇ ಉದ್ಧಾರವಾಗುವುದು. ತಂದೆಯಾದವನು ತನ್ನ ಇಡೀ ಜೀವನದಲ್ಲಿ ಸಾಕಷ್ಟು ಸಂಪಾದನೆ ಮಾಡಿ, ಧನ ಸಂಗ್ರಹಿಸಿ, ಮನೆ-ಅಂಗಡಿ ಫ್ಯಾಕ್ಟರಿ ಇತ್ಯಾದಿಗಳನ್ನು ಕಟ್ಟಿಸಿ ಕೊನೆಗೆ ''ಮಗನೇ, ನಾನು ನನ್ನ ಸಂಪಾದನೆಯಿಂದ ಇಷ್ಟೆಲ್ಲಾ ಮಾಡಿ ಇದೀಗ ಬೀಗದ ಕೈಯನ್ನು ನಿನಗೆ ಒಪ್ಪಿಸುತ್ತಿದ್ದೇನೆ. ಇದು ಮುಂದೆ ಏಳು ಪೀಳಿಗೆಯ ತನಕ ಬರಬಹುದು'' ಎನ್ನುತ್ತಾನೆ. ನಮ್ಮ ಆಚಾರ್ಯರು ಇದರ ಬಗ್ಗೆ ಹೀಗೆ ಹೇಳುತ್ತಾರೆ- ''ಸಂಪತ್ತೇನೋ ಇರಲಿ, ಆದರೆ ಒಂದು ಧರ್ಮದ ಕೀಲಿಕೈಯನ್ನೂ ಮುಂದಿನ ಪೀಳಿಗೆಗೆ ಒಪ್ಪಿಸಿರಿ. ಅದೇ ಜೊತೆಯಲ್ಲಿ ಇರಬೇಕಾದುದು. '' ಧರ್ಮದ ಸಂಸ್ಕಾರ ನೀಡುವ ತಂದೆಯೇ ನಿಜವಾದ ತಂದೆ. ಉಳಿದವರೆಲ್ಲ ಕೇವಲ ಜನ್ಮ ಕೊಟ್ಟವರು. ತಾವು ಯಾರೂ ಕೇವಲ ಜನ್ಮ ಕೊಟ್ಟ ತಂದೆಯಾಗಬೇಡಿ, ಧರ್ಮವನ್ನು ಮಕ್ಕಳಿಗೆ ನೀಡುವ ತಂದೆಯಾಗಿರಿ. ಮಕ್ಕಳಿಗೆ ದೇವಸ್ಥಾನಕ್ಕೆ ಹೋಗುವುದನ್ನು, ಪೂಜಾ ಪಾಠ ಮಾಡುವುದನ್ನು ಕಲಿಸಿರಿ. ಅದೇ ಧರ್ಮದ ಅಡಿಗಲ್ಲು. ಮಕ್ಕಳಿಗೆ ಧರ್ಮದ ಸಂಸ್ಕಾರ ನೀಡುವುದು ತಂದೆ-ತಾಯಿಯರ ಆದ್ಯ ಕರ್ತವ್ಯವಾಗಿದೆ. ಮಾತಾ-ಪಿತರಿಂದ ಧರ್ಮದ ಸಂಸ್ಕಾರ ಪಡೆದ ಮಕ್ಕಳು ಎಲ್ಲೇ ಹೋಗಲಿ ಅದನ್ನು ಬಿಡುವುದಿಲ್ಲ. ಅದರಲ್ಲೂ ಬಾಲ್ಯದಲ್ಲಿ ದೊರೆತ ಸಂಸ್ಕಾರವು ದೃಢವಾಗಿರುತ್ತದೆ.

ಲಾಲ್‌ಬಹದ್ದೂರ್ ಶಾಸ್ತ್ರಿಯವರು ಭಾರತದ ಪ್ರಧಾನಮಂತ್ರಿಯಾಗಿದ್ದರು. ಇದು ಆ ಕಾಲದ ಮಾತು. ಆ ಸಮಯದಲ್ಲಿ ಪಾಕಿಸ್ತಾನದಿಂದ ಯುದ್ಧ ನಡೆಯುತ್ತಿತ್ತು. ನಾವು ಆಗ ಆ ಗ್ರಾಮದಲ್ಲಿದ್ದೆವು. ಒಂದು ಪರಿವಾರದಲ್ಲಿ ಮೂರು ಮಂದಿಯಿದ್ದರು. ತಾಯಿ-ಮಗ-ಸೊಸೆ. ಮಗನ ಹೆಸರು ಅಶೋಕ. ಅವನು ಯುದ್ಧಕ್ಕೆ ಹೋಗಿದ್ದ. ಅವನ ವಿಚಾರ ಏನೂ ತಿಳಿಯುತ್ತಿರಲಿಲ್ಲ. ಬದುಕಿದ್ದಾನೋ ಇಲ್ಲವೋ ಎಂಬುದೂ ಗೊತ್ತಿಲ್ಲ. ಸೈನ್ಯದ ಅಧಿಕಾರಿ ಕೂಡಾ ''ನೀವು ಶಾಂತಿಯಿಂದಿರಿ, ನಾವು ಅವನ ಪತ್ತೆಹಚ್ಚುತ್ತೇವೆ'' ಎಂದಷ್ಟೇ ತಿಳಿಸುತ್ತಿದ್ದ. ಇಲ್ಲಿ ತಾಯಿ ಮತ್ತು ಪತ್ನಿ ಇಬ್ಬರೂ ಅತ್ಯಂತ ಚಿಂತಿತರಾಗಿದ್ದರು. ಹೀಗೇ ಮೂರು ತಿಂಗಳು ಕಳೆಯಿತು. ಆದರೆ ಆತನ ಪತ್ತೆಯಾಗಲೇ ಇಲ್ಲ. ಒಂದು ದಿನ ಅವರಿಬ್ಬರೂ ನಮ್ಮಲ್ಲಿಗೆ ಬಂದರು. ಬಂದವರು ನಮ್ಮೊಡನೆ ''ಮಹಾರಾಜ್, ತಾವು ಆಶೀರ್ವಾದ ಮಾಡಿ, ಸೈನ್ಯಕ್ಕೆ ಹೋದವನು ಜೀವಂತವಾಗಿದ್ದಾನೆಯೇ ತಿಳಿಸಿ'' ಎಂದು ಬೇಡಿಕೊಂಡರು. ಅದಕ್ಕೆ ನಾವು ಹೇಳಿದೆವು. ''ಜೀವಂತವಾಗಿದ್ದಾನೆ, ಹಾಗೆಂದು ನಮಗೆ ತೋರುತ್ತದೆ''. ನಾವೇಕೆ ಅಶುಭ ನುಡಿಯಬೇಕು ! ದೈವ ಯೋಗದಿಂದ ಆಗ ತಾನೇ ಆತ ಪಾಕಿಸ್ತಾನದ ಜೈಲಿನಲ್ಲಿದ್ದಾನೆಂಬ ವಾರ್ತೆ ಬಂತು. ಸ್ವಲ್ಪ ಸಮಯದ ಬಳಿಕ ಸೆರೆ ಹಿಡಿದ ಸೈನಿಕರ ಅದಲು-ಬದಲುವಿಕೆಯಲ್ಲಿ ಆತ ಬಿಡುಗಡೆಯಾಗಿಯೂ ಬಂದುಬಿಟ್ಟ. ಬಂದ ಮೇಲೆ ಅವನು ನಮ್ಮನ್ನು ಭೇಟಿ ಮಾಡಿದಾಗ ಹೀಗೆ ಹೇಳಿದ- ''ಪೂಜ್ಯರೇ, ಯಾವಾಗ ಸೈನ್ಯಕ್ಕೆ ಸೇರಿದೆನೋ, ಆಗ ಮೊಟ್ಟ ಮೊದಲು ನಾನು ಶ್ರೀಮಹಾವೀರಜೀಯ ದರ್ಶನ ಮಾಡಲು ಹೋದೆ. ಅಲ್ಲಿಂದ ಒಂದು ''ಜಿನವಾಣಿ'' ಪುಸ್ತಕವನ್ನು ಖರೀದಿಸಿ ಬಂದೆ. ಯಾವ-ಯಾವಾಗ ಸಮಯ ಸಿಗುತ್ತಿತ್ತೋ ಆಗ ಅದನ್ನು ಓದುತ್ತಿದ್ದೆ. ಒಂಟಿಯಾಗಿರುವಾಗ ಅದರಿಂದ ಒಂದೊಂದು ಸ್ತುತಿಯನ್ನು

ಪಠಿಸುತ್ತಾ ಣಮೋಕಾರ ಮಂತ್ರವನ್ನು ಉಚ್ಚರಿಸುತ್ತಾ ಇದ್ದೆ. ಅನಂತರ ಪಾಕಿಸ್ತಾನದಲ್ಲಿ ನನ್ನನ್ನು ಸೆರೆಹಿಡಿದು ಜೈಲಿಗೆ ಕಳಿಸಲಾಯಿತು. ಬಳಿಕ ನನ್ನ ತನಿಖೆ ನಡೆಸಲಾಯಿತು. ನನ್ನಲ್ಲಿದ್ದ ವಸ್ತುಗಳ ತಪಾಸಣೆ ಪ್ರಾರಂಭವಾಯಿತು. ಆಗ ಅವರಿಗೆ ಈ ''ಜಿನವಾಣಿ'' ಪುಸ್ತಕ ಸಿಕ್ಕಿತು. ಅದನ್ನು ನೋಡಿದ ಪಾಕಿಸ್ತಾನದ ಜೈಲಿನ ಕಮಾಂಡರ್ ''ಇದೇನು ?'' ಎಂದು ಕೇಳಿದ. ಆಗ ನಾನು ''ಅದು ನಮ್ಮ ಧರ್ಮಗ್ರಂಥ, ಅದರಲ್ಲಿ ಭಗವಾನ್ ಮಹಾವೀರರ ಚಿತ್ರವಿದೆ'' ಎಂದೆ. ಕೂಡಲೇ ಆತ ''ಧರ್ಮಗ್ರಂಥವೇ ?'' ಎಂದು ಹೇಳಿ ಒಮ್ಮೆ ಅದನ್ನು ತನ್ನ ತಲೆಯ ಮೇಲಿರಿಸಿ, ನನಗೆ ಕೊಟ್ಟನು.''

ಆ ಯೋಧನು ಯುದ್ಧ ಭೂಮಿಯಲ್ಲೂ ಧರ್ಮವನ್ನು ಬಿಡಲಿಲ್ಲ. ಶ್ರೀಕೃಷ್ಣನು ಯುದ್ಧರಂಗದಲ್ಲಿ ಕೂಡಾ ಧರ್ಮ ಚರ್ಚೆ ನಡೆಸಿದನು. ಇದೇ ನಮ್ಮ ದೇಶದ ಸಂಸ್ಕೃತಿ. ತಾಯಿ-ತಂದೆಯರು ಧರ್ಮದ ಸಂಸ್ಕಾರ ನೀಡಿದ ಕಾರಣವೇ ಆ ಯೋಧನು ಯುದ್ಧ ಭೂಮಿಯಲ್ಲಿ ಸಹ ಧರ್ಮವನ್ನು ಬಿಡಲಾರದಾದನು.

ಮಕ್ಕಳ ಮೇಲೆ ಮೊದಲನೆಯದಾಗಿ ಧರ್ಮದ ಸಂಸ್ಕಾರ ನೀಡಿರಿ. ಅದು ಎಂದಿಗೂ ಕ್ಷೀಣಿಸದು. ಅನಂತರ ಎಲ್ಲ ವಿದ್ಯೆಗಳನ್ನೂ ಕಲಿಸಿರಿ. ಧರ್ಮದ ಸಂಸ್ಕಾರವಿಲ್ಲದಿದ್ದರೆ ಅದು ದಿಶಾಹೀನವಾಗುತ್ತದೆ, ಕ್ಷೀಣವಾಗುತ್ತದೆ ಮತ್ತು ಜೀವನವು ಇಲಿ-ಬೆಕ್ಕು-ಪಶುಗಳ ಹಾಗೆ ನಿಷ್ಪ್ರಯೋಜನವಾಗುತ್ತದೆ.

ನಾಲ್ಕು ಪುರುಷಾರ್ಥಗಳಲ್ಲಿ ಧರ್ಮಕ್ಕೆ ಎಲ್ಲಕ್ಕಿಂತ ಪ್ರಥಮ ಸ್ಥಾನ ನೀಡಲಾಗಿದೆ. ಉಳಿದ ಮೂರು ಪುರುಷಾರ್ಥಗಳ ಮೇಲೂ ಧರ್ಮದ ಅಂಕುಶವಿರಿಸಲಾಗಿದೆ. ಧರ್ಮವು ಜೊತೆಯಲ್ಲಿದ್ದಾಗ ಮಾತ್ರವೇ ಮನುಷ್ಯನ ವಿವೇಕ-ಬುದ್ಧಿಯು ಸ್ಥಿರವಾಗಿರುತ್ತದೆ. ಆಗಲೇ ಮೋಹವು ಕಡಿಮೆಯಾಗುತ್ತದೆ ಮತ್ತು ಮೋಕ್ಷಮಾರ್ಗದ ಕಡೆಗೆ ಮನುಷ್ಯನು ಅಗ್ರೇಸರನಾಗುತ್ತಾನೆ.

## ವಿದ್ಯಾನಂದ ವಚನಾಮೃತ

*ನಾವು ಹೇಳುವುದನ್ನೆಲ್ಲಾ ನೀವು ಗ್ರಹಿಸಿದರೆ ಸಾರ್ಥಕತೆಯಿದೆಯೇ ಹೊರತು ಇಷ್ಟೆಲ್ಲಾ ಮಾಡಿ ನೀವು ಎಲ್ಲಾದರೂ ಹೋಗಿ ನೀವು ನಂದಿಮಿತ್ರನಾಗಿ ಹುಟ್ಟಿದರೆ ಏನು ಫಲ ? ನೋಡಿ, ಒಂದು ಗಂಟೆ ಸಮಯ ನೀವು ಇಲ್ಲಿ ಕುಳಿತುಕೊಳ್ಳುತ್ತೀರಿ. ಆಗ ಮನಸ್ಸಿನಲ್ಲಿ ಚಾ ಕುಡಿಯುವ, ಬೀಡಿ ಸೇದುವ ವಿಚಾರವಿಲ್ಲ, ಎಲ್ಲ ಒಳ್ಳೆಯ ಪವಿತ್ರವಾದ ವಿಚಾರ. ಒಂದು ಗಂಟೆಯಲ್ಲಿ ಎಷ್ಟು ಪರಿಣಾಮ ಶುದ್ಧಿಯಾಗುತ್ತದೆ! ಆತ್ಮನಲ್ಲಿ ಕರ್ಮ ನಿರ್ಜರೆಯಾಗುವುದು, ಪುಣ್ಯ ಪ್ರಾಪ್ತಿಯಾಗುವುದು. ಪಾಪ ನಷ್ಟವಾಗುವುದು, ಮನೆಯ ಪ್ರಾಪಂಚಿಕ ವಿಚಾರ ಬಿಟ್ಟುಬಿಟ್ಟಿರಿ. ಯಾವುದೇ ಕೆಟ್ಟ ವಿಚಾರಗಳೂ ಮನಸ್ಸಿನಲ್ಲಿಲ್ಲ. ಒಂದು ಗಂಟೆ ಕಾಲ ನಾವು ಶಾಸ್ತ್ರಗಳನ್ನು ಓದಿ ಒಳ್ಳೊಳ್ಳೆಯ ಮಾತುಗಳನ್ನು ನಿಮ್ಮ ಮುಂದಿಟ್ಟಿರುತ್ತೇವೆ. ಅಂದಮೇಲೆ ನಮ್ಮ ಮಾತಿನ ಬೆಲೆ ಎಷ್ಟಿರಬೇಕು ಹೇಳಿ ?*



– ೬ –

## ಆತ್ಮೇವ ಗುರುಃ ಆತ್ಮನಃ

ಮಹಾನುಭಾವರೇ ! ಕೃಷಿಕನು ತನ್ನ ಗದ್ದೆಯಲ್ಲಿ ಬೀಜ ಬಿತ್ತುವ ಮೊದಲು ನೇಗಿಲಿನಿಂದ ಜಮೀನಿನ ಮಣ್ಣನ್ನು ಉತ್ತು ಮೃದು-ಕೋಮಲಗೊಳಿಸುತ್ತಾನೆ. ಅನಂತರ ಬೀಜ ಬಿತ್ತುತ್ತಾನೆ. ಮಳೆ ಬಂದೊಡನೆ ಆ ಬೀಜವು ಮೊಳಕೆಯೊಡೆದು ಫಸಲು ಕೊಡುತ್ತದೆ. ಹಾಗೆಯೇ ನಿಮ್ಮ ಹೃದಯವು ಮೃದು-ಕೋಮಲವಾಗದಿದ್ದರೆ ನೀವು ಕೂಡಾ ಸಾಮಾಯಿಕ ಮಾಡಲಾರಿರಿ, ಧರ್ಮಶ್ರವಣ ಕೇಳಲಾರಿರಿ ಮತ್ತು ಧರ್ಮದ ಮಾತುಗಳನ್ನು ನೆನೆಸಿಕೊಳ್ಳಲಾರಿರಿ. ಆದ ಕಾರಣ ಸ್ವಲ್ಪ ಆಚರಣೆಯ ಆವಶ್ಯಕತೆಯೂ ಇದೆ. ಅದರಿಂದ ಹೃದಯವು ಕೋಮಲವಾಗುತ್ತದೆ ಮತ್ತು ಅದರಲ್ಲಿ ಧರ್ಮದ ಬೀಜಗಳು ಅಂಕುರಿತವಾಗುತ್ತವೆ.

**ಸೇತ್ ದಾಂಡಗೇ ಕುಂಪಣ್ ಸುಂದರ್ ರಾಖಾಣ್ ।**

**ದಿನ್ ರಾತ್ ನಹೀಂ ತ್ಯಾತ್ ಲೇ ಬಡೇ ಪಿಕೇಚನೀ ಮಾತ್ರ ॥**

ಒಬ್ಬ ರೈತನು ತನ್ನ ಗದ್ದೆಯ ಸುರಕ್ಷೆಗಾಗಿ ನಾಲ್ಕು ಕಡೆಗಳಲ್ಲೂ ಮುಳ್ಳಿನ ಬೇಲಿ ಹಾಕಿಸಿದನು. ಭೂಮಿಯನ್ನು ನೇಗಿಲಿನಿಂದ ಉತ್ತನು. ಗೊಬ್ಬರ ಹಾಕಿದನು. ಸಾಕಷ್ಟು ನೀರನ್ನು ಸುರಿದನು. ನೋಡಿಕೊಳ್ಳಲು ಚೌಕೀದಾರನನ್ನೂ ನೇಮಿಸಿದನು. ಎಲ್ಲವನ್ನೂ ಮಾಡಿದನು. ಆದರೆ ಬೀಜ ಬಿತ್ತುವುದನ್ನೇ ಮರೆತುಬಿಟ್ಟನು. ಅನಂತರ ಬೆಳೆಯನ್ನು ಕೊಯ್ಯಲು ಹೋದಾಗ ಅಲ್ಲಿ ಏನೂ ಇರಲಿಲ್ಲ. ಹೀಗೆಯೇ ನೀವು ಕೇವಲ ಕೇಳುತ್ತಲೇ ಇದ್ದೀರಿ. ಅದರಲ್ಲಿ ಸ್ವಲ್ಪವಾದರೂ ಆಂಶಿಕ ರೂಪದಲ್ಲಿ, ಅಣುವ್ರತದ ರೂಪದಲ್ಲಾದರೂ ಆಚರಣೆಯಲ್ಲಿ ಬರಲಿಲ್ಲವೆಂದಾದರೆ, ಜೀವನದಲ್ಲಿ ಇಳಿಯಲಿಲ್ಲವೆಂದಾದರೆ ಈ ಎಲ್ಲ ಪರಿಶ್ರಮವೂ ವ್ಯರ್ಥ, ನಿರರ್ಥಕ. ಚಾರಿತ್ರವೆಂಬ ಬೀಜವನ್ನು ಬಿತ್ತಲಿಲ್ಲವೆಂದಾದರೆ ಧರ್ಮವೆಂಬ ಫಸಲು ದೊರಕುವುದಾದರೂ ಹೇಗೆ ?

ನಮ್ಮ ಶಾಸ್ತ್ರಗಳಲ್ಲಿ ಉಪದೇಶ ಮತ್ತು ಉಪಚಾರ ಎಂಬ ಎರಡು ವಿಚಾರಗಳ ಬಗ್ಗೆ ಚರ್ಚೆ ನಡೆದಿದೆ. ''ಉಪದೇಶ''ವು ಎರಡು ಶಬ್ದಗಳು ಸೇರಿ ಉಂಟಾಗಿದೆ. 'ಉಪ' ಅರ್ಥಾತ್ ಸಮೀಪ 'ದೇಶ' ಅರ್ಥಾತ್ ಕೇಳಿಸುವುದು. (ಧರ್ಮವನ್ನು ಕೇಳಿಸುವುದು). ಸಮೀಪ ಹೋಗದೆ ಯಾವುದನ್ನೂ ಕೇಳಿಸಿಕೊಳ್ಳಲಾಗುವುದಿಲ್ಲ. ಸಮವಸರಣದಲ್ಲಿ ಶ್ರೋತಾ ಭಗವಂತನ ಸಮೀಪ ಹೋಗುತ್ತಾರೆ. ದಯಾಭಾವದಿಂದ ಮಾಡುವ ಸಮ್ಯಕ್ ದರ್ಶನ-ಜ್ಞಾನ-ಚಾರಿತ್ರದ ಪವಿತ್ರ ಉದ್ಬೋಧನವು ಉಪದೇಶವಾಗಿರುತ್ತದೆ.

ಕಾಡಿನಲ್ಲಿ ಕಾಲುದಾರಿಗಳಿರುತ್ತವೆ. ಅದರಲ್ಲಿ ಮುಂದೆ ಹೋಗುವಾಗ ಒಂದೊಂದ

ರಲ್ಲೂ ಕವಲೊಡೆದ ಎರಡೋ-ಮೂರೋ ದಾರಿಗಳು ಕಾಣಿಸಿದರೆ ಯಾತ್ರಿಕನು ಗಾಬರಿಗೊಳ್ಳುತ್ತಾನೆ. ಮತ್ತೆ ಅಲ್ಲಿಯ ಜನರೊಡನೆ "ಈ ದಾರಿ ನನ್ನ ಹಳ್ಳಿಯಕಡೆಗೆ ಹೋಗುತ್ತದೆಯೋ ? ನನ್ನ ಗಂತವ್ಯದವರೆಗೆ ಅರ್ಥಾತ್ ನಾನು ತಲುಪಬೇಕಾದ ಸ್ಥಳದವರೆಗೆ ಹೋಗಬಹುದೇ ?" ಎಂದು ಕೇಳುತ್ತಾನೆ. ಇದೇ ರೀತಿ ಧರ್ಮಮಾರ್ಗದಲ್ಲಿ ಯಾವುದೇ ಸಂದೇಹ ಉಂಟಾದರೆ ಕೂಡಲೇ ಇತರರನ್ನು ಕೇಳಿ ಸಮಾಧಾನ ಪಡೆಯಬೇಕು.

ಶಾಸ್ತ್ರಗಳಲ್ಲಿ ಶ್ರೋತಾ ಮತ್ತು ವಕ್ತಾ ಎಂಬ ಎರಡು ಪಕ್ಷದವರಿಗೂ ಕೆಲವು ನಿಯಮಗಳನ್ನು ಹೇಳಲಾಗಿದೆ. ಅದರ ಮೇಲೆ ಕೆಲವು ಬಂಧನಗಳನ್ನೂ ಹಾಕಲಾಗಿದೆ. ಆತ್ಮಾನುಶಾಸನದಲ್ಲಿ ಒಂದು ಶ್ಲೋಕವಿದೆ. ಅದನ್ನು ಪಂಡಿತ್ ತೋಡರಮಲ್‌ಜೀ ಕೂಡಾ ಉದ್ಧರಿಸಿದ್ದಾರೆ. ಅದು ಹೀಗಿದೆ;-

**ಪ್ರಾಜ್ಞಃ ಪ್ರಾಪ್ತಸಮಸ್ತಶಾಸ್ತ್ರ ಹೃದಯಃ ಪ್ರವ್ಯಕ್ತಲೋಕಸ್ಥಿತಿಃ ।**
**ಪ್ರಾಸ್ತಾಶಃ ಪ್ರತಿಭಾಪರಃ ಪ್ರಶಮವಾನ್ ಪ್ರಾಗೇವ ದೃಷೋತ್ತರಃ ॥**
**ಪಾಯಃ ಪ್ರಶ್ನಸಹಃ ಪ್ರಭುಃ ಪರಮನೋಹಾರೀ ಪರಾನಿಂದಯಾ ।**
**ಬ್ರೂಯಾದ್ಧರ್ಮಕಥಾಂ ಗಣೀ ಗುಣನಿಧಿಃ ಪ್ರಸ್ಪಷ್ಟಮಷ್ಟಾಕ್ಷರಃ ॥**

ವಕ್ತನಿಗೆ ನಾಲ್ಕೂ ಅನುಯೋಗಗಳ ಜ್ಞಾನವಿರಬೇಕು. ಸಮಾಜ ಮತ್ತು ದೇಶದ ಪೃಷ್ಠಭೂಮಿಯ, ವರ್ತಮಾನ ಪರಿಸ್ಥಿತಿಯ ವಿಚಾರ ಕೂಡಾ ಜೊತೆಯಲ್ಲಿರಿಸಿಕೊಳ್ಳಬೇಕು. ಪ್ರಶ್ನೆಗಳ ಜಟಿಲತೆ ಉಂಟಾದಾಗ ಕೂಡಾ ವಕ್ತಾ ಮುಗುಳು ನಗುತ್ತಿರಬೇಕು, ಕ್ಷಮಾಶೀಲನಾಗಿರಬೇಕು. ಹಾಗೆಯೇ ಆಚಾರ್ಯ ಜಿನಸೇನರು ಮೂರು ವಿಧದ ಪ್ರಶ್ನಕಾರರನ್ನು ಈ ರೀತಿ ಹೆಸರಿಸಿದ್ದಾರೆ;-

1) "ಎಲ್ಲರೂ ಕೇಳುತ್ತಿರುತ್ತಾರೆ, ಆದ ಕಾರಣ ನಾವೂ ಕೂಡಾ ಕೇಳಬೇಕು" ಹೀಗೆ ಯೋಚಿಸಿ ಪ್ರಶ್ನೆ ಕೇಳುವವರು.

2) ನಾನು ಕೇಳುವುದಂತೂ ಕೇಳಿಯೇ ಬಿಡುತ್ತೇನೆ, ಅದಕ್ಕೆ ಉತ್ತರ ಕೊಡಲು ವಕ್ತಾರನಿಗೆ ಆಗುತ್ತದೋ ಇಲ್ಲವೋ, ಅದೇನೇ ಇರಲಿ" ಹೀಗೆ ಕುತರ್ಕಕ್ಕಾಗಿ ಪ್ರಶ್ನೆ ಕೇಳುವವರು ಕೆಲವರು.

3) ಕೆಲವರು ತಮ್ಮ ಜಿಜ್ಞಾಸೆಯನ್ನು ಶಾಂತಗೊಳಿಸುವುದಕ್ಕಾಗಿ ವಿನಮ್ರಭಾವದಿಂದ ಕೇಳುತ್ತಾರೆ. ಅವರಿಗೆ ಸಮಾಧಾನ ಸಿಕ್ಕಿದಾಗ ಆ ಮಾತುಗಳನ್ನು ಗ್ರಹಣ ಮಾಡಿಕೊಂಡು ಆಚರಣೆಗೆ ತರುತ್ತಾರೆ. ಅಂಥವರು ಸರ್ವೋತ್ಕೃಷ್ಟ ಪ್ರಶ್ನಕಾರರು ಎನಿಸುತ್ತಾರೆ. ಇದೇ ಪ್ರಕಾರ ಶ್ರೋತಾರರಲ್ಲಿ ಕೂಡಾ ವಿಭಿನ್ನ ಪ್ರಶ್ನಕಾರರಿರುತ್ತಾರೆ.

1) ಕೆಲವು ಶ್ರೋತಾ ಸಾರ-ಸಾರವನ್ನು ಗ್ರಹಣ ಮಾಡುತ್ತಾರೆ ಮತ್ತು ಉಳಿದುದನ್ನು ಬಿಟ್ಟುಬಿಡುತ್ತಾರೆ. ಹೇಗೆ ಹಂಸಪಕ್ಷಿಯು ಹಾಲನ್ನು ಮಾತ್ರ ಗ್ರಹಣ ಮಾಡಿ ನೀರನ್ನು ಬಿಟ್ಟು



ಬಿಡುತ್ತದೋ ಹಾಗೆಯೇ ತಾವು ಕೇಳಿದುದರಲ್ಲಿ ತಮ್ಮ ಉಪಯೋಗಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಗ್ರಹಣ ಮಾಡಿಕೊಂಡು ಉಳಿದುದನ್ನು ಬಿಟ್ಟುಬಿಡುತ್ತಾರೆ. ಅಂತಹ ಶ್ರೋತಾ ಸರ್ವೋತ್ಕೃಷ್ಟನೆನಿಸುತ್ತಾನೆ.

2) ಮಧ್ಯಮ ಶ್ರೋತಾ- ಹಸುವಿನಂತಿರುವವರು ಎಂದು ಹೇಳಲಾಗಿದೆ. ಹೇಗೆ ಹಸುವು ಕಿನಾರೆ-ಕಿನಾರೆಗಳಲ್ಲಿ ಮೇಯುತ್ತಾ, ನೀರನ್ನು ಕೂಡಾ ನದಿಯ ಕಿನಾರೆಯಿಂದಲೇ ಕುಡಿಯುತ್ತಾ ಇರುತ್ತದೋ, ಹಾಗೆಯೇ ಈ ಶ್ರೋತಾ ಸಭೆಯಲ್ಲಿ ಶಾಂತಿಯಿಂದ ಕುಳಿತುಕೊಂಡು ಕೇಳುತ್ತಾರೆ ಮತ್ತು ಇತರರಿಗೂ ಶಾಂತಿಯಿಂದ ಕೇಳಲು ಬಿಡುತ್ತಾರೆ. ಅವರು ವಾತಾವರಣವನ್ನು ನಿರ್ಮಲವಾಗಿಟ್ಟುಕೊಂಡಿರುತ್ತಾರೆ.

3) ಕೆಲವು ಶ್ರೋತಾ- ತಾವು ಸ್ವಯಂ ಕೇಳುವುದೂ ಇಲ್ಲ, ಬೇರೆಯವರಿಗೆ ಕೇಳಲು ಬಿಡುವುದೂ ಇಲ್ಲ. ಮಧ್ಯೆ ಮಧ್ಯೆ ಮಾತನಾಡುತ್ತಲೂ ಇರುತ್ತಾರೆ. ಹೇಗೆಂದರೆ ಎಮ್ಮೆಗಳು ಸರೋವರದಲ್ಲಿ ನೀರು ಕುಡಿಯುವುದಾದರೆ ಮುಖವನ್ನು ಆಳದವರೆಗೆ ಮುಳುಗಿಸಿ ನೀರನ್ನು ಕುಡಿಯುತ್ತವೆ. ಮತ್ತೆ ಆ ಕಲುಷಿತ ನೀರನ್ನು ಯಾವುದೂ ಕುಡಿಯುವಂತಿಲ್ಲ. ಹುಲ್ಲನ್ನು ಮೇಯುವುದಾದರೂ ಹಾಗೆಯೇ. ಹುಲ್ಲಿನ ಬುಡವನ್ನೇ ಮಣ್ಣು ಸಮೇತ ಕಿತ್ತು ಹಾಕಿ ಮೇಯುತ್ತವೆ ಮತ್ತು ಆ ಉಳಿದ ಹುಲ್ಲನ್ನು ಯಾವ ಹಸುವೂ ಮೇಯುವಂತಿಲ್ಲ. ಅವರು ಆ ರೀತಿಯ ಶ್ರೋತಾ ಆಗಿರುತ್ತಾರೆ.

4) ಇನ್ನು ಕೆಲವು ಶ್ರೋತಾ ಹೀಗಿರುತ್ತಾರೆ- ಅವರು ಸಾರಾ-ಸಾರವನ್ನೆಲ್ಲಾ ಬಿಟ್ಟು ವ್ಯರ್ಥವಾದುದನ್ನು ಮಾತ್ರ ಗ್ರಹಣ ಮಾಡುತ್ತಾರೆ. ಇದಕ್ಕೊಂದು ಉದಾಹರಣೆ ಕೊಡುವುದಾದರೆ- ಅರೆದ ಪದಾರ್ಥವನ್ನು ಗಾಳಿಸಿ ತೆಗೆಯುವಾಗ ಸತ್ವವು ಕೆಳಗಿಳಿದು ಹೊಟ್ಟು ಮಾತ್ರ ಮೇಲೆ ಉಳಿದರೆ ಆ ಹೊಟ್ಟನ್ನು ಆರಿಸಿಕೊಳ್ಳುವವರಂತೆ ಅವರಿರುತ್ತಾರೆ. ಅಂಥವರು ನಿಕೃಷ್ಟ ಶ್ರೋತಾರರು ಎನಿಸುತ್ತಾರೆ. ಅಂತಹ ಶ್ರೋತಾರರನ್ನು 'ಧವಲಾ'ದಲ್ಲಿ ಒಡೆದ ಘಟದಂತೆ ಎಂದು ಹೇಳಲಾಗಿದೆ. ಶ್ರೋತಾರರು ಸೂಕ್ಷ್ಮ ಬುದ್ಧಿಯವರೂ, ಮಂದ ಬುದ್ಧಿಯವರೂ, ಮಧ್ಯಮ ಬುದ್ಧಿಯವರೂ ಇರುತ್ತಾರೆಂದು ಧವಲಾದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದ ಕಾರಣ ಮೂರು ವಿಧದ ಶ್ರೋತಾರರನ್ನು ಗಮನದಲ್ಲಿರಿಸಿಕೊಂಡು ಅವರವರಿಗೆ ತಿಳಿಯುವ ರೀತಿಯಲ್ಲಿ ಒಪ್ಪುವ ಭಾಷೆಯಲ್ಲಿ ಉಪದೇಶ ಕೊಡಬೇಕು.

**ಆಲಸ್ಯೋ ಮಂದಬುದ್ಧಿಶ್ಚ ಸುಖಿನೋ ವ್ಯಾಧಿಪೀಡಿತಃ ।**

ಯಾರು ಆಲಸಿಗಳಾಗಿರುತ್ತಾರೋ ಅವರು ಹೀಗೆ ಯೋಚಿಸುತ್ತಾರೆ- ಯಾರು ಈಗ ದೇವಸ್ಥಾನಕ್ಕೆ ಹೋಗುತ್ತಾರೆ ? ಅಥವಾ ಪ್ರವಚನ ಕೇಳಲು ಹೋಗುತ್ತಾರೆ ? ಎಲ್ಲ ಗೊತ್ತಿದ್ದರೂ ಬೇಕಾಗಿಯೇ ತಮ್ಮ ಅಭಿಪ್ರಾಯ ಬದಲಾಯಿಸಿ ಮಲಗಿ ಬಿಡುತ್ತಾರೆ. ಆಲಸ್ಯಕ್ಕೆ ಯಾವುದೇ ಕಾರಣ ಬೇಕಾಗಿಲ್ಲ. ಯಾವನು ಮಂದ ಬುದ್ಧಿಯಾಗಿರುತ್ತಾನೋ, ಅವನು ಶಾಸ್ತ್ರವನ್ನು ಕೇಳುವುದಿಲ್ಲ, ಅವನಿಗೆ ಶಾಸ್ತ್ರಗಳ ಗೂಢ ವಿಚಾರಗಳು ತಿಳಿಯುವುದಿಲ್ಲ.

ಅತ್ಯಂತ ಸುಖೀ ವ್ಯಕ್ತಿ, ಸಾಧನ ಸಂಪನ್ನ ವ್ಯಕ್ತಿಯು ಕೂಡಾ ಶಾಸ್ತ್ರವನ್ನು ಕೇಳುವುದಿಲ್ಲ. ಅವನು ಆ ಸುಖ ಸಾಧನೆಗಳಲ್ಲೇ ಮುಳುಗಿಕೊಂಡಿರುತ್ತಾನೆ. ಯಾವನೇ ವ್ಯಾಧಿ ಪೀಡಿತ ವ್ಯಕ್ತಿಯು ಕೂಡಾ ಶಾಸ್ತ್ರವನ್ನು ಕೇಳುವುದಿಲ್ಲ ಮತ್ತು ಯಾವನು ನಾನಾ ವಿಷಯಗಳಲ್ಲಿ ವಿಕಾರಗಳಲ್ಲಿ ಆಸಕ್ತನಾಗಿರುತ್ತಾನೋ, ಯಾವನು ಸಂಸಾರ ಪ್ರಪಂಚದಲ್ಲಿ ಆಸಕ್ತನಾಗಿರುತ್ತಾನೋ, ಅವನು ಕೂಡಾ ತತ್ತ್ವಜ್ಞಾನದ ಮಾತುಗಳನ್ನು ಕೇಳಿಸಿಕೊಳ್ಳಲಾರ. ಈ ರೀತಿ ಯಾರಲ್ಲಿ ಉಪರೋಕ್ತ ಯಾವುದೇ ದುರ್ಗುಣಗಳಿದ್ದರೂ ಅವನು ತತ್ತ್ವಜ್ಞಾನದಿಂದ ವಂಚಿತನಾಗುತ್ತಾನೆ. ಮಹಾನುಭಾವರೇ ! ಉಪದೇಶ ಕೂಡಾ ಉಪಕಾರವಾಗಿರುತ್ತದೆ. ಆಚಾರ್ಯರು ಅಮೃತಾಶೀತಿಯಲ್ಲಿ ಹೀಗೆ ಹೇಳಿದ್ದಾರೆ;-

**ನ ಹಿ ಕೃತಮುಪಕಾರಂ ಸಾಧವೋ ವಿಸ್ಮರಂತಿ ।**

ಒಬ್ಬ ವ್ಯಕ್ತಿ ರೈಲು ಡಬ್ಬಕ್ಕೆ ಹತ್ತುತ್ತಾನೆ. ಆದರೆ ಅವನಿಗೆ ಜಾಗ ಸಿಗುವುದಿಲ್ಲ. ಕುಳಿತವರಲ್ಲಿ ಯಾರೊಬ್ಬನೂ ಸ್ವಲ್ಪ ಒತ್ತೊತ್ತಾಗಿ ಕುಳಿತು ಇವನಿಗೆ ಜಾಗ ಮಾಡಿಕೊಟ್ಟರೆ ಇವನು ಕೃತಜ್ಞತಾ ಪೂರ್ವಕ ''ಥ್ಯಾಂಕ್ಸ್'' ಎನ್ನುತ್ತಾನೆ. ಇವನಲ್ಲಿ ಪ್ರಯಾಣದ ಟಿಕೆಟ್ ಇತ್ತು, ಎಲ್ಲವೂ ಇತ್ತು. ಅಲ್ಲಿ ಕುಳಿತವನು ಕೇವಲ ಸ್ವಲ್ಪ ಜಾಗ ಮಾಡಿಕೊಟ್ಟುದಕ್ಕೆ ಕೃತಜ್ಞತೆ ವ್ಯಕ್ತಪಡಿಸುವಾಗ ನಮಗೆ ಉಪದೇಶ ನೀಡಿದ, ನಮ್ಮ ಕಲ್ಯಾಣದ ಮಾರ್ಗವನ್ನು ತೋರಿಸಿ ಕೊಟ್ಟ ಆಚಾರ್ಯರಿಗೆ ನಾವು ಎಷ್ಟೊಂದು ಕೃತಜ್ಞತರಾಗಿರಬೇಕು ! ಅವರ ಉಪಕಾರವನ್ನು ಮರೆಯುವುದಾದರೂ ಹೇಗೆ ? ಕೃತಘ್ನರು ಮಾತ್ರ ಮರೆತುಬಿಡುತ್ತಾರೆ. ಅಂಥವರಿಗೆ ಶಾಸ್ತ್ರಗಳ ಬಗ್ಗೆ ಅಥವಾ ಭಗವಂತನ ವಾಣಿಯ ಮೇಲೆ ಕೃತಜ್ಞತೆಯಿರುವುದಿಲ್ಲ. ಆದರೆ ಕೃತಜ್ಞ ವ್ಯಕ್ತಿ ಉಪಕಾರವನ್ನು ಮರೆಯುವುದಿಲ್ಲ. ಯಾವ ಉಪದೇಶದಿಂದ ಇಚ್ಛಾನುಕೂಲ ಫಲ ಸಿದ್ಧಿಯಾಗುತ್ತದೋ, ಯಾವುದರಲ್ಲಿ ಭಗವಂತನ ವಾಣಿಯು ಅತ್ಯಂತ ಸರಳ-ಸುಬೋಧ ಭಾಷೆಯಲ್ಲಿ ಪ್ರಾಪ್ತವೋ, ಅದಕ್ಕಾಗಿ ಯಾರ ಮನಸ್ಸಿನಲ್ಲಿ ಕೃತಜ್ಞತಾಭಾವವಿರುತ್ತದೋ, ಅವರೇ ಉಪದೇಶವನ್ನು ಜೀರ್ಣಿಸಿಕೊಳ್ಳಬಲ್ಲರು, ಅವರೇ ಶಾಸ್ತ್ರಗಳನ್ನು ಜೀರ್ಣಿಸಿಕೊಳ್ಳಬಲ್ಲರು. ಅನ್ಯರಿಂದ ಅದು ಸಾಧ್ಯವಿಲ್ಲ.

ಉಪದೇಶ ಕೇಳಿಸುವ(ಹೇಳುವ) ಅಧಿಕಾರ ಯಾರಿಗಿದೆ ? ಎಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಷಟ್ಖಂಡಾಗಮದಲ್ಲಿ ಆಚಾರ್ಯರು ಹೀಗೆ ಬರೆದಿದ್ದಾರೆ- ''ಚಾರಿತ್ರದ ಅಭಾವವುಂಟಾದಾಗ ಕಾರಣ ಗೃಹಸ್ಥರಿಗೆ ಉಪದೇಶ ಕೇಳಿಸುವ(ಹೇಳುವ) ಅಧಿಕಾರವಿಲ್ಲ. ಅವರಿಗೆ ಶಾಸ್ತ್ರ-ಗದ್ದುಗೆಯ ಮೇಲೆ ಕುಳಿತುಕೊಳ್ಳುವ ಅಧಿಕಾರವಿಲ್ಲ'' ದೃಷ್ಟಿವಾದ ಗ್ರಂಥಕ್ಕನುಸಾರವಾಗಿ ಅವರಿಗೆ ಗೂಢ ಆಧ್ಯಾತ್ಮಿಕ ತತ್ತ್ವಜ್ಞಾನದ ಉಪದೇಶ ನೀಡುವ ಅಧಿಕಾರವಿಲ್ಲ. ಯಾವನೇ ನೂತನ ಸಾಧು-ಮುನಿಗೆ ಕೂಡಾ ಈ ಅಧಿಕಾರ ಕೊಡಲ್ಪಡಲಿಲ್ಲ.

**ನೂತನ ಸ್ಯಾಗ್ರ-ಶಿಷ್ಯಸ್ಯ, ಕ್ಷಮಾಧ್ಯಾಯನ ಶಾಲಿನಃ ।**
**ಮುಖಶುದ್ಧಯಾದಿಕಂ ನೈವ, ಯಾವನ್ ನ ಗುರುಣೋಚ್ಯತೇ ॥**



ಸಂಘದಲ್ಲಿ ಯಾವನೇ ಹೊಸ ಶಿಷ್ಯನಿದ್ದರೆ ಅವನು ಉಪದೇಶ ಕೊಡಲಾರನು. ಉಪದೇಶ ನೀಡುವ ಮುನಿಯು ಅತ್ಯಂತ ಕ್ಷಮಾಶೀಲನೂ, ಸಾಧು ಸರಳ ಸ್ವಭಾವಿಯೂ, ಅತ್ಯಂತ ನಿರ್ಮಲ ಪರಿಣಾಮ ಯುಕ್ತನೂ ಆಗಿರಬೇಕು. ಅಧ್ಯಯನದಲ್ಲಿ ಸತತ ರತನಾಗಿರಬೇಕು, ಅವನಿಗೆ ಭಾಷೆಯ ಸಂಪೂರ್ಣ ಜ್ಞಾನವಿರಬೇಕು. ವ್ಯಾಕರಣದ ಮೂಲಕ ಮುಖ ಶುದ್ಧವಾಗಿರಬೇಕು. ಭಾಷೆಯು ಕೋಮಲವಾಗಿರಬೇಕು. ಈ ಎಲ್ಲಾ ಗುಣಗಳೂ ಅವನಲ್ಲಿದ್ದರೆ ಮಾತ್ರ ಗುರುಗಳು ಅವನ ಪರೀಕ್ಷೆ ನಡೆಸಿದ ಬಳಿಕವೇ ಇನ್ನು ಇವನು ಉಪದೇಶ ನೀಡಬಹುದು ಎಂದು ಅಧಿಕಾರ ಕೊಡುತ್ತಾರೆ. ಆಚಾರ್ಯರು ಉಪದೇಶ ಕೊಡದ ಹೊರತು ಯಾವನೇ ಮುನಿಯಾಗಲಿ, ಉಪಾಧ್ಯಾಯನಾಗಲಿ ಉಪದೇಶ ಕೊಡಲು ಅಧಿಕಾರಿಯಾಗುವುದಿಲ್ಲ. ಇಂದ್ರನಂದಿ ಸಂಹಿತೆಯು ನಮ್ಮ ಜೈನರ ಸಂವಿಧಾನವಾಗಿರುತ್ತದೆ.

ಸನ್ 1975ರಲ್ಲಿ ಪ್ಯಾರಿಸ್‌ನಲ್ಲಿ ಜೈನ ನ್ಯಾಯದ ಮೇಲೆ ಭಾಷಣ ಮಾಡುವುದಕ್ಕಾಗಿ ಭಾರತದಿಂದ ಡಾ|| ಎ.ಎನ್. ಉಪಾಧ್ಯೆಯವರನ್ನು ಕರೆಸಲಾಗಿತ್ತು. ಎರಡು ವರ್ಷಗಳ ಕಾಲ ಅಧ್ಯಯನ ಮಾಡಿದ ಬಳಿಕ ಎರಡು ದಿನ ಅವರು ಭಾಷಣವಿತ್ತರು. ಗಹನವಾದ ಅಧ್ಯಯನದ ಬಳಿಕವೇ ಅವರು ಭಾಷಣವಿತ್ತರು. ಡಾ|| ಚಿಂತಾಮಣಿರಾವ್ ದೇಶಮುಖ್ ಎಂಬ ಪ್ರಸಿದ್ಧ ಅರ್ಥ ಶಾಸ್ತ್ರಜ್ಞರು ಹೀಗೆ ಬರೆದಿದ್ದಾರೆ- ''ನಾನು ಹದಿನೈದು ಗಂಟೆಗಳ ಕಾಲ ಅಧ್ಯಯನ ಮಾಡಿದ ಮೇಲೆ ಆ ವಿಷಯದ ಕುರಿತು ಹದಿನೈದು ನಿಮಿಷ ಮಾತಾಡುತ್ತೇನೆ. ಆದರೆ ಇಂದು ಹದಿನೈದು ನಿಮಿಷ ಅಧ್ಯಯನ ಮಾಡಿ ಹದಿನೈದು ಗಂಟೆ ಮಾತಾಡಲು ಎದ್ದು ನಿಲ್ಲುತ್ತಾರೆ.

ಅಧ್ಯಯನವಿಲ್ಲದೆ, ಆಧಾರವಿಲ್ಲದೆ ಮಾತಾಡುವುದರಿಂದ ಏನೂ ಲಾಭವಿಲ್ಲ. ಆದ ಕಾರಣ ಆಚಾರ್ಯರು ''ವಕ್ತಾ ಅಧ್ಯಯನಶೀಲನಾಗಿರಬೇಕು, ಕ್ಷಮಾಶೀಲನಾಗಿರಬೇಕು, ವಾಣಿ ಶುದ್ಧವಾಗಿರಬೇಕು, ಹಿತ, ಮಿತ, ಮೃದು ಭಾಷಿಯಾಗಿರಬೇಕು ಎಂದೆಲ್ಲಾ ಹೇಳಿದರು. ಆ ಬಗ್ಗೆ ಕುಂದಕುಂದಾಚಾರ್ಯರು ''ಅನುವೀಚಿ ಭಾಷಣವು ಒಂದು ಕಲೆಯು ಕೂಡಾ ಆಗಿರಬೇಕು'' ಎಂದಿದ್ದಾರೆ. ಇಂದು ಶಾಸ್ತ್ರೀಯ ಶಬ್ದ ಸರೋವರಕ್ಕೆ ಕಲ್ಲನ್ನು ಎಸೆಯುತ್ತಾರೆ ಆಗ ಅದರಲ್ಲಿ ತರಂಗಗಳು ಏಳುತ್ತವೆ. ಒಂದರಮೇಲೊಂದು ತರಂಗಗಳು ಏಳುತ್ತಾ ಸರೋವರದ ದಡದವರೆಗೆ ಚಲಿಸುತ್ತವೆ. ಹಾಗೆ ತರಂಗಗಳು ಕಿನಾರೆಯ ಕಡೆಗೆ ಹೋಗುತ್ತಿರುವಾಗ ಮಧ್ಯದಲ್ಲಿ ಯಾವುದೇ ಹುಲ್ಲು ಕಡ್ಡಿ ಸಿಕ್ಕಿದರೆ ಅದನ್ನು ಕೂಡಾ ತನ್ನೊಂದಿಗೆ ಒಯ್ಯುತ್ತವೆ. ಇದೇ ಪ್ರಕಾರ ಉಪದೇಶಕನು ಕೋಮಲ ಶಬ್ದಗಳಲ್ಲಿ ತನ್ನ ಉಪದೇಶದ ಮೂಲಕ ಶ್ರೋತೃಗಳ ಮನಸ್ಸಿನ ಮಲಿನತೆಯನ್ನು, ಕಳಂಕವನ್ನು ದೂರಗೊಳಿಸುತ್ತಾ, ವಿಷಯವನ್ನು ಸಮರ್ಥವಾಗಿ ತಿಳಿಯುವಂತೆ ತತ್ತ್ವದ ಕಡೆಗೆ ತಲುಪಿಸಬೇಕು.

'ಪುರುದೇವ ಚಂಪೂ'ನಲ್ಲಿ ಅನುವೀಚಿ ಭಾಷಣ ಕಲೆಯನ್ನು ನೀರಿನ ಝರಿಯ ಉಪಮೆಯಿಂದ ವಿವರಿಸಲಾಗಿದೆ. ನೀರು ಅತ್ಯಂತ ಕೋಮಲವಾಗಿರುತ್ತದೆ, ಆದರೆ ಅದು

ಬಂಡೆಯನ್ನೂ ಕೂಡ ಕೊರೆದು ದಾರಿ ಮಾಡುಕೊಂಡು ಹೋಗುತ್ತದೆ ಮತ್ತು ಝರಿಯ ರೂಪದಲ್ಲಿ ಹರಿಯುತ್ತದೆ. ನೀರು ಎಂಬ ಕೋಮಲ ಶಬ್ದವೂ ಕಾರ್ಯಕಾರಿಯಾಗುತ್ತದೆ. ಕರ್ಮನಾಶಕ್ಕೆ ಕಾರಣವಾಗುತ್ತದೆ.

ನಮ್ರತೆಯಿಂದ ಮಾತನಾಡಿದರೆ ಮಗು ಕೆಲಸ ಮಾಡುತ್ತದೆ. ಕಠೋರತೆಯಿಂದ ಮಾತನಾಡಿದರೆ ಯಾ ಆದೇಶಾತ್ಮಕವಾಗಿ ಮಾತಾಡಿದರೆ ನಿರಾಕರಿಸುತ್ತದೆ ಮಾತ್ರವಲ್ಲ ವಿದ್ರೋಹಾತ್ಮಕವಾಗಿಯೂ ಮಗು ವರ್ತಿಸುತ್ತದೆ. ಅತಿ ಚಿಕ್ಕ ಬಾಲಕನು ಕೂಡಾ ಮೃದುವಾದ ಹಿತ-ಮಿತ ವಚನಗಳಿಂದಲೇ ಆಕರ್ಷಿತನಾಗುತ್ತಾನೆ. ಅನುವೀಚಿ ಭಾಷಣ ಕಲೆಯ ಅಭಾವದಲ್ಲಿ ಯಾವನೂ ವಕ್ತಾ ಆಗಲಾರ. ಅದಿಲ್ಲದೆ ಉಪದೇಶ ನೀಡುವ ಅಧಿಕಾರವಿರುವುದಿಲ್ಲ.

ಆಯುರ್ವೇದದ ಆಚಾರ್ಯ ಚರಕನು ಹೀಗೆ ಬರೆದಿದ್ದಾನೆ- ''ಯಾವಾಗ ಮುಖದಿಂದ ಶುದ್ಧವಾಣಿ ಹೊರಡುತ್ತದ್ದೋ, ಸತ್ಯವಾಣಿ ಹೊರಡುತ್ತದ್ದೋ ಆಗ ಮುಖದಿಂದ ಪ್ರಕಾಶ ಹೊರಡುತ್ತದೆ, ಬೆಳಕು ಹೊರಡುತ್ತದೆ.'' ಅಮೃತಶಿಲೆಯಲ್ಲೂ ಹೀಗೆ ಬರೆದಿದೆ;

**ಯನ್ನಾಸತ ಸ್ಫುರತಿ ಕೋಽಪಿ ಹೃದಿ ಪ್ರಕಾಶೋ ।**
**ವಾಗ್ದೇವತಾ ಚ ವದನೇ ಪದಮಾದಧಾತಿ ॥**
**ಲಬ್ಧ್ವಾ ತದಕ್ಷಖರಂ ಗುರುಸೇವಯಾ ತ್ವಂ ।**
**ಮಾ-ಮಾ ಕೃಥಾ ಕಥಮಪೀಹ ವಿರಾಮ ಮಸ್ಯಾತ್ ॥**

ಆದ ಕಾರಣ ಯಾವಾಗ ಗುರುಗಳು ವಾಗ್ದೀಕ್ಷಾ ಕೊಡುತ್ತಾರೋ, ವಾಣಿಯ ದೀಕ್ಷೆ ಕೊಡುತ್ತಾರೋ, ಆಗಲೇ ಸಾಧು/ಮುನಿ ಪ್ರವಚನ ಕೊಡಲು ಶಕ್ತರಾಗುತ್ತಾರೆ. ದೀಕ್ಷೆ ಪಡೆಯದೆ ಯಾರೂ ವಕ್ತಾ ಆಗಲಾರರು. ಜೈನ ಶಾಸ್ತ್ರಗಳಲ್ಲಿ ಅಂತಹ ವ್ಯವಸ್ಥೆಯೇ ಇರುತ್ತದೆ. ಎಲ್.ಎಲ್.ಬಿ. ಪಾಸ್ ಮಾಡಿದ ಮೇಲೆ, ವಕೀಲನಾದ ಮೇಲೂ ಅವನು ಇನ್ನೊಬ್ಬ ವರಿಷ್ಠ ವಕೀವಲರ ಜೊತೆಯಲ್ಲಿ ತರಬೇತಿ ಪಡೆಯಬೇಕಾಗುತ್ತದೆ. ಆಗ ಅವನು ಜಡ್ಜರ ಮುಂದೆ ವಾದ ಮಾಡಲು ನಿಲ್ಲಬಲ್ಲನು. ಒಂದೇ ಒಂದು ತಪ್ಪು ಮಾತನ್ನಾಡಿದರೂ ಜಡ್ಜರು ಅವನನ್ನು ಹೀಗಳೆಯಬಹುದು. ಏಕೆಂದರೆ ನ್ಯಾಯದ ಪೀಠ ಅದಾಗಿರುತ್ತದೆ.

ವಕ್ತಾನಲ್ಲಿ ಶ್ರೋತೃಗಳ ಪ್ರಶ್ನೆಗಳಿಗೆ ಸಮಾಧಾನ ನೀಡುವ ಶಕ್ತಿಯು ಕೂಡಾ ಇರಬೇಕಾಗುತ್ತದೆ. ಜಗತ್ತಿನಲ್ಲಿ ಸಾವಿರಾರು ವಕ್ತಾ ದೊರಕಬಹುದು, ಆದರೆ ಪರೀಕ್ಷಿತ ವಕ್ತಾ ಸಾವಿರದಲ್ಲಿ ಒಬ್ಬ ಮಾತ್ರ ಇರುತ್ತಾನೆ. ವಕ್ತೃತ್ವ ಕೂಡಾ ಒಂದು ಕಲೆ. ಆದುದರಿಂದ ಆಚಾರ್ಯರು ವಕ್ತಾನಿಗೆ ಕೂಡಾ ಕೆಲವು ಬಂಧನಗಳನ್ನು ಹೇಳಿದ್ದಾರೆ. ಆಚಾರ್ಯ ಗುಣಭದ್ರರು ಒಂದೆಡೆ ಹೀಗೆ ಹೇಳಿದ್ದಾರೆ;-

**ಪ್ರಾಜ್ಞಃ ಪ್ರಾಪ್ತಸಮಸ್ತ ಶಾಸ್ತ್ರ ಹೃದಯಃ........ ।**

ವಕ್ತಾ ಪ್ರಾಜ್ಞನಾಗಿರಬೇಕು. ಆಗಲೇ ಅವನು ಬುದ್ಧಿಪೂರ್ವಕ ತತ್ತ್ವನಿರ್ಣಯ



ಮಾಡಬಲ್ಲನು, ಗೂಢ ನಿಷ್ಕರ್ಷೆ ಹೊರಡಿಸಬಲ್ಲನು, ಅವುಗಳನ್ನು ತಿಳಿಯಬಲ್ಲನು, ಸಿದ್ಧಾಂತಗಳನ್ನು ಒರೆಗೆ ಹಚ್ಚಿ ''ನಿಜ-ಸಟೆ''ಯನ್ನು ಕಂಡುಹಿಡಿದು ಶ್ರೋತೃಗಳಿಗೆ ಸ್ವಲ್ಪ ಕೊಡಬಲ್ಲನು. ನಮ್ಮಲ್ಲಿ ಶ್ರೋತಾ ಮತ್ತು ವಕ್ತಾ ಇಬ್ಬರಿಗೂ ನೀತಿ ಹೇಳಲಾಗಿದೆ. ಆಚಾರ್ಯ ಪದ್ಮನಂದಿ ಹೀಗೆ ಹೇಳಿದ್ದಾರೆ;-

**ವಿದ್ವನ್ಮಾನ್ಯತಯಾ ಸದಸ್ಯತಿತರಾ ಮುದ್ದಂಡವಾಗ್ಡಂಬರಾಃ ।**
**ಶೃಂಗಾರಾದಿರಸೈಃ ಪ್ರಮೋದ ಜನಕಂ ವ್ಯಾಖ್ಯಾನ ಮಾತನ್ವತೇ ॥**
**ಯೇ ತೇ ಚ ಪ್ರತಿಸಹ್ಮ ಸಂತಿ ಬಹವೋ ವ್ಯಾಮೋಹ ವಿಸ್ತಾರಿಣೋ- ।**
**ಭ್ಯಾಸ್ತತ್ಪರಮಾತ್ಮ ತ್ವವಿಷಯಂ ಜ್ಞಾನೇ ಕುತೇ ದುರ್ಲಭಾಃ ॥**

ನಿಜವಾದ ವಕ್ತಾ ಸಿಗಲು ಬಹಳ ಕಠಿಣ, ದುರ್ಲಭ. ಸಂಸಾರ ಪ್ರಪಂಚವನ್ನು ಹೆಚ್ಚಿಸುವ, ಕಲಹ-ಕಷಾಯ ಉತ್ಪನ್ನ ಮಾಡುವ ಶೃಂಗಾರ ರಸದ ಮಾತುಗಳನ್ನು ಹೇಳುವವರು ಬಹಳಷ್ಟು ಮಂದಿ ದೊರಕಬಹುದು, ಎಲ್ಲೆಲ್ಲೂ ಸಿಗಬಹುದು. ಹೇಗೆಂದರೆ ಒಂದು ಹಸುವಿಗೆ ಲಾಠಿ ತೋರಿಸಿ ಎಲ್ಲಿಗೆ ಬೇಕೋ ಅಲ್ಲಿಗೆ ಅದನ್ನು ಹೇಗೆ ಕೊಂಡೊಯ್ಯಲಾಗುತ್ತದೋ ಹಾಗೆಯೇ ಸಂಸಾರ ಪ್ರಪಂಚವನ್ನು ವೃದ್ಧಿಗೊಳಿಸುವವರು ಗಲ್ಲಿ-ಗಲ್ಲಿಯಲ್ಲಿರುವ ವಕ್ತಾ ಆಗಿದ್ದು ಏನೂ ತಿಳಿಯದ ಶ್ರೋತೃಗಳನ್ನು ಎಲ್ಲಿಗೆ ಬೇಕೋ ಅಲ್ಲಿಗೆ ಕೊಂಡು ಹೋಗುತ್ತಾರೆ. ಅವರು ಧರ್ಮ ಸಭೆಗಳಲ್ಲಿ ಉಚ್ಚ ಸ್ವರದಲ್ಲಿ ಸಂಸಾರವನ್ನು ವೃದ್ಧಿಸುವ ಮಾತುಗಳನ್ನು, ರಾಗ-ದ್ವೇಷವನ್ನು ಉತ್ಪನ್ನಗೊಳಿಸುವ ಮಾತುಗಳನ್ನು ಹೇಳಿ ಜನರನ್ನು ಶೃಂಗಾರದ ಕಡೆಗೆ ಪ್ರೇರಿತಗೊಳಿಸುತ್ತಾರೆ.

ಆಧ್ಯಾತ್ಮ ಜಗತ್ತಿನಲ್ಲಿ ನವರಸಗಳಲ್ಲಿ ಶಾಂತರಸವೊಂದೇ ನಡೆಯುವುದು. ಉಳಿದ ಎಂಟು ರಸಗಳು ನಾಟಕಾದಿಗಳಲ್ಲಿ ಪ್ರಯೋಗವಾಗುತ್ತವೆ. ಅವುಗಳಲ್ಲಿ ಶೃಂಗಾರಾತ್ಮಕ ಮಾತುಗಳನ್ನು ಟೆಲಿವಿಷನ್ ಮೊದಲಾದವುಗಳಲ್ಲಿ ನೋಡಿ-ಕೇಳಿ ಸಾಮಾನ್ಯ ಜನರು ಮಂತ್ರ ಮುಗ್ಧರಾಗುತ್ತಾರೆ, ಆನಂದದ ಅನುಭವ ಪಡೆಯುತ್ತಾರೆ. ಚಿಕ್ಕ ಮಕ್ಕಳು ಕೂಡಾ ಅವುಗಳ ಕಡೆಗೆ ಆಕರ್ಷಿತರಾಗುತ್ತಾರೆ. ಆದರೆ ಇವು ಎಲ್ಲವೂ ಮೋಹವನ್ನು ಹೆಚ್ಚಿಸುವಂಥವುಗಳಾಗಿವೆ. ಯಾರಲ್ಲಿ ಸೂಕ್ಷ್ಮ ಆತ್ಮತತ್ತ್ವದ, ಗೂಢ ಆಧ್ಯಾತ್ಮದ ಗಂಧ-ಗಾಳಿಯಿಲ್ಲವೋ ಅಂಥವರ ಭಾಷಣಗಳು ಬೀರುವ ಪರಿಣಾಮವು ಕೇವಲ ಮೋಹವನ್ನು ವೃದ್ಧಿಸುವುದಷ್ಟೇ ಆಗಿದೆ. ಸನ್ಮಾರ್ಗವನ್ನು ತೋರಿಸುವ ಸುವಕ್ತಾ ಈ ಜಗತ್ತಿನಲ್ಲಿ, ಈ ಕಲಿಯುಗದಲ್ಲಿ ದುರ್ಲಭ. ಇದರ ಬಗ್ಗೆ ಸಾಗಾರ ಧರ್ಮಾಮೃತದಲ್ಲಿ ಬರೆದುದನ್ನು ಇಲ್ಲಿ ನೋಡಿ;-

**ಕಲಿಪ್ರಾವೃಷಿ ಮಿಥ್ಯಾದೃಂಗ್ ಮೇಘ ಚ್ಛತ್ರಾಸು ದಿಕ್ಷ್ವಿಹ ।**
**ಖದ್ಯೋತವತ್ ಸುದೇಷ್ಟಾರೋ ಹಾ ! ದ್ಯೋತಂತೇ ಕ್ವಚಿತ್-ಕ್ವಚಿತ್ ॥**

ನಿಜವಾದ ಧರ್ಮೋಪದೇಶ ಮಾಡುವ ವಕ್ತಾ ಮಿಂಚಿನಂತೆ, ಎರಡೋ-ನಾಲ್ಕೋ

ಮಂದಿ ಮಾತ್ರ ಕಾಣಸುತ್ತಾರೆ. ಸಂಸಾರದಿಂದ ಪಾರು ಮಾಡುವ ಉಪದೇಶ ಕೊಡುವವರು ಕಡಿಮೆ ಜನ ಸಿಗುತ್ತಾರೆ. ಆದರೆ ಕಷಾಯವನ್ನು ಹೆಚ್ಚಿಸುವವರು, ರಾಗವನ್ನು ಹೆಚ್ಚಿಸುವವರು, ಶೃಂಗಾರವನ್ನು ಹೆಚ್ಚಿಸುವವರು ಬಹಳ ಜನ ದೊರಕುತ್ತಾರೆ, ಅಲ್ಲಲ್ಲಿ ಸಿಗುತ್ತಾರೆ.

ಆಚಾರ್ಯ ಸಮಂತಭದ್ರರು ಸಾಧುಗಳಿಗಾಗಿ ಜ್ಞಾನ ಮತ್ತು ಧ್ಯಾನ ಎಂಬ ಎರಡು ಬಂಧನಗಳನ್ನು ಹೇಳಿದ್ದಾರೆ. ಜ್ಞಾನ ಮತ್ತು ಧ್ಯಾನ ಇವುಗಳ ಹೊರತಾಗಿ ಇತರ ಯಾವುದೇ ಪ್ರಪಂಚದಲ್ಲಿ ಇಲ್ಲದಿರುವವನು ಯಾವನೋ ಅವನೇ ವಕ್ತಾ ಆಗಬಲ್ಲನು.

**ಜ್ಞಾನ-ಧ್ಯಾನ ತಪೋರಕ್ತಃ ತಪಸ್ವೀ ಸ ಪ್ರಶಸ್ಯತೇ ।**

ತಮ್ಮಲ್ಲರಲ್ಲೂ ಮನೆ-ಕಟ್ಟಡ-ಅಂಗಡಿ, ಚಿನ್ನ ಬೆಳ್ಳಿ, ವಾಹನ-ಕುದುರೆ, ಆಸ್ತಿ-ಪಾಸ್ತಿ, ಅನ್ನ-ಪಾನಾದಿ ಎಲ್ಲವೂ ಇವೆಯಾದರೂ ನೀವು ಮತ್ತೇಕೆ ಇಲ್ಲಿಗೆ ಬಂದಿರಿ ? ನಿಮಗೆ ಯಾವ ವಿಚಾರದಲ್ಲಿ ಕಡಿಮೆಯಿತ್ತು ?

ಇವೆಲ್ಲ ಇದ್ದರೂ ಕೂಡಾ ಯಾವ ವಸ್ತು ತಮ್ಮಲ್ಲಿಲ್ಲವೋ ಅದನ್ನು ಪಡೆಯುವುದಕ್ಕಾಗಿ (ಪ್ರವಚನದಲ್ಲಿ) ಬರುತ್ತಿದ್ದೀರಿ. ಇಲ್ಲಿಗೆ ಬಂದರೆ ಜ್ಞಾನ ಮತ್ತು ಚಾರಿತ್ರ ಇವೆರಡನ್ನೂ ಪಡೆಯಬಹುದು. ಯಾವುದು ನಿಮ್ಮಲ್ಲಿಲ್ಲವೋ ಅದು ನಮ್ಮಲ್ಲಿದೆ. ಅದಕ್ಕಾಗಿ ಇಲ್ಲಿಗೆ ಬರುತ್ತೀರಿ.

ಶಾಸ್ತ್ರಗಳಲ್ಲಿ ಯಥಾರ್ಥ, ಪ್ರಾಮಾಣಿಕ ವರ್ಣನೆ ಮಾಡುವುದು ತುಂಬಾ ಕಷ್ಟ ವಕ್ತಾರನಿಗೆ ಕಡಿಮೆಯೂ ಅಲ್ಲ, ಜಾಸ್ತಿಯೂ ಅಲ್ಲ, ಹೇಗಿದೆಯೋ ಹಾಗೆಯೇ ಯಥಾತಥ್ಯವನ್ನು ಹೇಳಬೇಕು. ಆಚಾರ್ಯ ಸಮಂತಭದ್ರರು ರತ್ನಕರಂಡ ಶ್ರಾವಕಾಚಾರದಲ್ಲಿ ಹೀಗೆ ಹೇಳುತ್ತಾರೆ;-

**ಅನ್ಯೂನಮತಿರಿಕ್ತಂ ಯಥಾತಥ್ಯಂ ವಿನಾ ಚ ವಿಪರೀತಾತ್ ।**
**ನಿಃ ಸಂದೇಹಂ ವೇದ ಯದಾಹುಸ್ತ ಜ್ಞಾನಮಾಗಮಿನಃ ॥**

ಹೇಗೆ ಹಾವಿನ ತಲೆಯ ಮೇಲಿರುವ ಮಣಿಯನ್ನು ಅಲ್ಲಿಂದ ಕಿತ್ತುಕೊಳ್ಳಲು ಕಠಿಣವೋ, ಅದರಂತೆ ತತ್ತ್ವದ ವಿಚಾರ ಮಾತಾಡುವುದು ಕಠಿಣವಾಗಿರುತ್ತದೆ. ಅದು ಗುರು ಪರಂಪರೆಯಿಂದ, ಸ್ವಾಧ್ಯಾಯದಿಂದ, ಶಂಕೋಪಶಂಕೆಯಿಂದ ಮಾತ್ರ ಪ್ರಾಪ್ತವಾಗುತ್ತದೆ. ಕೇವಲ ಪುಟಗಳನ್ನು ಮಗುಚುವುದರಿಂದ ಶಾಸ್ತ್ರ ಜ್ಞಾನ ಉಂಟಾಗಲಾರದು. ಅರ್ಥಶಾಸ್ತ್ರ ವಿಷಯವನ್ನು ಓದುವವರು, ಅದರಲ್ಲಿ ಪಿ.ಹೆಚ್.ಡಿ. ಮಾಡುವವರು ಉದ್ಯೋಗಪತಿಗಳಲ್ಲಿ ನೌಕರಿ ಮಾಡುತ್ತಾರೆ. ಕೇವಲ ಅರ್ಥಶಾಸ್ತ್ರ ಓದುವುದರಿಂದ ಯಾವನೂ ಧನವಂತ, ಉದ್ಯೋಗಪತಿ ಆಗಲಾರ. ಅನುಭವ ಮತ್ತು ಪರಿಪಕ್ವ ಜ್ಞಾನದಿಂದ, ಉದ್ಯಮದಿಂದ ಮಾತ್ರವೇ ಉದ್ಯೋಗಪತಿಯಾಗಬಲ್ಲ. ಹಾಗೆಯೇ ತತ್ತ್ವಜ್ಞಾನ ಕೂಡಾ ಪಕ್ವಜ್ಞಾನವಾಗಬೇಕು. ಮಾಗಿದ ಫಲ ಮಾತ್ರವೇ ರುಚಿಕರವಾಗಿರುತ್ತದೆ.



**ಪಕ್ವಜ್ಞಾನ ದೇಸೇವ್ಯಃ ಗುಣಾಸರ್ವೇಷಿ ಸಿದ್ಧಯದಾ ।**
**ತತ್ತ್ವಜ್ಞಾನವಿಹೀನಂ ದುಃಖಮೇವ ಹಿ ಶಾಶ್ವತಂ ॥**

ಯಾರ ಹತ್ತಿರ ತತ್ತ್ವಜ್ಞಾನವಿಲ್ಲವೋ, ಧರ್ಮಜ್ಞಾನವಿಲ್ಲವೋ, ಅವನಲ್ಲಿ ಸಮಸ್ತ ವೈಭವವಿದ್ದರೂ ದುಃಖಿಯಾಗಿರುತ್ತಾನೆ. ಇಲ್ಲಿ ಮಾತ್ರವಲ್ಲ ಸ್ವರ್ಗದಲ್ಲೂ ಆತ ದುಃಖಿಯೇ. ತತ್ತ್ವಜ್ಞಾನಿಯು ನರಕದಲ್ಲಿದ್ದರೂ ಸುಖಿ, ಗುಡಿಸಿಲಿನಲ್ಲಿದ್ದರೂ ಸುಖಿ.

ತಪಸ್ಸು ತತ್ತ್ವಜ್ಞಾನ ಇವೆಲ್ಲಾ ಒಂದು ಸಾಧನೆ. ಇದ್ದಲಿನ ಗಣಿಯಿಂದಲೇ ವಜ್ರ ಸಿಗುವುದು. ಅದನ್ನು ಸಾಣೆಗಲ್ಲಿಗೆ ಹಾಕಿ ಉಜ್ಜಿದಾಗ ಅದರಲ್ಲಿ ಹೊಳಪು ಬರುತ್ತದೆ. ಅಂತೆಯೇ ಆತ್ಮರೂಪೀ ವಜ್ರವನ್ನು ಪ್ರಕಟಗೊಳಿಸಲು, ಜ್ಞಾನವೆಂಬ ವಜ್ರವನ್ನು ಪ್ರಕಟಗೊಳಿಸಲು ತತ್ತ್ವಜ್ಞಾನದಿಂದ ಅದನ್ನು ಸಮ್ಯಕ್‌ದರ್ಶನ-ಜ್ಞಾನ-ಚಾರಿತ್ರದ ಸಾಣೆಯ ಮೇಲೆ ಏರಿಸಬೇಕು, ಉಜ್ಜಬೇಕು. ತೀರ್ಥಂಕರರು ಕೂಡಾ ಬಹಳ ತಪಸ್ಸು ಮಾಡಿ ಜ್ಞಾನ ರೂಪೀ ವಜ್ರವನ್ನು ಪ್ರಕಟಗೊಳಿಸಿದರು.

ತತ್ತ್ವಜ್ಞಾನವನ್ನು ಗ್ರಹಣ ಮಾಡಲು ಬಾಹ್ಯ ನಿಮಿತ್ತವು ಯಾವುದೇ ಆಗಿರಬಹುದು. ಆದರೆ ಉಪಾದಾನ ಶಕ್ತಿಯು ತನ್ನದೇ ಆಗಿರುತ್ತದೆ. ನಿಶ್ಚಯದಿಂದ ಆತ್ಮನ ಗುರು ಆತ್ಮನೇ ಆಗಿರುತ್ತಾನೆ. ವ್ಯಕ್ತಿ ಸ್ವಯಂ ತನ್ನ ಗುರು. ನಾವು ಯಾರೊಡನೆಯೂ ''ಈಗ ದೀಕ್ಷೆ ತೆಗೆದುಕೊಳ್ಳಿ'' ಎಂದು ಹೇಳಬಹುದು. ಈ ನಮ್ಮ ಉಪದೇಶವನ್ನು ಒಬ್ಬ ಕೇಳಬಹುದು, ಆದರೆ ಆಚರಣೆಯಲ್ಲಿ ತರುವುದಿಲ್ಲ. ಅದೇಕೆ ? ಎಲ್ಲಿಯವರೆಗೆ ಅವನ ಆತ್ಮನು ಅದನ್ನು ಸ್ವೀಕಾರ ಮಾಡುವುದಿಲ್ಲವೋ ಅಲ್ಲಿಯವರೆಗೆ ಆ ಉಪದೇಶವು ಜಾರಿಯಲ್ಲಿರುವುದಿಲ್ಲ. ಆಗ ಅವನು ''ನನಗೆ ಬೇರೆ ಏನಾದರೂ ಚಿಕ್ಕ ಪುಟ್ಟ ನಿಯಮಗಳನ್ನು ತಿಳಿಸಿರಿ. ನಾನು ದೀಕ್ಷೆ ತೆಗೆದುಕೊಳ್ಳುವುದಿಲ್ಲ'' ಎಂದು ಹೇಳಬಹುದು. ಇದು ನಮ್ಮ ಉಪದೇಶದ ವಿಷಯವಲ್ಲ ಅಥವಾ ನಮ್ಮ ಸಾಮರ್ಥ್ಯವನ್ನು ತೋರಿಸುವಂತಹ ವಿಚಾರವೂ ಅಲ್ಲ. ಅದು ಯಾವ ದಿನ ತನ್ನ ಇಚ್ಛೆಯಂತೆ ಅವನಿಗೆ ಉಂಟಾಗುತ್ತದೋ ಮತ್ತು ಎಷ್ಟು ಬೇಗ ಉಂಟಾಗುತ್ತದೋ ಅದು ಅವನಿಗೇ ಸೇರಿದ ಸಂಗತಿ. ಆತ್ಮನೇ ಆತ್ಮನ ಗುರು.

**ಆತ್ಮೇವ ಗುರುಃ ಆತ್ಮನಃ ................ ।**

ಆತ್ಮನು ಮಂಜೂರು ಮಾಡಿದಾಗ ಮಾತ್ರ ಅದನ್ನು ಎಂದರೆ ಆ ಉಪದೇಶವನ್ನು ಸ್ವೀಕಾರ ಮಾಡಬಹುದು. ಹೇಳಿದೊಡನೆ ಸ್ವೀಕಾರ ಮಾಡುವುದು, ಬಟ್ಟೆಯನ್ನು ಕಳಚಿ ಮುನಿಯಾದಂತೆ ಮಾಡುವುದು ಎಂಬುದು ಇದರ ಅರ್ಥವಲ್ಲ. ನೀವು ಮಕ್ಕಳಿಗೆ ''ಗಣಿತ ವಿಷಯ ಕಲಿಯಿರಿ'' ಎಂದು ಹೇಳಬಹುದು. ಆದರೆ ಆ ಮಕ್ಕಳಿಗೆ ಅದು ಹಿಡಿಸಿದರೆ ಮಾತ್ರ ಅವರು ಕಲಿಯುತ್ತಾರೆ. ಇಲ್ಲವಾದರೆ ಅವರ ರುಚಿಗನುಗುಣವಾಗಿ ಕಲಿಯುತ್ತಾರೆ. ಒಬ್ಬ ಚಿಕ್ಕ ಬಾಲಕನಾದರೂ ಕೂಡಾ ಅವನದೇ ಆದ ರುಚಿಯಿರುತ್ತದೆ. ಅದರಂತೆ ಅವನು ತನ್ನ ವಿವೇಕದಿಂದ ಬೇಕಾದುದನ್ನು ಸ್ವೀಕರಿಸುತ್ತಾನೆ. ಅದು ಅವನ ರುಚಿಗನುಸಾರವಾಗಿರುತ್ತದೆ.

ವೀತರಾಗ ಭಗವಂತರ ದ್ವಾದಶಾಂಗವಾಣಿ, ಜಿನವಾಣಿಯಿಂದ ಆಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿದರು. ಆಗಲೂ ಅವರು ಬರೆದಿರುವುದು ಹೀಗಿರುತ್ತದೆ;- "ನಾನು ಭಗವಂತನ ವಾಣಿಯನ್ನು ನನ್ನ ಅನುಭವದಿಂದ ಬರೆದಿರುತ್ತೇನೆ. ಅದರಲ್ಲಿ ಏನಾದರೂ ಲೋಪವಾಗಿದ್ದರೆ, ದೋಷ ಬಂದಿದ್ದರೆ ಅದು ನನ್ನದು. ನಾನು ಛಲದಿಂದ ವರ್ತಿಸಬಾರದು. ಏಕೆಂದರೆ ವೀತರಾಗ ಭಗವಂತನ ವಾಣಿಯೊಂದಿಗೆ ಛಲದಿಂದ ವರ್ತಿಸುವುದು ಸರಿಯಿಲ್ಲ.

**ತಂ ಏಯತ್ತವಿಹತ್ತಂ ದಾಏಹಂ ಅಪ್ಪಣೋ ಸವಿಹವೇಣ ।**

**ಜದಿ ದಾಏಜ್ಜ ಪಮಾಣಂ ಚುಕ್ಕೇಜ್ಜ ಛಲಂ ಣ ಘೇತವ್ವಂ ॥**

ಸಂಸಾರದಲ್ಲಿ ಛಲವು ಬಹಳವಾಗಿ ನಡೆಯುತ್ತದೆ. ಯಾರಲ್ಲಿ ಭ್ರಮೆ ಹುಟ್ಟಿರುತ್ತದೋ, ಅದೇ ಛಲ. "ಶ್ಲೋಕವಾರ್ತಿಕ"ದಲ್ಲಿ ಇದಕ್ಕೊಂದು ಉದಾಹರಣೆ ಹೀಗಿದೆ- "ನವಕಂಬಲವಾನ್ ಬ್ರಾಹ್ಮಣಃ' ಇದೊಂದು ಸೂತ್ರ ಇದರ ಅರ್ಥ ಹೀಗಿದೆ- ನವ ಕಂಬಳಿವಾಲ ಬ್ರಾಹ್ಮಣ ಅರ್ಥಾತ್ ಯಾರ ಹತ್ತಿರ ಹೊಸ ಕಂಬಳಿಯಿದೆಯೋ ಆ ಬ್ರಾಹ್ಮಣನು. ಆದರೆ "ನವಕಂಬಲ್‌ವಾನ್" ಎಂಬುದನ್ನು ಒಂಬತ್ತು ಕಂಬಳಿಗಳನ್ನು ಹೊಂದಿದವನು ಎಂದು ಅರ್ಥೈಸಲೂ ಬರುತ್ತದೆ. ಅದು ಛಲ. ಏಕೆಂದರೆ ಅದು ಭ್ರಮೆಯನ್ನು ಉತ್ಪನ್ನಗೊಳಿಸುತ್ತದೆ.

ಆಚಾರ್ಯ ಕುಂದಕುಂದರು, ಆಚಾರ್ಯ ಸಮಂತಭದ್ರರು ಮೊದಲಾದವರು ಮಹಾನ್ ಆಚಾರ್ಯರಾಗಿದ್ದರು. ಆದ ಕಾರಣ ನಮ್ಮ ಸಾಧು ಸಂಸ್ಥೆಯು ಬಹಳ ಗರಿಮಾಮಯಿಯಾಗಿಯೇ ಉಳಿಯಿತು. ಏತನ್ಮಧ್ಯೆ ಮೊಗಲರ ಕಾಲದಲ್ಲಿ ಸಾಧು ಪರಂಪರೆ ಕ್ಷೀಣವಾಯಿತು. ಪಂಡಿತ್ ಫೂಲ್‌ಚಂದ್ರ ಸಿದ್ಧಾಂತ ಶಾಸ್ತ್ರಿಗಳು ಮೂರು ಚಾತುರ್ಮಾಸಗಳಲ್ಲಿ ಡಿಲ್ಲಿ, ಇಂಧೋರ್ ಮತ್ತು ಮುಂಬಯಿಯಲ್ಲಿ ನಮ್ಮೊಂದಿಗಿದ್ದರು. ಅವರು ಹೀಗೆ ಹೇಳುತ್ತಿದ್ದರು- "ಮಹಾರಾಜ್, ಈ ಶಾಸ್ತ್ರಗಳ ಸಿಂಹಾಸನವು ಆಚಾರ್ಯರದಾಗಿತ್ತು. ಇದು ನಮ್ಮ ಪಂಡಿತರ ಬಳಿಗೆ ಬಂತು. ಇದರಿಂದಲೇ ಎಲ್ಲಾ ವಿವಾದಗಳೂ ಎದ್ದು ನಿಂತವು. ಇದಕ್ಕೆ ನಾವು ಅಧಿಕಾರಿಗಳಲ್ಲ, ನಾವು ಗೃಹಸ್ಥರು. ಈ ಸಿಂಹಾಸನವಾದರೋ ತಮ್ಮಂತಹ ಜನರದಾಗಿತ್ತು. ತಾವು ಅದನ್ನು ಬಿಟ್ಟುಕೊಟ್ಟಿರಿ. ಮತ್ತೆ ನಾವು ಯಾವಾಗ ಹಿಡಿದುಕೊಂಡೆವೋ ಆಗ ಎಲ್ಲಾ ವಿವಾದಗಳೂ ಎದ್ದು ನಿಂತವು. ಧವಲಾದಲ್ಲಿ ಈ ರೀತಿ ಹೇಳಿದೆ;-

**"ದಯಾಬುದ್ಧೀಏ ಸಾಹೂಣಂ ಣಾಣ-ದಂಸಣ-ಚಾರಿತ್ತಪರಿಚ್ಚಾಗೋ ದಾಣಂ ಪಾಸುಗ ಪರಿಚ್ಚಾಗದ ಣಾಮ. ಣ ಚೇದಂ ಕಾರಣಂ ಘರತ್ಥೇಸು ಸಂಭವದಿ, ತತ್ಥ ಚರಿತ್ತಾಭಾವಾದೋ ತಿರಯಣೋವದೇಸೋ ಏಣ ಘರತ್ಥೇಸು ಅತ್ಥಿ, ತೇಸಿಂ "ದಿಟ್ಠಿವಾದದಿ" ಉವರಿಮಸುತ್ತೋವದೇಸಣೇ ಅಹಿಯಾರಾಭಾವಾದೋ. ತದೋ ಏದಂ ಕಾರಣಂ ಮಹೇಸಿಣಂ ಚೇವ ಹೊಂತಿ."**



ಆದ ಕಾರಣ ಗೃಹಸ್ಥರಿಗೆ ಉಚ್ಚ ಕೋಟಿಯ ಗೂಢ ಆಧ್ಯಾತ್ಮಿಕ ಉಪದೇಶ ಕೊಡುವ ಅಧಿಕಾರವಿಲ್ಲವೆಂದು ಹೇಳಲಾಗಿದೆ. ಅದು ಸಾಮಾನ್ಯ ಸಾಧುಗಳಿಗೂ ಇಲ್ಲ, ಆ ಅಧಿಕಾರವು ಉಚ್ಚ ಅಧ್ಯಯನ ಮಾಡುವ ಆಚಾರ್ಯರಿಗೆ ಮಾತ್ರವೇ ಇರುತ್ತದೆ. ಎಲ್ಲರೂ ಸ್ವಾಧ್ಯಾಯ ಮಾಡಬೇಕು. ಶಾಸ್ತ್ರವೇ ಮಿತ್ರ, ಅನ್ಯ ಯಾವುದೂ ಮಿತ್ರವಲ್ಲ, ಸ್ವಯಂ ಕಲ್ಯಾಣಕ್ಕೆ ಸ್ವಾಧ್ಯಾಯ ಅವಶ್ಯಕ. ಮಗುವಾದರೂ ಕೂಡಾ ಎಲ್ಲಿಯವರೆಗೆ ಇತರರ ಕೈಗಳಿಂದ ತಿನ್ನುತ್ತದೆ. ಕುಡಿಯುತ್ತದೆ. ಈಗ ನೀವು ಮಕ್ಕಳಲ್ಲ, ಎಲ್ಲಿಯವರೆಗೆ ಇತರರಿಂದ ಶಾಸ್ತ್ರಗಳನ್ನು ಕೇಳಿಕೊಳ್ಳಬಲ್ಲಿರಿ ? ಆದ ಕಾರಣವೇ ಸ್ವಯಂ ಶಾಸ್ತ್ರಸ್ವಾಧ್ಯಾಯ ಮಾಡಿರಿ. ಆಗಲೇ ಕಲ್ಯಾಣವಾಗುವುದು.

---

## ವಿದ್ಯಾನಂದ ವಚನಾಮೃತ

*ನಿಮ್ಮಲ್ಲಿ ಅಭಿಮಾನವಿದೆ. ಆದರೆ ಧರ್ಮಗ್ರಂಥ ಹೇಳಿದಂತೆ ನಡೆದುಕೊಳ್ಳುವ ಪರಿಣಾಮ ಭಾರಿ ಕಡಿಮೆಯಿದೆ. ನಾನು ಕೆಲವು ವರ್ಷಗಳ ಹಿಂದೆ ಡಿಲ್ಲಿಯಲ್ಲಿದ್ದಾಗ ಅನೇಕರು ಕುಳಿತಿದ್ದ ಒಂದು ವಿಮಾನ ಹಾಳಾಯಿತು. ಅದು ೨೬ ಏಪ್ರಿಲ್ ೧೯೭೬ ರಂದು. ಇನ್ನೇನು ಬೀಳಬಹುದು ಎಂದು ಸೂಚನೆ ಕೊಟ್ಟ ಕೂಡಲೇ ಇಪ್ಪತ್ತು ಜನ ಮುಸಲ್ಮಾನರು ಕುರಾನ್ ಓದಲಿಕ್ಕೆ ಪ್ರಾರಂಭಿಸಿದರು. ೩೦ ಜನ ಹಿಂದುಗಳು ಗೀತೆ ತೆಗೆದು ಓದುತ್ತಿದ್ದರು. ೨೫ ಜನ ಕ್ರಿಶ್ಚಿಯನ್ನರು ಬೈಬಲ್ ಓದಲು ತೊಡಗಿದರು. ಆ ವಿಮಾನದಲ್ಲಿ ೩ ಜನ ಜೈನರಿದ್ದರು. ಅವರೆಲ್ಲ ಮುಖ ಮುಖ ನೋಡುತ್ತಿದ್ದರು. ಬಾಗಿಲು ತೆರೆದರೆ ಹೊರಗೆ ಹಾರಿಬಿಡುವ ಎಂಬುದು ಅವರ ಯೋಚನೆಯಾಗಿತ್ತು. ಅವರ ಬಳಿ ಯಾವುದೇ ಜೈನ ಧರ್ಮದ ಪುಸ್ತಕವಿರಲಿಲ್ಲ, ಇಂಗ್ಲೀಷ್ ಪೇಪರಿನವರು ಇದನ್ನು ವಿಮರ್ಶೆ ಮಾಡಿದ್ದರು. ತಮ್ಮ ಧರ್ಮ ಅಹಿಂಸೆ ಎಂದು ಭಾರಿ ದೊಡ್ಡದಾಗಿ ಹೇಳುತ್ತಾರೆ. ಸಾವು ಸನ್ನಿಹಿತವಾದಾಗ ಈ ಜೈನರು ಹೆದರಿಕೊಂಡಿದ್ದರು. ಉಳಿದವರು ಹೆದರಿಕೊಳ್ಳದೆ ಅವರವರ ದೇವರು ಹೇಳಿದಂಥ ಧರ್ಮದ ವಾಕ್ಯಗಳನ್ನು ಓದುತ್ತಿದ್ದರು.*

---

*ಸ್ವಾಧ್ಯಾಯವೂ ನಿಮ್ಮ ಕರ್ಮಗಳನ್ನು ನಾಶ ಮಾಡುವುದು. ಸಮ್ಯಗ್‌ಜ್ಞಾನವೇ ಯಥಾರ್ಥವಾದ ಜ್ಞಾನ. ತಾವು ಪ್ರತಿನಿತ್ಯ ತಮ್ಮ ಸಮಯದಲ್ಲಿ ಸ್ವಲ್ಪ ಭಾಗವನ್ನು ಆತ್ಮನಿಗೋಸ್ಕರ ತೆಗೆದಿಟ್ಟುಕೊಳ್ಳಿ. ಇಪ್ಪತ್ತಮೂರುವರೆ ಗಂಟೆಯನ್ನು ನಿಮ್ಮ ಶರೀರಕ್ಕೂ ಸಂಸಾರಕ್ಕೂ ವಿನಿಯೋಗಿಸಿ, ಉಳಿದ ಮೂವತ್ತು ನಿಮಿಷವನ್ನಾದರೂ ನಿಮ್ಮ ಆತ್ಮನಿಗೆ ಕೊಡಲಾರಿರಿ ಎಂದಾದರೆ ನೀವು ಮನುಷ್ಯರಾಗಿ ಹುಟ್ಟಿ ಏನು ಪ್ರಯೋಜನ ?*